

ಭ್ರಷ್ಟಾಚಾರ

ಪ್ರಜಾಪ್ರಭುತ್ವಕ್ಕೊಂದು ಕಂಟಕ

ನ್ಯಾ. ಸಂತೋಷ ಹೆಗಡೆ
ವಿಶೇಷ ಸಂದರ್ಶನ


'ಬೇಕು
ಪ್ರಬಲ ಲೋಕಾಯುಕ್ತ'

ಭ್ರಷ್ಟಾಚಾರದ ರಾಜಕೀಯ ಅರ್ಥಶಾಸ್ತ್ರ
- ಪ್ರಕಾಶ್ ಕಾರಟ್

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೊರೆದು
ಹಾಕುವ ಭ್ರಷ್ಟಾಚಾರವೆಂಬ ವ್ಯಾಧಿ
- ಜಿ.ವಿ.ಶ್ರೀರಾಮರೆಡ್ಡಿ







ಖಾಸಗಿ ಕ್ಷೇತ್ರದ ಭ್ರಷ್ಟತೆಯ ವಿರುದ್ಧವೂ
ಹೋರಾಟ ಅಗತ್ಯ - ಬರಗೂರು

ಉದಾರೀಕರಣ
ಭ್ರಷ್ಟಾಚಾರದ ಗಂಗೋತ್ರಿ

ಕರ್ನಾಟಕದ ರಾಜಕೀಯಕ್ಕೆ ಹೊಸ
ತಿರುವು ಬೇಕಿದೆ - ಬಿಜೆಕೆ ನಾಯರ್

log :janashakthi.wordpress.com e-mail : js_weekly@yahoo.com **ವಿಶೇಷ ಸಂಚಿಕೆ 2011** ಸಂಪುಟ 5 ಸಂಚಿಕೆ 47-48 ನವೆಂಬರ್ 27, 2011 ಪುಟ 68 ರೂ. 15/-

ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ



ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಜಯನಗರ, ಬೆಂಗಳೂರು-560 011.
ದೂರವಾಣಿ ಸಂಖ್ಯೆ: 26632792; 26542307 ಫ್ಯಾಕ್ಸ್: 26542308



1. ದೇವದಾಸಿ ಪುನರ್ವಸತಿ ಯೋಜನೆ : 'ದೇವದಾಸಿ ಪದ್ಧತಿಯು ಒಂದು ಸಮಾಜಿಕ ಅನಿಷ್ಟ ಪದ್ಧತಿಯಾಗಿದ್ದು, ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಿ ಅವರ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ / ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

2. ಉದ್ಯೋಗಿನಿ ಯೋಜನೆ: ಉದ್ಯೋಗಿನಿ ಯೋಜನೆಯಲ್ಲಿ ಮಹಿಳೆಯರು ಸ್ವಯಂ ಉದ್ಯೋಗ ಹೊಂದಲು, ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಗರಿಷ್ಟ ರೂ.1.00 ಲಕ್ಷ ಆರ್ಥಿಕ ನೆರವನ್ನು ಬ್ಯಾಂಕುಗಳ ವತಿಯಿಂದ ಸಾಲ ಹಾಗೂ ನಿಗಮದಿಂದ ಸಹಾಯ ಧನವನ್ನು ನೀಡಲಾಗುತ್ತಿದೆ.



3. ಮಹಿಳಾ ತರಬೇತಿ ಯೋಜನೆ: ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ವಿವಿಧ ರೀತಿಯ ತರಬೇತಿಗಳಾದ ಕಂಪ್ಯೂಟರ್ ತರಬೇತಿ, ಬ್ಯೂಟಿ ಪಾರ್ಲರ್, ಹೊಲಿಗೆ ತರಬೇತಿ, ಆಹಾರ ಸಂಸ್ಕರಣೆ, ಇನ್ನೂ ಮುಂತಾದ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

4. ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ: ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಹಾದಿಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಲಿಂಗತಾರತಮ್ಯದ ಕಾರ್ಯಾಗಾರ ಏರ್ಪಡಿಸುವುದು ಮತ್ತು ಮಹಿಳೆಯರಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಸಲಹೆ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

5.ಮಾರುಕಟ್ಟೆ ನೆರವು ಯೋಜನೆ : ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುವುದರ ಮೂಲಕ ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ವೇದಿಕೆಯನ್ನು ಕಲ್ಪಿಸುತ್ತದೆ.

6. ಎನ್.ಹೆಚ್.ಎಫ್.ಡಿ.ಸಿ. ಯೋಜನೆ : ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಚಾನಲೈಸಿಂಗ್ ಏಜೆನ್ಸಿಯಾಗಿ ಸರ್ಕಾರ ನೇಮಿಸಿರುತ್ತದೆ. ಈ ಯೋಜನೆಯಿಂದ ಆರ್ಥಿಕ ನೆರವನ್ನು ಪಡೆದು ರಾಜ್ಯದ ಅಂಗವಿಕಲರಿಗೆ ಸಾಲ ಸೌಲಭ್ಯ ಒದಗಿಸುವ ಮೂಲಕ ಆದಾಯ ತರುವಂತಹ ಚಟುವಟಿಕೆಗಳನ್ನು ಪ್ರಾರಂಭಿಸಿ ಸ್ವ ಉದ್ಯೋಗಿಗಳಾಗಲು ಸಹಾಯ ಮಾಡಲಾಗುತ್ತಿದೆ.

7. ಸ್ವಸಹಾಯ / ಸ್ತ್ರೀಶಕ್ತಿ ಗುಂಪುಗಳ ಆರ್ಥಿಕ ಸ್ವಾವಲಂಬನೆಗಾಗಿ ಮೈಕ್ರೊ ಕ್ರೆಡಿಟ್ ಯೋಜನೆ (ವೈಯುಕ್ತಿಕ ಕಿರು ಸಾಲ ಯೋಜನೆ) ಸ್ವಸಹಾಯ/ಸ್ತ್ರೀಶಕ್ತಿ ಗುಂಪುಗಳ ಆರ್ಥಿಕ ಹಾಗೂ ಸಾಮಾಜಿಕ ಸುಧಾರಣೆಗಾಗಿ ಶೇ.6. ಬಡ್ಡಿ ದರದಲ್ಲಿ ಸಾಲ ದೊರಕಿಸಲು ಆಯ್ದ ಸ್ವಸಹಾಯ / ಸ್ತ್ರೀಶಕ್ತಿ ಗುಂಪುಗಳ ಪ್ರತಿ ಸದಸ್ಯರಿಗೆ ಕನಿಷ್ಟ ರೂ. 5000/- ಗಳ ಸಾಲವನ್ನು ಗುಂಪು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಶೇ 6ರಷ್ಟು ಬಡ್ಡಿ ದರದಲ್ಲಿ ಒದಗಿಸಲಾಗುವುದು.

8. ಸ್ವ ಉದ್ಯೋಗ ಮಾರ್ಗದರ್ಶನ ಸಹಾಯವಾಣಿ: ಮಹಿಳೆಯರು ಸ್ವಯಂ ಉದ್ಯೋಗ, ತರಬೇತಿ, ಮಾರುಕಟ್ಟೆ/ನೆರವು ಮತ್ತು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ನಿಗಮದ ಕೇಂದ್ರ ಕಛೇರಿಯಲ್ಲಿ ಸ್ವ ಉದ್ಯೋಗ ಮಾರ್ಗದರ್ಶನ ಸಹಾಯವಾಣಿಯನ್ನು ಪ್ರಾರಂಭಿಸಲಾಗಿದೆ. ದೂರವಾಣಿ ಸಂಖ್ಯೆ 18004259550.

9.ಬೀದಿ ವ್ಯಾಪಾರಿಗಳಿಗೆ ಕಿರುಸಾಲ ಯೋಜನೆ: ಬೀದಿ ವ್ಯಾಪಾರದಲ್ಲಿ ನಿರತರಾಗಿರುವ ಮಹಿಳೆಯರಿಗೆ ದೈನಂದಿನ ಬೇಡಿಕೆಯನ್ನು ಪರಿಗಣಿಸಿ ಸಾಲ ಸೌಲಭ್ಯ ಕಲ್ಪಿಸುವುದು. ಪ್ರಾಯೋಗಿಕವಾಗಿ ಮೈಸೂರು, ಶಿವಮೊಗ್ಗ, ಗದಗ ಪಟ್ಟಣಗಳಲ್ಲಿ ಅನುಷ್ಠಾನ.

ಸರೋಜಿನಿ ಭಾರದ್ವಾಜ್	ವ್ಯವಸ್ಥಾಪಕ ನಿರ್ದೇಶಕರು
ಅಧ್ಯಕ್ಷರು, ಕ.ರಾ.ಮ.ಅ.ನಿಗಮ	ಕ.ರಾ.ಮ.ಅ.ನಿಗಮ

ಜನಶಕ್ತಿ

ಕನ್ನಡ ವಾರಪತ್ರಿಕೆ

ಒಳ ಪುಟಗಳಲ್ಲಿ

0 ಕುಣಿವ ಕಾಂಚಾಣದ ಜಾಡು ಹಿಡಿದು
–ಎಸ್.ವೈ.ಗುರುಶಾಂತ್ 02

0 ಭ್ರಷ್ಟಾಚಾರದ ರಾಜಕೀಯ ಅರ್ಥಶಾಸ್ತ್ರ
– ಪ್ರಕಾಶ್ ಕಾರಟ್ 06

0 ಭ್ರಷ್ಟಾಚಾರ: ಪ್ರಜಾಪ್ರಭುತ್ವಕ್ಕೊಂದು ಕಂಟಕ
– ಪ್ರೊ ಕೆ.ಎನ್.ಪಣಿಕ್ಕರ್ 08

0 'ಭಾರತ ಮಾತೆ'ಗೆ ಚೂರಿ ಹಾಕುವ
ಸಂಘ ಪರಿವಾರದ 'ಸುಪುತ್ರರು'
– ಜಯ 14

0 ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಕೊರೆದು ಹಾಕುವ
ಭ್ರಷ್ಟಾಚಾರವೆಂಬ ವ್ಯಾದಿ
– ಜಿ.ವಿ.ಶ್ರೀರಾಮರೆಡ್ಡಿ 18

0 ಅಬ್ಬರಿಸಿದ ಗಣಿಗಳಲ್ಲೀಗ ನೀರವ ಮೌನ !!
ಬಳ್ಳಾರಿಗೆ ಸಿಪಿಐ(ಎಂ) ಎಂ.ಪಿ.ಗಳ ಭೇಟಿ
ಅದಿರು ದರೋಡೆಯ ವಿರಾಟ ರೂಪದ ಪ್ರತ್ಯಕ್ಷ ದರ್ಶನ
– ಯು. ಬಸವರಾಜು 22

0 "ಬಳ್ಳಾರಿಯ ಗಣಿ ಲೂಟಿ ಲಕ್ಷ ಕೋಟಿ ದಾಟಿದೆ."
– ನ್ಯಾ. ಸಂತೋಷ ಹೆಗಡೆ ವಿಶೇಷ ಸಂದರ್ಶನ 28

0 ಖಾಸಗಿ ಕ್ಷೇತ್ರದ ಭ್ರಷ್ಟಾಚಾರದ ವಿರುದ್ಧವೂ
ಹೋರಾಟ ನಡೆಯಲಿ
– ನಾಡೋಜ ಬರಗೂರು ರಾಮಚಂದ್ರಪ್ಪ 32

0 2 ಜಿ ಹಗರಣ ಮತ್ತು ಪೆಟ್ರೋಲ್ ದರ ಏರಿಕೆ
– ಎನ್.ಕೆ. ವೇದರಾಜ 34

0 ಭ್ರಷ್ಟಾಚಾರ – ನಿರುದ್ಯೋಗ– ಯುವಜನತೆ
– ಬಿ. ರಾಜಶೇಖರ ಮೂರ್ತಿ 38

0 ಕಪ್ಪು ಹಣ ಮರಳಿ ತಂದಾಗ
– ಪ್ರೊ ಪ್ರಭಾತ್ ಪಟ್ನಾಯಕ್ 42

0 ಕವನ: ನಂಟು
– ಹುಲಿಕಟ್ಟಿ ಚನ್ನಬಸಪ್ಪ 44


0 ಕವನ: ದಾಸಿಮಯ್ಯ ಮತ್ತು ಬೆಕ್ಕು
– ಸು.ರಂ.ಎಕ್ಕುಂಡಿ 45

0 ಎರಡು ಭಾರತಗಳ ಸೃಷ್ಟಿ ಮತ್ತು ಬೃಹತ್ ಹಗರಣಗಳು
–ಸೀತಾರಾಮ ಯೆಚೂರಿ 46

0 ಕರ್ನಾಟಕದ ರಾಜಕೀಯಕ್ಕೆ
ಹೊಸ ತಿರುವು ಬೇಕಾಗಿದೆ
– ವಿಜೆಕೆ ನಾಯರ್ 50

ಭಾರತದ ಭ್ರಷ್ಟಾಚಾರ– ವಿರೋಧಿ ಆಂದೋಲನ ಮತ್ತು
ಅಮೇರಿಕಾದ ವಾಲ್‌ಸ್ಟ್ರೀಟ್–ವಿರೋಧಿ ಆಂದೋಲನ 52

ಇ.ಎಂ.ಎಸ್. ಭವನ
ನಂ. 37/ಎ, 8ನೇ ಅಡ್ಡರಸ್ತೆ, ಅಂಚೆ ಕಛೇರಿ ಹತ್ತಿರ ಮಹಾಲಕ್ಷ್ಮಿ
ಬಡಾವಣೆ, ಬೆಂಗಳೂರು 560 086
ದೂರವಾಣಿ : 080 23491114
e-mail:js_weekly@yahoo.com
Blog:janashakthi.wordpress.com





ಕುಣಿವ ಕಾಂಚಾಣದ ಜಾಡು ಹಿಡಿದು

ಎಸ್. ವೈ. ಗುರುಶಾಂತ್
ಸಂಪಾದಕರು

ಆ ಮಟ ,ಮಟ ಮಧ್ಯಾಹ್ನ ಈ ಗುಡ್ಡಗಾಡಿನಲ್ಲಿ ಗುಳಿ ತೋಡುತ್ತಾ ತಿರುಗುತ್ತಿದ್ದವರೆಂದರೆ ಇಬ್ಬರೇ . ಇಟಗಿ ವಿರುಪಣ್ಣ ಮತ್ತು ಕೆ.ಎಂ. ರುದ್ರಯ್ಯಸ್ವಾಮಿ. ಸಂಡೂರು ತಾಲೂಕಿನ ಉಬ್ಬಲಗಂಡಿಯ ಎಡ ಬಲಗಳ ಗುಡ್ಡಗಳಲ್ಲಿ ಕಬ್ಬಿಣದ ಅದಿರು ಸಿಗಬಹುದಾದ ಪ್ರಮಾಣವನ್ನು ನೋಡಲೆಂದೇ ಬಂದಿದ್ದ ಬಳ್ಳಾರಿ ರುದ್ರಯ್ಯನವರಿಗೆ ಸಾಥ್ ಎಂದರೆ ನಮ್ಮ ವಿರುಪಣ್ಣ ಮಾಮನೇ. ಹೆಗಲಲ್ಲಿ ತೂಗಾಡುವ ಬುತ್ತಿ ಗಂಟು, ಹೆಗಲ ಹತ್ತಿದ್ದ ಕಬ್ಬಿಣದ ಹಾರೆ, 'ಅಲ್ಲಿ ತೋಡು' ಎಂದಲ್ಲಿ ತೊಡುವುದು.


ಭರಪೂರ ಅದಿರು ಕಂಡೊಡನೇ ಮುಚ್ಚಿ ಮುಂದೆ ಹೆಜ್ಜೆ ಹಾಕುವುದು. ಹೀಗೆ ಒಳ್ಳೇ ಹರೆಯದ ಕಾಲದಲ್ಲಿ ಹರಿದಾಡಿದ ಅದಿರು ಶೋಧನೆಯ ಮೊದಲ ನೆನಪುಗಳನ್ನು ವಿರೂಪಣ್ಣ ಮಾಮ ಬಿಚ್ಚಿಕೊಂಡಿದ್ದು ಜೀವಿತದ ಇರುಳಿನ ಇಳಿಜಾರಿನಲ್ಲಿ. ಇಡೀ ಜೀವ ಮಾನವೇ ಕೆ.ಎಂ. ಪಾರ್ವತಮ್ಮನವರ ಮೈನ್ಸನಲ್ಲೇ ಕಳೆದ ಆತನನ್ನು ತಿರುಗಿ ಬಾರದ ಪ್ರಪಾತಕ್ಕೆ ಎಳಿಸಿದ್ದು ತೀವ್ರ ಅಸ್ತಮಾವೇ. ಇದು ಅದಿರು ಶೋಧದ ಅಡಿಪಾಯ ವಿಟ್ಟಾತನಿಗೆ ಮುಂದೆ ಗುಡ್ಡದೊಡಲು ಬಗೆದು ಅದಿರು ಹೆಕ್ಕಿದವರೆಲ್ಲರ ಪುಪ್ಪುಸಗಳಿಗೆ ಸಿಕ್ಕ ಬಳುವಳಿ ಗೂರಲು ಕೆಮ್ಮು,ಅಡರಿದ ಅಸ್ತಮಾ, ಕ್ಷಯ .

ಹೊರ ಜಗತ್ತಿನಿಂದ ದೂರವೇ ಉಳಿದಿದ್ದ ನಮ್ಮೂರು ತೋರಣಗಲ್ಲು, ಸಂಡೂರು, ಬಳ್ಳಾರಿಗಳಿಗೆ ಹತ್ತಿರವಾದದ್ದೇ ಮೈನ್ಸ್ ಲಾರಿಗಳ ಓಡಾಟದಿಂದ, ಒಕ್ಕಲುತನ ಹೊಟ್ಟೆ ತುಂಬಿಸುತ್ತಿಲ್ಲ ಎಂಬುವರಿಗೆ, ರಟ್ಟೆಯ ಕಸುವು ಬಿಟ್ಟರೆ ಮತ್ತೇನೂ ಗತಿಯಿಲ್ಲದವರಿಗೆ ಆಸರೆಯಾದದ್ದು ಈ 'ಗುಡ್ಡ ದುಡಿತವೇ'. ಅಷಿಷ್ಟು ನಾಲ್ಕಕ್ಷರ ಕಲಿತು ಸಾಲಿ ಬಿಟ್ಟಿದ್ದ ಕೆಲ ಮಕ್ಕಳಿಗೆ, ಅಕ್ಷರ ಲೋಕದಿಂದಲೇ ದೂರ ಉಳಿದಿದ್ದ ಹಲವರಿಗೆ ಅನ್ನ, ನೀರು, ನೆರಳು ನೀಡಿದ್ದು NMDC ಯೇ. ಇದು ಗೌಡರ ಮನೆಗಳಲ್ಲಿ ಸಂಬಳದಾಳಾಗಿ ದುಡಿಯುತ್ತಿದ್ದ ಅನೇಕ ದಲಿತರನ್ನು 'ವಿಮೋಚನೆ'ಗೊಳಿಸಿತ್ತು. ಇಷ್ಟೆಲ್ಲಾ ಆದಾಗಲೂ ಒಕ್ಕಲುತನ ಹಾಳಾಗಲಿಲ್ಲ. ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಸಂಬಂಧಗಳು ಮತ್ತಷ್ಟು ಕುಸಿಯಲಿಲ್ಲ. ಕಲುಷಿತವಾಗಲಿಲ್ಲ.

ಸಂಡೂರು, ಇಲ್ಲಿನ ಬೆಟ್ಟಗಳೆಂದರೆ ಜೀವ ವೈವಿಧ್ಯತೆಯ ತಾಣಗಳು. ಒಂದರ್ಥದಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಸನ್ನಿವೇಶಕ್ಕೆ ಅಪವಾದಗಳು. ಈ ಕಾಡಿ ಜಂಕೆ, ನವಿಲುಗಳ ಹಿಂಡಿಗೆ ಕೊರತೆಯಿರಲಿಲ್ಲ. ಚಿರತೆಗಳ ಆವಾಸ ಸ್ಥಾನ. ತೀರ ಇತ್ತೀಚೆಗೆ ಅಂದಾದುಂಧಿ ಗಣೀಗಾರಿಕೆ, ಅದಿರಲು ಸಾಗಾಣಿಕೆ

ಆರಂಭವಾಗುವವರೆಗೂ ನಮ್ಮ ಸಂಡೂರು ಪರಿಸರದಲ್ಲಿ 32 ಚಿರತೆಗಳಿದ್ದ ಲೆಕ್ಕವಿದೆ. (ಈಗ ಕೆಲ ಹಳ್ಳಿ, ಪಟ್ಟಣಗಳ ಸೆರಗಿನಲ್ಲಿ ಅನ್ನ ಹುಡುಕಿ ಬರುವ, ಭಾವಿಗೆ ಬಿದ್ದು ಪ್ರಾಣ ಕಳೆದುಕೊಳ್ಳುವ ಚಿರತೆಗಳ ಮುಖದಲ್ಲಿ ನಮ್ಮ ಕಾಡಿನ ವಿಳಾಸವಿರಬಹುದೇ ಎಂದು ಹುಡುಕುತ್ತೇನೆ. ನಮ್ಮೂರ ಗಂಡಿಯಲ್ಲಿ ನಮಗೆಲ್ಲಾ ಭಯ ಹುಟ್ಟಿಸುತ್ತಿದ್ದ ಹುಲಿಗವಿ ಈಗಲೂ ಅನಾಥ ಸ್ಮಾರಕವಾಗಿ ಉಳಿದಿದೆ. ಕರಡಿ, ಕಾಡಂದಿ, ನರಿ, ಮೊಲ, ಮಂಗ್ಯಾ, ಬಗೆ ಬಗೆಯ ಪಕ್ಷಿಗಳ ಹಾರಾಟ ಅಲೆದಾಟ, ಶ್ರೀಗಂಧ ,ತೇಗ ,ಹೊನ್ನೆ, ಮಾವು, ನೇರಳೆ, ಕಾರೆ, ಚೇಪೆಯಂತಹ ಹಲವು ಹಣ್ಣಿನ ಗಿಡಗಳ, ದೋಣಿ, ಭೈರಪ್ಪನತೀರ್ಥ, ಹರಿಶಂಕರಗಳ ಸಿಯ್ಯಾನು ಸಿಹಿ ತಂಪು ನೀರ ರುಚಿ ಮರೆಯಲಾದರೂ ಹೇಗೆ ಸಾಧ್ಯ?.

ಇಂತಿದ್ದ ಹೊಸಪೇಟೆ, ಸಂಡೂರಿನ ಉದ್ದಕ್ಕೂ ಸಮೃದ್ಧವಾಗಿ ಹರಡಿಕೊಂಡಿದ್ದ ಕಬ್ಬಿಣದ ಅದಿರಿನ ಕಾರಣವನ್ನೇ ಕೇಂದ್ರವಾಗಿರಿಸಿಕೊಂಡು 1971 ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ತೋರಣಗಲ್ಲಿನಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಅಡಿಗಲ್ಲು ಇಟ್ಟು ಅಭಿವೃದ್ಧಿಯ ಆಶೆ ಹತ್ತಿಸಿ ಓಟಿನ ರಾಜಕಾರಣ ಮಾಡಿದ್ದೂ ಮರೆತು ಹೋಗುವಂಥದ್ದಲ್ಲ. ಅದೇ ಕಾಲಕ್ಕೆ ಅಡಿಗಲ್ಲು ಇಟ್ಟಿದ್ದ ವಿಶಾಖಪಟ್ನಂ, ಸೇಲಂಗಳಲ್ಲಿ ಕಾರ್ಖಾನೆಗಳು ಆರಂಭವಾದವು, ಆದರೆ ನಮ್ಮದೇ ಅದಿರನ್ನು ಬಳಸಿ ಕೈಗಾರಿಕೆ ಸ್ಥಾಪನೆಯಾದರೆ ನೇರ ಉದ್ಯೋಗಗಳೇ 40 ಸಾವಿರ ಒಳಗೊಂಡು 1 ಲಕ್ಷದಷ್ಟು ಉದ್ಯೋಗ ಸೃಷ್ಟಿಸಬಲ್ಲ, ನಾಡಿನ ಅಭಿವೃದ್ಧಿಗೆ ತಿರುವು ಕೊಡಬಲ್ಲ ಈ ವಿಜಯನಗರ ಉಕ್ಕು ಯೋಜನೆಯನ್ನು ಸ್ವತಃ ಇಂದಿರಾಗಾಂಧಿ ಮಾತ್ರವಲ್ಲ, ರಾಜ್ಯದ ಸಂಸದರು, ಕಾಂಗ್ರೆಸ್ ನಾಯಕರು ಪೂರ್ಣವಾಗಿ ಮರೆತೇ ಬಿಟ್ಟರು. ಇಲ್ಲಿನ ಅತ್ಯುತ್ತಮ ಅದಿರು ವಿದೇಶಗಳತ್ತ ಸಾಗುತ್ತಲೇ ಇತ್ತು. ಎಲೆಕ್ಷನ್ ಬಂದಾಗಲೊಮ್ಮೆ ಕಾರ್ಖಾನೆ ನೆನಪಿಸಿಕೊಳ್ಳುತ್ತಾ ದಶಕಗಳ ಕಾಲ ಜನರ ಆಶೆ–ಕನಸುಗಳೊಂದಿಗೆ ಚೆಲ್ಲಾಟ ಮಾಡುತ್ತಿದ್ದುದನ್ನು ಪ್ರತಿಭಟಸಿ 'ವಿಜಯನಗರ ಉಕ್ಕು ಕರ್ನಾಟಕದ ಹಕ್ಕು'ಎಂದು ವಿದ್ಯಾರ್ಥಿ ಯುವಜನ ಚಳುವಳಿ ನಡೆಸಿದ್ದು. ಕೊನೆಗೆ ಪ. ಬಂಗಾಳದ ಸಿಪಿಐ(ಎಂ) ಸಂಸದರ ಸಹಾಯದಿಂದ ದೆಹಲಿ ಸರ್ಕಾರದ ಉಕ್ಕಿನ ಮಂತ್ರಿ ಸಂತೋಷ್ ಮೋಹನ್‌ದೇವ್‌ನನ್ನು ನಿಯೋಗ ಭೇಟಿಯಾಗಿ ಚರ್ಚಿಸಿದಾಗ ದೊರೆತ ಉತ್ತರ ಕರ್ನಾಟಕದ–



ದೇಶದ ಎಲ್ಲರ ಕನಸಿಗೆ ಕಲ್ಲು ಚಪ್ಪಡಿ ಎಳೆಯಿತು. 'ಉಕ್ಕಿನ ಕ್ಷೇತ್ರದಲ್ಲಿ ಒಂದು ರೂಪಾಯಿಯನ್ನು ಕೇಂದ್ರ ಸರ್ಕಾರ ಹೂಡುವುದಿಲ್ಲ. ಖಾಸಗಿಯವರು ಬಂಡವಾಳ ಹೂಡುವುದಾದರೆ ಒಂದೇ ರೂಪಾಯಿಗೇ ಒಂದು ಎಕರೆ ಭೂಮಿ ಕೊಡುವುದಾಗಿ' ಹೇಳಿ ಉದಾರೀಕರಣ, ಜಾಗತೀಕರಣ– ಖಾಸಗೀಕರಣದ ಪಾಠ ಹೇಳಿ ಕೈ ಝಾಡಿಸಿ ಬಿಟ್ಟರು. 'ಕಬ್ಬಿಣ ಅದಿರು ಹೀಗೆ ವಿದೇಶಗಳ ಪಾಲಾದರೆ ಭವಿಷ್ಯತ್ತಿನಲ್ಲಿ ದೇಶದ ಗತಿಯೇನು?' ಎಂದು ಪ್ರಶ್ನಿಸಿದಾಗ ದೊಡ್ಡದಾಗಿ ನಕ್ಕು 'ನೋಡಿ ಯುವಕರೇ ಇನ್ನೂ ನೂರಾರು ವರ್ಷಗಳು ಬಗೆದರೂ ಕರಗದ ಸಂಗ್ರಹವದು, ಚಿಂತೆ ಬಿಡಿ' ಎಂದೂ ಉಚಿತ 'ಭರವಸೆ'ಯನ್ನು ಕೊಟ್ಟರು.

ಕೇಂದ್ರ ಸರ್ಕಾರ ಹೇಳಿದಂತೆ ಮಾಡಿತು. ವಿಜಯನಗರ ಉಕ್ಕು ಜಿಂದಾಲ್ ಪಾಲಾಯಿತು. ಹೋಗಲಿ ಇಲ್ಲಿಯೇ ಒಂದು ಕಾರ್ಖಾನೆಯಾಯಿತಲ್ಲ ಎಂದು ಜನ ಸಮಾಧಾನ ಪಟ್ಟುಕೊಳ್ಳುವ ಹೊತ್ತಲ್ಲೇ ಭರಸಿಡಿಲಿನಂತೆ ಬಂದೆರಗಿದ್ದು ಮ್ಯಾಂಗ್‌ನೀಸ್ ಅದಿರಿಗೆ ಚೀನಾ ಮತ್ತಿತರ ದೇಶಗಳಿಂದ ಬಂದ ವಿಪರೀತ ಬೇಡಿಕೆ. ಉದಾರೀಕರಣದ ಪ್ರಕ್ರಿಯೆಯಲ್ಲಿ ಸರಕಾರದ ಪಾತ್ರ ಮೂಲೆಗುಂಪಾಗಿ ವಿದೇಶಿ ವ್ಯಾಪಾರ, ರಫ್ತು ಹೆಸರಿನಲ್ಲಿ ಖಾಸಗಿಯವರ ಕೈಗೆ ಅದಿರು ಗಣಿಗಾರಿಕೆ–ಸಾಗಾಣಿಕೆಯನ್ನು ಮುಕ್ತವಾಗಿ ನೀಡಿದ್ದರಿಂದ ಎಲ್ಲಾ ನೀತಿ, ನಿಯಮ, ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರಿ ಮನಸೋ ಇಚ್ಛೆ ಲೂಟಿಗೆ 'ಲೈಸನ್ಸ್' ನೀಡಲಾಯಿತು. ಉದ್ದಿಮೆದಾರರ ಈ ಲೂಟಿಯಲ್ಲಿ ಆಳುವ, ವಿರೋಧ ಪಕ್ಷಗಳು, ಸರಕಾರ ಪಾಲನ್ನು ಗಿಟ್ಟಿಸಿಕೊಂಡು ಸದ್ಯ ಕಟಕಟೆಯಲ್ಲಿ ಖುಲಾಸೆಗಾಗಿ ನಿಂತಿರುವುದು ಸರ್ವವೇದ್ಯ.

ಇದು ಬಳ್ಳಾರಿ ಜಿಲ್ಲೆಯ, ಕರ್ನಾಟಕ ರಾಜ್ಯದ ಆರ್ಥಿಕ, ಸಾಮಾಜಿಕ – ರಾಜಕೀಯ ಸನ್ನಿವೇಶವನ್ನೇ ದಿಕ್ಕೆಟ್ಟು ಹೋಗುವಂತೆ ಮಾಡಿಬಿಟ್ಟಿದೆ. ಅದಿರಿನ ವಿಪರೀತ ಬೇಡಿಕೆ, ಬೆಲೆ ಸಿಕ್ಕಲ್ಲೇ ತೋಡುವ, ಸಿಕ್ಕಷ್ಟು ಬಾಚಿಕೊಳ್ಳುವ ಸ್ಪರ್ಧೆಗೆ ತಳ್ಳಿದೆ. ಬೆಳೆ ತೆಗೆಯಲಾಗುತ್ತಿದ್ದ ಕೃಷಿ ಭೂಮಿ ಒಡಲು ಬಗೆದು ಹಾಕಲಾಗಿದೆ. ಏನೊಂದು ಬೆಳೆಯದ ದಿಕ್ಕೇಡಿ ಸ್ಥಿತಿಯಲ್ಲಿ ಹಾಳಾಗಿ ಬಿದ್ದುಕೊಂಡಿವೆ. ಕೃಷಿ ಚಟುವಟಿಕೆಗಳೇ ಸ್ಥಗಿತಗೊಂಡು, ಜನ ಬದುಕನ್ನರಸಿ ಸಿಕ್ಕಲ್ಲಿಗೆ ಗುಳೆ ಹೊರಟಿದ್ದಾರೆ. ಉಳಿದವರ ಜೀವನ ಬಗೆದು ಬಿಸಾಡಿದ ಹೊಲಗಳಂತೆ ಬಣ, ಬಣ. ಹಸಿರೇ ಇಲ್ಲದ ಮೇಲೆ ಉಸಿರೆಲ್ಲಿ?

ಹೀಗಾಗಿ ಅತೀ ಭಾರ ಹೊತ್ತ ಲಾರಿಗಳಿಂದ ರಸ್ತೆಗಳು ಹಾಳು ಕುಣಿಗಳಾಗಿ ಹದಗೆಟ್ಟಿವೆ. ಅಕ್ರಮ ಗಣಿಗಾರಿಕೆಯಿಂದ ಪರಿಸರ ಹಾಳಾಗಿ ಧೂಳಿನಿಂದ ಹಲವು ಖಾಯಿಲೆಗಳು ಜನ, ದನಗಳನ್ನು ಬಲಿ ಪಡೆಯುತ್ತಿವೆ. ಇಲ್ಲಿ ದುಡಿವ ಜನರ ಶೋಷಣೆಗೆ ಮಿತಿಯೇ ಇಲ್ಲವಾಗಿದೆ. ಗಣಿಗಳ್ಳರು ತಮ್ಮದೇ ಕ್ರಿಮಿನಲ್ ಗ್ಯಾಂಗ್‌ಗಳನ್ನು ಕಟ್ಟಿಕೊಂಡು ಮಾಫಿಯಾ ಆಡಳಿತ ನಡೆಸುತ್ತಿದ್ದಾರೆ. ಇದರೆಲ್ಲದರ ಪರಿಣಾಮಗಳನ್ನು ಇಡೀ ರಾಜ್ಯವೇ ಅನುಭವಿಸುವಂತಾಗಿದೆ. ದೇಶದ; ರಾಜ್ಯದಲ್ಲಿ ಹಬ್ಬಿರುವ ವ್ಯಾಪಕ




ಭ್ರಷ್ಟತೆ, ಜನವಿರೋಧಿ ರಾಜಕಾರಣಕ್ಕೂ ಇದೇ ಅಂಧಾದುಂದಿ ಗಣಿ ಧೂಳು ಅಡರುವಂತಾಗಿದೆ. ಇಲ್ಲಿ ಅಕ್ರಮಗಳ ಪ್ರಮಾಣ–ಪ್ರಭಾವ ಎಷ್ಟೆಂದರೆ ಹಾದಿ ತೋರಿಸಿದವರೇ ಹೌಹಾರಿ ಕುಳಿತಿದ್ದಾರೆ. ಇಂಡಿಯನ್ ರಿಪಬ್ಲಿಕ್‌ನಲ್ಲಿ 'ಬಳ್ಳಾರಿ ರಿಪಬ್ಲಿಕ್' ಉದಯವಾಗಿದೆ ಯೆಂದರೆ ಗಣಿ ಉದ್ದಿಮೆ ಎಂಬುದು ಉದಾರೀಕರಣದಲ್ಲಿ ಗಣಿ ಮಾಫಿಯಾವಾಗಿ ಸಮಾಜದ ಸರ್ವಾಂಗಗಳನ್ನು ಅದು ಆಕ್ರಮಿಸಿ ಬಿಟ್ಟಿದೆ. ಈ ಹಣ ನಡೆಸಿದ ಅಕ್ರಮಗಳು, ಅನೈತಿಕ ಕೃತ್ಯಗಳು, ರಾಜಕೀಯ ದೌರ್ಜನ್ಯಗಳಿಗೆ ಮಿತಿಯೇ ಇಲ್ಲ, ಅಂತಿಮವಾಗಿ ಅದಕ್ಕೆ ತಡೆಯಾಗುವ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಉಲ್ಲಂಘಿಸಿ ಬುಡಮೇಲು ಮಾಡಲು ಹೂಂಕರಿಸಿ ನಡೆಯುತ್ತಿದೆ.

ಇಂತಹ ದುಷ್ಟ ಪ್ರವೃತ್ತಿ ಬೆಳವಣಿಗೆಗೆ ಅಡಿಗಲ್ಲು ಹಾಕಿದವರು ಕಾಂಗ್ರೇಸ್‌ನವರು. ಅದನ್ನು ಇನ್ನಷ್ಟು 'ತಾರಕ ಹಂತಕ್ಕೆ' ಕೊಂಡೊಯ್ಯುತ್ತಿರುವುದು ಬಿಜೆಪಿಯವರು. ಇಲ್ಲಿ ನಡೆದ ಭಾರೀ ಅಕ್ರಮಗಳು, ಭ್ರಷ್ಟಾಚಾರ ರಾಜ್ಯ–ದೇಶಕ್ಕೆ ಅಪಾರ ನಷ್ಟ ತಂದು, ಪ್ರಜಾಪ್ರಭುತ್ವಕ್ಕೆ ಕೊಡುತ್ತಿರುವ ಅಘಾತಕಾರಿ ಹೊಡೆತಗಳ ಬಗ್ಗೆ ಗಣಿ ಅಕ್ರಮಗಳ ಬಗೆಗೆ ಲೋಕಾಯುಕ್ತರು ನೀಡಿರುವ ವರದಿಯೇ ಸಾರಿ ಸಾರಿ ಹೇಳುತ್ತಿದೆ. ಭಾರಿ ಸಾರ್ವಜನಿಕ ಒತ್ತಡದ ನಂತರ ಒಂದಿಷ್ಟು ಕ್ರಮ ವಹಿಸಬೇಕಾದ್ದರಿಂದ ಮಾಜಿ ಸಚಿವ ಜನಾರ್ದನರೆಡ್ಡಿ ಜೈಲು ಸೇರಿದ್ದಾನೆ. ಅವರ ಮೇಲೆ ಸಿಬಿಐ ದಾಳಿಯೇನೋ ನಡೆಯುತ್ತಲೇ ಇದೆ. ಆದರೆ ಇಂತಹ ಹಲವು ಅಕ್ರಮಗಳನ್ನು ನಡೆಸಿದವರು ಇನ್ನೂ ರಾಜಾರೋಷವಾಗಿ ತಿರುಗುತ್ತಿದ್ದಾರೆ. ಆದರೆ ತನಿಖೆಯಲ್ಲಿರುವ ರೆಡ್ಡಿ ಗ್ಯಾಂಗ್‌ನ ಆರ್ಥಿಕ–ರಾಜಕೀಯ, ಸಂಘಟನಾ ಶಕ್ತಿ ಅಬಾಧಿತವಾಗಿಯೇ ಇದೆ. ಅವರದ್ದು ಮಾತ್ರವಲ್ಲ, ಉಳಿದವರದ್ದೂ.

ತಾನೊಂದು ಭಿನ್ನ ಪಕ್ಷವೆಂದೂ, ದೇಶಪ್ರೇಮವೇ ತನ್ನುಸಿರೆಂದೂ ಸಾರಿಕೊಳ್ಳುತ್ತಿದ್ದ ಬಿಜೆಪಿ ಭ್ರಷ್ಟಾಚಾರದ ಕೊಳಚೆಯಲ್ಲಿ ಮುಳುಗೇಳುತ್ತಿದೆ. ಅದರ ರಾಷ್ಟ್ರ ನಾಯಕರಿಂದ ಹಿಡಿದು ರಾಜ್ಯ ನಾಯಕರು, ಕಾರ್ಯಕರ್ತರು ಪಾಲು ಪಡೆದಿದ್ದಾರೆ. ವಿಶೇಷವೆಂದರೆ ಮಾರ್ಗದರ್ಶನ ಮಾಡುವ 'ಗುರುಸ್ಥಾನ' ವಹಿಸುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಭರ್ಜರಿ ಪಾಲು ಪಡೆದಿರುವುದು ಮತ್ತು ಹಗರಣಗಳನ್ನು ಮುಚ್ಚಿಕೊಳ್ಳಲು ಹೆಣಗುತ್ತಿರುವುದು ಅದರ ಕರಾಳ ಮುಖವನ್ನು ಅನಾವರಣ ಮಾಡಿದೆ. ಮೇಲೆ ಪ್ರಸ್ತಾಪಿಸಿದ ಸಂಗತಿಗಳು ದೇಶದಲ್ಲಿನ ಇಂದಿನ ಹಲವು ವಿದ್ಯಮಾನಗಳಿಗೆ ಉದಾರೀಕರಣದ ಉದರದಲ್ಲಿ ಉದ್ಭವವಾದ ಭ್ರಷ್ಟಾಚಾರದ ಸ್ವರೂಪಕ್ಕೆ ಒಂದು ಉದಾಹರಣೆ ಅಷ್ಟೇ.

ಭ್ರಷ್ಟಾಚಾರ ಪ್ರಜಾಪ್ರಭುತ್ವಕ್ಕೆ ಅಪಾಯ ಒಡ್ಡಿದೆ. ಇದು ಕಾಣುವುದು ಕೇಂದ್ರದ ಕಾಂಗ್ರೇಸ್, ರಾಜ್ಯದ ಬಿಜೆಪಿ ಪಕ್ಷಗಳ ಆಡಳಿತದ ಪರಿಣಾಮದಲ್ಲಿ. ದೇಶದ ಕಾನೂನು, ಸಂವಿಧಾನ, ಪ್ರಜಾಪ್ರಭುತ್ವದ ನೀತಿಗಳನ್ನು ಉಲ್ಲಂಘಿಸಿಯೇ ಕೇಂದ್ರದ 2ಜಿ ಸ್ಪೆಕ್ಟ್ರಂ ಹಗರಣ, ಆದರ್ಶ ಅಪಾರ್ಟಮೆಂಟ್, ಟೆಲಿಕಾಂ, ಗೋದಾವರಿ ಗ್ಯಾಸ್, ಟಾಟಾ– ರಿಲೆಯೆನ್ಸ್, ರಾಡಿಯಾ, ಇಂತಹ ಹಗರಣಗಳು ಬೆಚ್ಚಿ ಬೀಳಿಸುವ ಸಂಗತಿಗಳನ್ನು ಹೊರಗೆಡಹಿವೆ. ಕರ್ನಾಟಕದಲ್ಲಿ ಪುಂಖಾನುಪುಂಖವಾಗಿ ಹೊರಬರುತ್ತಿರುವ ಭೂ ಹಾಗೂ ಗಣಿ ಹಗರಣಗಳಲ್ಲಿ ನಡೆದಿರುವುದು ಇದೇ. ಹೀಗೆ ಭ್ರಷ್ಟಾಚಾರ ಎಂಬುದು ಇಂದು ವ್ಯಾಪಕ ಸ್ವರೂಪವನ್ನು ಪಡೆದಿರುವುದಲ್ಲದೇ ಪೆಡಂಭೂತವಾಗಿ ಜನ ಜೀವನವನ್ನು ಕಾಡುತ್ತಿದೆ.

ಇಂದು ಕರ್ನಾಟಕವನ್ನೇ ನೋಡಿದರೆ, ಹೀಗೆ ಸಂಗ್ರಹಿಸಲಾದ ಹಣದಿಂದ ಬಹುಮತದ ಕೊರತೆ ಅನುಭವಿಸುತ್ತಿರುವ ಬಿಜೆಪಿಗೆ ಅನ್ಯ ಪಕ್ಷಗಳಿಂದ, ಅಪರೇಷನ್ ಕಮಲವೆಂಬ ಪಕ್ಷಾಂತರದ ಅನೈತಿಕ ಷಡ್ಯಂತ್ರ ನಡೆಸಲು, ಶಾಸಕರನ್ನು ಖರೀದಿಸಲು, ಅವರ ಮರು ಆಯ್ಕೆಗಾಗಿ ನೂರಾರು ಕೋಟಿ ರೂಪಾಯಿಗಳನ್ನು ಮತದಾರರಿಗೆ ಆಮಿಷವೊಡ್ಡಲು ಬಳಸಲಾಗಿದೆ. ಇಡೀ ಆಡಳಿತ ಯಂತ್ರವೇ ಭ್ರಷ್ಟಗೊಂಡಿದೆ. ಬಹುತೇಕ ಮಾಧ್ಯಮವೂ ಇಂತಹವರ ತುತ್ತೂರಿಯಾಗಿ, ಮಾಫಿಯಾಗಳದ್ದೇ ಚಾನೆಲ್‌ಗಳಾಗಿ ಬಿಟ್ಟಿವೆ. ಸಂವಿಧಾನದ ನಾಲ್ಕನೇ ಅಂಗವೆಂದು ಈಗಲೂ ಬೀಗುತ್ತಿರುವುದು ಅರ್ಥಹೀನ. ಸಾರ್ವಜನಿಕರ ಪರವಾಗಿ ಧ್ವನಿ ಎತ್ತಬೇಕಾದ, ಪ್ರಜಾತಂತ್ರದ ಕಾವಲುನಾಯಿಗಳೆಂದನ್ನಿಸಿಕೊಳ್ಳುವ ಮಾಧ್ಯಮಗಳು 'ಆಗದವರ' ಮೇಲೆ 'ಬೊಗಳುವ ನಾಯಿ'ಗಳಾಗುತ್ತಿವೆ. ಭೂ ಮತ್ತು ಗಣಿ ಮಾಫಿಯಾಗಳ ಬೆಂಬಲ, ಬಲದ ಮೇಲೆಯೇ



ಬಲಪಂಥೀಯ ಪಕ್ಷಗಳ ರಾಜಕಾರಣ ಬಹುತೇಕ ಅವಲಂಬಿತವಾಗಿದೆ. ಇದು ವಿಭಿನ್ನ, ಆಡಳಿತ-ವಿರೋದಿ ರಾಜಕೀಯ ಪಕ್ಷಗಳು ಎಂಬ ಅಂತರದ ಗೆರೆ ಅಳಿಸಿ ಹೋಗುತ್ತಿದೆ. ಗುರ್ತು ಪರಿಚಯಕ್ಕೆ ಕೇವಲ ಪಕ್ಷ ಚಿಹ್ನೆಗಳಷ್ಟೇ ವ್ಯತ್ಯಾಸ.

ಈ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ರಾಷ್ಟ್ರನಾಯಕರು ಭರ್ಜರಿ ಉಂಡು ತೇಗಿದ್ದಾರೆ. ಈ ಅಕ್ರಮ ಸಂಪತ್ತಿನ ಒಂದು ಪಾಲು ಜಾತಿಗಳ ಮಠಗಳಿಗೆ ಧಾರ್ಮಿಕ ಸಂಸ್ಥೆಗಳು-ಆಶ್ರಮಗಳಿಗೆ, ಸಿಕ್ಕು ಅಂತಹ ದ್ರೋಹಿಗಳಿಗೇ ಆಶೀರ್ವದಿಸಿ ನಾಚಿಕೆ ಬಿಟ್ಟು ಬೆಂಬಲಕ್ಕೆ ನಿಂತಿವೆ. ಬಹುದೊಡ್ಡ ಅಪಾಯವೆಂದರೆ ಭಾರತದ ಪ್ರಜಾಸತ್ತಾತ್ಮಕ, ಮತ ನಿರಪೇಕ್ಷತೆ, ಸಾಮಾಜಿಕ ನ್ಯಾಯಕ್ಕೆ ಕಡು ವಿರೋಧಿಯಾಗಿ ಕಂಟಕವಾಗಿರುವ ಆರ್.ಎಸ್.ಎಸ್. ನಂತಹ ಫ್ಯಾಶಿಸ್ಟ್ ಮಾದರಿ ಕೋಮುವಾದಿ ಸಂಸ್ಥೆಗಳಿಗೆ ಅಪಾರ ಹಣ ಕೈ ಸೇರುತ್ತಿರುವುದು. ಇದು ಹೊಸ ಮಸಲತ್ತುಗಳಿಗೆ ಇಂಬು ಕೊಡುತ್ತಿದೆ. ಇನ್ನೂ ಭೂ ಹಾಗೂ ಗಣಿ ಮಾಫಿಯಾಗಳ ಕ್ರಿಮಿನಲ್ ಗ್ಯಾಂಗ್‌ಗಳು ಸಮಾಜದ ಮೇಲೆ ನಿಯಂತ್ರಣ ಸಾಧಿಸುವ, ಎಲ್ಲಾ ನಾಗರೀಕ ಕಾನೂನುಗಳನ್ನು ಗಾಳಿಗೆ ತೂರಿ 'ಆಗದವರನ್ನು', ಸಾಮಾನ್ಯ ಜನರನ್ನು ದಂಡಿಸುವುದನ್ನು ಸರ್ಕಾರ ಕಣ್ಣು ಮುಚ್ಚಿ ನೋಡುತ್ತಿದೆ. ಇಂತಹವುಗಳ ನಡುವೆ ಪ್ರಜಾಪ್ರಭುತ್ವ ಉಳಿದಿತೇ?


ಆದ್ದರಿಂದಲೇ ಕರ್ನಾಟಕದಲ್ಲಿ ಜನತೆಯ ಒಂದು ಪ್ರಾತಿನಿಧಿಕ ಸಂಸ್ಥೆಯಾಗಿ, ವೇದಿಕೆಯಾಗಿರುವ ವಿಧಾನ ಸಭೆಯ ಕಲಾಪಗಳನ್ನೇ ಅಪಮೌಲ್ಯಗೊಳಿಸಲಾಗುತ್ತಿದೆ. ಅಪಹಾಸ್ಯ ಮಾಡಲಾಗುತ್ತಿದೆ. ಬಹುಮತವೇ ಇಲ್ಲದ ಸರ್ಕಾರ ಅಕ್ರಮ ಮಾರ್ಗಗಳಿಂದ ಅಧಿಕಾರದಲ್ಲಿ ಮುಂದುವರಿದಿದೆ. ಸಭಾಧ್ಯಕ್ಷರೆ ಆಳುವ ಪಕ್ಷದ ಕೈಗೊಂಬೆಯಾಗಿದ್ದಾರೆ. ಸರ್ವೋಚ್ಚ ನ್ಯಾಯಾಲಯವೇ ಛೀಮಾರಿ ಹಾಕಿದ್ದರೂ ಪ್ರವೃತ್ತಿ ಬದಲಾಗಲಿಲ್ಲ. ವಿಧಾನ ಸಭಾ ಕಲಾಪಗಳೇ ನಿಯತಕಾಲಿಕವಾಗಿ ನಡೆಯುವುದಿಲ್ಲ. ಈಗಲೂ ಅಧಿಕಾರ ವಹಿಸಿಕೊಂಡು ನೂರು ದಿನಗಳಾದರೂ ಸದಾನಂದಗೌಡರು ವಿಧಾನ ಸಭೆಯನ್ನೇ ಕರೆಯದೇ ಅಕ್ರಮಗಳನ್ನು ಮುಚ್ಚಿಕೊಳ್ಳುವ, ಲೂಟಿಕೋರರನ್ನು ರಕ್ಷಿಸುವ ಕಸರತ್ತಿನಲ್ಲೇ ನಿರತರಾಗಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಕಾರ್ಯವೆಸಗಿದ ಲೋಕಾಯುಕ್ತ ಸಂಸ್ಥೆಯನ್ನು ದುರ್ಬಲಗೊಳಿಸುವ ಕುತಂತ್ರದ ಧಾಳಿಗಳು ಹಲವು ನಿಟ್ಟಿನಿಂದ ತೀವ್ರವಾಗಿ ನಡೆದಿವೆ.

ಇನ್ನು ಸಚಿವ ಸಂಪುಟ ಜನ ಹಿತವನ್ನೆ ಮರೆತು ಬಿಟ್ಟಿದೆ. ನೆರೆ, ಬರ, ರೇಷನ್, ನಿವೇಶನ, ಮನೆ, ಕೆಲಸ ಇವು ಸರ್ಕಾರದ ಆದ್ಯತೆಯ ಪಟ್ಟಿಯಲ್ಲೇ ಇಲ್ಲ. ಆದರೆ 'ಅಭಿವೃದ್ಧಿ'ಯ ಮಂತ್ರ ಪಠಣ ನಿಂತಿಲ್ಲ. ಇಲ್ಲಿ ಲೂಟಿ ಹೊಡೆದ ಹಣ ಮಾರಿಷಸ್, ಸ್ವಿಸ್ ಬ್ಯಾಂಕ್‌ಗಳ ಮೂಲಕ ವಿದೇಶಿ ಬಂಡವಾಳ ಹೂಡಿಕೆ ಸಮಾವೇಶದಲ್ಲಿ ಬಂಡವಾಳವಾಗಿ ಬರುತ್ತಿದೆ. ಇಲ್ಲಿ ಸಾರ್ವಜನಿಕ-ಸರಕಾರಿ ಆಸ್ತಿಯಲ್ಲದೇ ಅಲ್ಪಸ್ವಲ್ಪ ಜೀವನಾಧಾರವಾಗಿರುವ ಲಕ್ಷಾಂತರ ಜನರ ಭೂಮಿಯನ್ನು ಕಿತ್ತುಕೊಳ್ಳಲು ಈ ಮಣ್ಣಿನ ಮಕ್ಕಳು ಕೋಟು-ಬೂಟು ತೊಟ್ಟು ಕಾಯುತ್ತಿದ್ದಾರೆ. ಹೀಗೆ ಅತಂತ್ರಗೊಂಡ ಜನತೆ ತಮ್ಮ ಹಕ್ಕುಗಳ ಬಗೆಗಾಗಲೀ, ಸರ್ಕಾರದ ನೀತಿಗಳು, ಮಾಫಿಯಾ ಅಟ್ಟಹಾಸಗಳ ವಿರುದ್ಧ ಅದೆಷ್ಟು ದನಿ ಎತ್ತಿಯಾರು? ಇದು ಪ್ರಜಾಪ್ರಭುತ್ವದ ಶಕ್ತಿ ಕುಂದಿಸಿದಂತೆ ಅಲ್ಲವೇ? ಬೆದರಿಕೆಯಲ್ಲವೇ? ಈಗ ದುರ್ಬಲರು, ದಲಿತರು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳತ್ತ ಪರಿವೇ ಇಲ್ಲ.

ಇಂದು ಎಲ್ಲೆಡೆಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಹಗರಣಗಳ ವಿರುದ್ಧ ವ್ಯಾಪಕ ಧ್ವನಿಯೂ ಕೇಳುತ್ತಿದೆ. ಮುಖ್ಯ ಸಂಗತಿಯೆಂದರೆ ಕೆಲ ರಾಜಕೀಯ ನಾಯಕರು, ಕೆಲವು ಸರ್ಕಾರಿ ಅಧಿಕಾರಿಗಳ ಭ್ರಷ್ಟಾಚಾರದ ವಿಷಯ ಮಾತ್ರ ರಂಜನೀಯವಾಗಿ ಪ್ರಸ್ತಾಪಿಸಿಸಲಾಗುತ್ತಿದೆ. ಮೂಲಭೂತವಾಗಿ ಇದಕ್ಕೆ ಕಾರಣೀಭೂತರಾಗಿರುವ, ಇದರಲ್ಲಿ ಸಿಂಹ ಪಾಲಿರುವ ಕಾರ್ಪೋರೇಟ್ ಕಂಪನಿಗಳು, ಖಾಸಗಿ ಉದ್ದಿಮೆದಾರರನ್ನು 'ಮಾಫಿ' ಮಾಡಿರುವುದು, ಅದಕ್ಕಾಗಿಯೇ ಹೆಣಗುತ್ತಿರುವುದು. ಪ್ರಜಾಪ್ರಭುತ್ವಕ್ಕೆ ಕಾಯಿಕೊರಕ ಹುಳುಗಳಾಗಿರುವ ಇವರನ್ನು ಮಟ್ಟಹಾಕದೇ ಜನತಂತ್ರ ಉಳಿಯುವುದಾದರೂ ಹೇಗೆ?.


ಈ ಹಿನ್ನೆಲೆಯಲ್ಲಿ ಇಲ್ಲಿ ಭ್ರಷ್ಟಾಚಾರ, ಹಗರಣ ಪ್ರಕರಣಗಳಿಗೂ ಈಗ ದೇಶ-ವಿದೇಶಗಳೆಲ್ಲೆಡೆ ನಡೆಯುತ್ತಿರುವ ಜಾಗತೀಕರಣದ ಪಾತಕಗಳಿಗೂ (ಜಪಾನ್, ಇಟಲಿ, ಮುಂತಾದ ದೇಶಗಳ ಪ್ರಧಾನಿಗಳು ರಾಜೀನಾಮೆ ಕೊಟ್ಟಿರುವುದು..) ಅದು ಪ್ರಜಾಪ್ರಭುತ್ವಕ್ಕೆ ಒಡ್ಡುತ್ತಿರುವ ಬೆದರಿಕೆ, ಅಪಾಯಗಳ ಬಗ್ಗೆ ಆಳ ಚಿಂತನೆ ನಡೆಯಬೇಕಾದ ಅಗತ್ಯವಿದ್ದುದನ್ನು ಮನಗಂಡು ಈ ವಿಶೇಷ ಸಂಚಿಕೆಯನ್ನು ಆ ವಿಷಯಗಳತ್ತ ಪೂರ್ಣ ಕೇಂದ್ರಿಕರಿಸಲಾಗಿದೆ. ಆಳುವವರ ನೀತಿಗಳಿಗೆದುರಾಗಿ ಅನ್ಯಾಯ, ಅಸಮಾನತೆ, ಶೋಷಣೆ, ದಮನಗಳ ಈ ವ್ಯವಸ್ಥೆ ಬದಲಾವಣೆಗಾಗಿ ನಡೆಯಬೇಕಾದ ಜನತಾ ಪ್ರಜಾಸತ್ತಾತ್ಮಕ ಚಳುವಳಿಗೆ ವೈಜ್ಞಾನಿಕ ಚಿಂತನೆಯ ತಳಹದಿ ನಿರ್ಮಿಸಲು ಶ್ರಮಿಸುತ್ತಿರುವುದೇ ಜನಶಕ್ತಿ ಮೂಲ ಆಶಯ.


ಈ ದಿಕ್ಕಿನಲ್ಲಿ ಪ್ರತಿವಾರವೂ ತನ್ನನ್ನೂ ಪೂರ್ಣವಾಗಿ ತೊಡಗಿಸಿಕೊಂಡ 'ಜನಶಕ್ತಿ'ಯ ಈ ಪ್ರಯತ್ನ ಫಲಕಾರಿಯಾದೀತೆಂಬ ಆಶಯ ನಮ್ಮದು.




ಭ್ರಷ್ಟಾಚಾರದ ರಾಜಕೀಯ ಅರ್ಥಶಾಸ್ತ್ರ

ಸರ್ಕಾರದ ಸಹಾಯದಿಂದ ತೀರ ವಿರಳವಾದ ಸಂಪನ್ಮೂಲಗಳು ದೊಡ್ಡ ಬಂಡವಾಳಗಾರರ, ದೊಡ್ಡ ದೊಡ್ಡ ಗುತ್ತಿಗೆದಾರರ ಹಾಗೂ ರಿಯಲ್ ಎಸ್ಟೇಟ್ ದಂಧೆ ಮಾಡುವವರ ಪಾಲಾಗುತ್ತಿವೆ. ಸಂಪತ್ತಿನ ಕ್ರೋಢೀಕರಣಕ್ಕೆ ಭ್ರಷ್ಟಾಚಾರ ಒಂದು ಸಾಧನವಾಗಿ ಮಾರ್ಪಟ್ಟಿದೆ.









ಪ್ರಕಾಶ್ ಕಾರಟ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

ಭ್ರಷ್ಟಾಚಾರದ ಬಗ್ಗೆ ಇಂದು ವ್ಯಾಪಕ ಚರ್ಚೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿನ ಭ್ರಷ್ಟಾಚಾರ ಹಗರಣಗಳು ಸಾರ್ವಜನಿಕರ ತೀವ್ರ ಕೋಪಕ್ಕೆ ಕಾರಣವಾಗಿವೆ. ಕಳೆದ ಒಂದು ವರ್ಷದಲ್ಲಿ ಬಟ್ಟ ಬಯಲಾದ ಹಗರಣಗಳು: ಬೊಕ್ಕಸಕ್ಕೆ 1.76 ಲಕ್ಷ ಕೋಟಿ ರೂಪಾಯಿಗಳ ನಷ್ಟ ಉಂಟುಮಾಡಿದ 2ಜಿ ಹಗರಣ, 60000 ಕೋಟಿ ರೂಪಾಯಿಗಳ ಹಣಕಾಸಿನ ಅವ್ಯವಹಾರಕ್ಕೆ ಕಾರಣವಾದ ಕಾಮನ್ ವೆಲ್ತ್ ಗೇಮ್ಸ್ ಭ್ರಷ್ಟಾಚಾರ, ಅತ್ಯಂತ ದೊಡ್ಡ ಕಾರ್ಪೊರೇಟ್ ಸಂಸ್ಥೆಯ ಜೇಬಿಗೆ ಸಾವಿರಾರು ಕೋಟಿ ರೂಪಾಯಿಗಳ ಲಾಭ ಮಾಡಿಕೊಡುತ್ತಿರುವ ಕೃಷ್ಣಾ ಗೋದಾವರಿ ಕಣಿವೆಯ ಗುತ್ತಿಗೆ ವ್ಯವಹಾರ.

ಸಾರ್ವಜನಿಕ ಬದುಕಿನ ಎಲ್ಲಾ ರಂಗಗಳನ್ನೂ ಉನ್ನತ ಮಟ್ಟದ ಭ್ರಷ್ಟಾಚಾರ ವ್ಯಾಪಿಸಿರುವಾಗಲೇ, ಜನಸಾಮಾನ್ಯರು ತಮ್ಮ ದಿನನಿತ್ಯದ ಬದುಕಿನಲ್ಲಿ ಆಹಾರ, ವಸತಿ, ಆರೋಗ್ಯ, ಶಿಕ್ಷಣ ಹಾಗೂ ಉದ್ಯೋಗಗಳಂತಹ ಜೀವನೋಪಾಯಗಳಿಗಾಗಿ ಚಿಕ್ಕಪುಟ್ಟ ಭ್ರಷ್ಟಾಚಾರವನ್ನು ಎದುರಿಸುತ್ತಿದ್ದಾರೆ.

ಈ ಲಂಗುಲಗಾಮಿಲ್ಲದ ಭ್ರಷ್ಟಾಚಾರದಿಂದಾಗಿಯೇ ಲೋಕಪಾಲ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಒತ್ತಾಯ ಹೆಚ್ಚಾಗಿದೆ. ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಪ್ರಬಲ ಲೋಕಪಾಲ್ ಪ್ರಮುಖ ಹೆಜ್ಜೆಯಾಗಲಿದೆ, ಆದರೆ ಅದರಿಂದಲೇ ಭ್ರಷ್ಟಾಚಾರ ನಿರ್ಮೂಲನೆಯಾಗುವುದಿಲ್ಲ. ಬಹುಪಾಲು ರಾಜಕೀಯ ಪಕ್ಷಗಳು ಮತ್ತು ಮಾಧ್ಯಮಗಳು ರೋಗ ಲಕ್ಷಣದ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ. ಕೆಲವು ಕಾರ್ಪೊರೇಟ್‌ಗಳ ಪರವಾಗಿ ಮಂತ್ರಿಗಳು ತೆಗೆದುಕೊಳ್ಳುವ ತೀರ್ಮಾನಗಳು, ಅಥವಾ, ಅಧಿಕಾರಿಗಳು ಅನೈತಿಕ ಲಾಭಕ್ಕಾಗಿ ಕೆಲಸ ಮಾಡಿಕೊಡುವುದು ವ್ಯವಸ್ಥಿತ ಭ್ರಷ್ಟಾಚಾರದ ಲಕ್ಷಣಗಳಷ್ಟೆ. ಈ ವ್ಯವಸ್ಥಿತ ಭ್ರಷ್ಟಾಚಾರದ ಮೂಲಕ್ಕೆ ಹೋಗಬೇಕಾದ ಅವಶ್ಯಕತೆ ಇದೆ.


ಕಳೆದೆರಡು ದಶಕಗಳಲ್ಲಿ, ಉನ್ನತ ಮಟ್ಟದ ಭ್ರಷ್ಟಾಚಾರ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. 1991 ರಲ್ಲಿ ಉದಾರೀಕರಣ ಮತ್ತು ಖಾಸಗೀಕರಣ ಪ್ರಕ್ರಿಯೆಗಳು ಪ್ರಾರಂಭವಾದಾಗಿನಿಂದ ಒಂದರ ಮೇಲೊಂದು ಭ್ರಷ್ಟಾಚಾರದ ಹಗರಣಗಳನ್ನು ಕಾಣುತ್ತಿದ್ದೇವೆ. ಷೇರು ಮಾರುಕಟ್ಟೆ ಹಗರಣ, ಯು.ಟಿ.ಐ ಹಗರಣ, ಜೈನ್ ಹವಾಲ ಹಗರಣ, ತೆಹಲ್ಕಾದ ಮೂಲಕ ಬಹಿರಂಗಗೊಂಡ ರಕ್ಷಣಾ ಖರೀದಿ ಹಗರಣ ಮುಂತಾದ ಹಗರಣಗಳು ಆಗುತ್ತಲೇ ಇವೆ. ಇವೆಲ್ಲವೂ ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳಿದ್ದಾಗಲೇ ನಡೆದಿವೆ. ಇವಾವುದೂ ಯಾರೋ ಒಬ್ಬ ಭ್ರಷ್ಟ ಮಂತ್ರಿಯಿಂದಲೋ, ಒಬ್ಬ ಭ್ರಷ್ಟ

ಅಧಿಕಾರಿಯಿಂದಲೋ ಅಥವಾ ಒಬ್ಬ ಭ್ರಷ್ಟ ಬಂಡವಾಳಗಾರನಿಂದಲೋ ವ್ಯಕ್ತಿಗತವಾಗಿ ಆದ ಪ್ರಮಾದಗಳಲ್ಲ. ಇವು ನವ ಉದಾರೀಕರಣ ನೀತಿಗಳ ಪ್ರತಿಫಲ. ನವ ಉದಾರೀಕರಣ ಆಡಳಿತೆಯಡಿಯಲ್ಲಿ, ದೇಶದ ಸಂಪನ್ಮೂಲಗಳನ್ನು ದೊಡ್ಡ ಬಂಡವಾಳಗಾರರಿಗೆ ವರ್ಗಾವಣೆ ಮಾಡಲು ಸರ್ಕಾರವೇ ಅವರ ದಾಸಾನುದಾಸರಾಗಿ ಅನುಕೂಲ ಮಾಡಿಕೊಡುತ್ತಿದೆ. ಸರ್ಕಾರದ ಸಹಾಯದಿಂದ ತೀರ ವಿರಳವಾದ ಸಂಪನ್ಮೂಲಗಳು ದೊಡ್ಡ ಬಂಡವಾಳಗಾರರ, ದೊಡ್ಡ ದೊಡ್ಡ ಗುತ್ತಿಗೆದಾರರ ಹಾಗೂ ರಿಯಲ್ ಎಸ್ಟೇಟ್ ದಂಧೆ ಮಾಡುವವರ ಪಾಲಾಗುತ್ತಿವೆ. ಸಂಪತ್ತಿನ ಕ್ರೋಢೀಕರಣಕ್ಕೆ ಭ್ರಷ್ಟಾಚಾರ ಒಂದು ಸಾಧನವಾಗಿ ಮಾರ್ಪಟ್ಟಿದೆ.

ಅನೈತಿಕ ವಿಧಾನಗಳಿಂದ ಈ ಸಂಪತ್ತಿನ ಕ್ರೋಢೀಕರಣಕ್ಕೆ ಸರ್ಕಾರ ತರುವ ನೀತಿಗಳು ಸಹಾಯ ಮಾಡುತ್ತಿವೆ. ಕರ್ನಾಟಕದಲ್ಲಿನ ಬಿಜೆಪಿ ಸರ್ಕಾರ ಬಳ್ಳಾರಿಯ ಗಣಿಗಳ್ಳರಿಗೆ ಸಹಾಯ ಮಾಡುತ್ತಿದೆ. ನಿಜ ಹೇಳಬೇಕೆಂದರೆ ರೆಡ್ಡಿಗಳು ಬಿಜೆಪಿ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಇದರಿಂದಾಗಿ ಕಬ್ಬಿಣದ ಅದಿರಿನ ಅನೈತಿಕ ಗಣಿಗಾರಿಕೆ ಮತ್ತು ರಫ್ತು ಆಗುತ್ತಿದ್ದಾಗ ಸರ್ಕಾರದ ಎಲ್ಲಾ ಯಂತ್ರಗಳೂ ಕಣ್ಣುಮುಚ್ಚಿ ಕುಳಿತುಕೊಂಡಿದ್ದವು. ಒಡಿಸ್ಸಾ, ಚತ್ತೀಸ್‌ಘರ್ ಮತ್ತು ಝುರ್ಖಂಡ್‌ನಲ್ಲಿ ಕೂಡ ಖನಿಜ ಸಂಪತ್ತು ಇದೇ ರೀತಿಯಲ್ಲಿ ಲೂಟಿಯಾಗುತ್ತಿದೆ.

ಅಮೂಲ್ಯವಾದ ಮತ್ತು ಸೀಮಿತವಾದ ಇನ್ನೊಂದು ಸಂಪತ್ತೆಂದರೆ, ಅದು ಜಮೀನು. ಸುಲಿಗೆಕೋರ ಬಂಡವಾಳಗಾರರಿಗೆ ಅತ್ಯಂತ ಅಗ್ಗದ ದರದಲ್ಲಿ ಈ ಜಮೀನು ಆಸ್ತಿಯಾಗಿ ವರ್ಗಾವಣೆಯಾಗುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ರೈತರು ಮತ್ತು ಆದಿವಾಸಿ ಜನರ ಲಕ್ಷಾಂತರ ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ಖಾಸಗಿ ಬಂಡವಾಳಗಾರರಿಗೆ ಮತ್ತು ಸ್ಥಿರಾಸ್ತಿ ದಂಧೆಮಾಡುತ್ತಿರುವವರಿಗೆ ವಹಿಸಿಕೊಡಲಾಗುತ್ತಿದೆ. ಜಮೀನು ಸ್ವಾಧೀನತಾ ಕಾಯಿದೆ, 1894ರ ಅಡಿಯಲ್ಲಿ ಅಗ್ಗದ ದರದಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಖಾಸಗಿ ಕಂಪನಿಗಳಿಗೆ ಮಾರಾಟಮಾಡಲಾಗುತ್ತಿದೆ, ಅವರು ಅದನ್ನು ವಿಪರೀತ ಬೆಲೆಗೆ ಸ್ಥಿರಾಸ್ತಿ ದಂಧೆಕೋರರಿಗೆ ಅಥವಾ ಕಾರ್ಖಾನೆಗಳನ್ನು ಸ್ಥಾಪಿಸಲು ಮತ್ತೆ ಮಾರುತ್ತಿದ್ದಾರೆ. ರೈತರಿಂದ ಕಸಿದು ಸಂಪತ್ತನ್ನು ಒಟ್ಟುಮಾಡುವ ಪ್ರಕ್ರಿಯೆ ಎಂದು ಇದನ್ನು ವರ್ಗೀಕರಿಸಬಹುದು..

ನವ ಉದಾರವಾದೀ ಆಳ್ವಿಕೆಯಡಿಯಲ್ಲಿ ಚಿಗಿತುಕೊಂಡಿರುವ(ಬೆಳೆದಿರುವ) ದೊಡ್ಡ ಬಂಡವಾಳಗಾರರು– ಆಳುವ ಪಕ್ಷದ ರಾಜಕಾರಣಿಗಳು–ಅಧಿಕಾರಿಗಳ ದುಷ್ಟಕೂಟ ಸಾರ್ವಜನಿಕ ಹಣವನ್ನು ನುಂಗಿಹಾಕುತ್ತಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ(ರೇಷನ್ ಕಾರ್ಡ್ ವ್ಯವಸ್ಥೆ)ಯಂತಹ ಜನೋಪಯೋಗಿ ಯೋಜನೆಗಳಿಗಾಗಿ ಬಿಡುಗಡೆಯಾದ ಹಣವನ್ನು ಈ ದುಷ್ಟಕೂಟ ವ್ಯವಸ್ಥಿತವಾಗಿ ಲೂಟಿಮಾಡುತ್ತಿದೆ. ಉನ್ನತ ಮಟ್ಟದಲ್ಲಿ ಮೊದಲು ಪ್ರಾರಂಭವಾಗುವ ಈ ಭ್ರಷ್ಟಾಚಾರ ಪಂಚಾಯತನ್ನೂ ಒಳಗೊಂಡಂತೆ ಕೆಳ ಹಂತದ ಆಡಳಿತದ ವರೆಗೂ ವ್ಯಾಪಿಸಿದೆ.




ಇತ್ತೀಚಿನ ವರ್ಷಗಳಲ್ಲಿನ ಉನ್ನತ ಮಟ್ಟದ ಭ್ರಷ್ಟಾಚಾರ ಹಗರಣಗಳಲ್ಲಿ ಪ್ರತಿಯೊಂದರಲ್ಲೂ ಖಾಸಗಿ ಬಂಡವಾಳಗಾರ ಅಥವಾ ವ್ಯಾಪಾರಿ ಶಾಮೀಲಾಗಿರುವುದನ್ನು ಕಾಣಬಹುದು. ಈ ಅಂಶವನ್ನು ಜನರಿಂದ ಮರೆಮಾಚಲಾಗಿದೆ. ಜನರಿಗೆ ಎದ್ದು ಕಾಣುವುದು ರಾಜಕಾರಣಿ ಅಥವಾ ಅಧಿಕಾರಿಯೇ ವಿನಃ ನಿಜವಾದ ಭ್ರಷ್ಟ ಬಂಡವಾಳಗಾರ ಕಾಣುವುದೇ ಇಲ್ಲ.


ಆದ್ದರಿಂದಲೇ ಲೋಕಪಾಲ್ ಕಾಯಿದೆ ಮಂತ್ರಿಗಳನ್ನೂ ಒಳಗೊಂಡಂತೆ ಉನ್ನತ ಮಟ್ಟದ ಸಾರ್ವಜನಿಕ ಅಧಿಕಾರಿಗಳ ಭ್ರಷ್ಟಾಚಾರವನ್ನು ಮಾತ್ರ ನಿಭಾಯಿಸಬಹುದೇ ಹೊರತು ನವ ಉದಾರವಾದೀ ವ್ಯವಸ್ಥೆಯ ಕೂಸಾದ ಭ್ರಷ್ಟಾಚಾರದ ವ್ಯಾಧಿಯನ್ನು ಹೋಗಲಾಡಿಸುವ ಸಾಮರ್ಥ್ಯವನ್ನು ಹೊಂದಿಲ್ಲ.

ನವ ಉದಾರವಾದೀ ನೀತಿಗಳನ್ನು ಬದಲಾಯಿಸುವ ತನಕ, ಈಗಿರುವ ಉನ್ನತ ಮಟ್ಟದ ಭ್ರಷ್ಟಾಚಾರ ಹಾಗೆಯೇ ಮುಂದುವರಿಯಲಿದೆ. ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗೀಕರಿಸುವ, ಸಾರ್ವಜನಿಕ ಉದ್ದಿಮೆಗಳ ಆಸ್ತಿಗಳನ್ನು ಮಾರುವ, ಶಿಕ್ಷಣ, ಆರೋಗ್ಯ, ಮತ್ತಿತರ ಮೂಲಭೂತ ಸೇವೆಗಳ ಖಾಸಗೀಕರಣ, ದೊಡ್ಡ ಬಂಡವಾಳಗಾರರಿಗೆ ತೆರಿಗೆ ರಿಯಾಯತಿ ಹಾಗೂ ಇನ್ನಿತರ ಆಮಿಷಗಳನ್ನು ನೀಡುವ ಪ್ರವೃತ್ತಿಗಳ ನವ ಉದಾರವಾದೀ ಚೌಕಟ್ಟೇ ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಅನೈತಿಕವಾಗಿ ಗಳಿಸಿದ ಹಣವೇ ಕಪ್ಪು ಹಣದ ಮೂಲ.

ಭ್ರಷ್ಟಾಚಾರ ನಿಯಂತ್ರಣದ ಬಗ್ಗೆ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರದ ಧೋರಣೆ ಇಂದಿನ ದುಃಸ್ಥಿತಿಗೆ ಅವರೇ ಕಾರಣ ಎನ್ನುವುದನ್ನು ಸಾಬೀತುಮಾಡಿದೆ. ಮನಮೋಹನ

ಪುಟ 36 ಕ್ಕೆ







ಭ್ರಷ್ಟಾಚಾರ:
ಪ್ರಜಾಪ್ರಭುತಕ್ಕೊಂದು ಕಂಟಕ

ಪ್ರೊ. ಕೆ.ಎನ್. ಪಣಿಕ್ಕರ್

ಭಾರತದಲ್ಲಿ ಭ್ರಷ್ಟಾಚಾರವೆಂಬುದು ಒಂದು ಹೊಸ ವಿದ್ಯಮಾನವೇನೂ ಅಲ್ಲ; ಅದರ ಇತಿಹಾಸವನ್ನು ವಿವೇಚನಾ ಅಧಿಕಾರ ಪಡೆದ ವ್ಯಕ್ತಿಗಳಿರುವ ಒಂದು ವಿಧ್ಯುಕ್ತ ಆಡಳಿತ ವ್ಯವಸ್ಥೆಯ ಆರಂಭದಲ್ಲಿ ಗುರುತಿಸಬಹುದು. ಆದಾಗ್ಯೂ ಭ್ರಷ್ಟಾಚಾರದ ಸ್ವರೂಪ ಇತಿಹಾಸದ ಎಲ್ಲ ಕಾಲದಲ್ಲೂ ಒಂದೇ ತೆರನಾಗಿರಲಿಲ್ಲ. ವಿಭಿನ್ನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳಲ್ಲಿ ಅದು ವಿಭಿನ್ನ ಆಡಳಿತ ವೈಖರಿಗಳ ಪ್ರಯೋಜನವನ್ನು ಪಡೆದು ಬದಲಾವಣೆಗಳನ್ನು ಕಂಡಿದೆ. ಉದಾಹರಣೆಗೆ, ಪಾಳೆಯಗಾರೀ ಕಾಲದಲ್ಲಿ ಆಳರಸರೊಂದಿಗಿನ ನಿಕಟತೆ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ಒಂದು ಅಂಶವಾಗಿತ್ತು. ವಸಾಹತುಶಾಹೀ ಆಳ್ವಿಕೆ ಒಂದು ಸಂಪೂರ್ಣವಾಗಿ ಭಿನ್ನ ರೀತಿಯ ಅವಕಾಶವನ್ನು ಅಧಿಕಾರಶಾಹಿಗೆ ಒದಗಿಸಿತು, ಏಕೆಂದರೆ, ಜನಸಾಮಾನ್ಯರಿಗೆ ಆಡಳಿತದ ಭಾಷೆಯೂ ಅರ್ಥವಾಗುತ್ತಿರಲಿಲ್ಲ, ಅದರ ವಿಧಿ-ವಿಧಾನಗಳೂ ಅರ್ಥವಾಗುತ್ತಿರಲಿಲ್ಲ. ಸರಕಾರ ಮತ್ತು ಜನರ ನಡುವೆ ಮಧ್ಯವರ್ತಿಯಾಗಿದ್ದ ಒಂದು ವರ್ಗದೊಂದಿಗೆ ಶಾಮೀಲಾಗಿ ವಿಶೇಷ ಅನುಕೂಲಗಳನ್ನು ಒದಗಿಸಿ, ಅದಕ್ಕೆ ಬೆಲೆ ಪಡೆಯುವ ಸಾಮರ್ಥ್ಯವನ್ನು ಅಧಿಕಾರಶಾಹಿಯ ಸದಸ್ಯರಿಗಿದು ಒದಗಿಸಿ ಕೊಟ್ಟಿತು. ಈ ಪರಿಸ್ಥಿತಿಗಳಲ್ಲಿ ಭ್ರಷ್ಟ ಆಚರಣೆಗಳಿಗೆ ಅವಕಾಶ ಬಹಳ ಸೀಮಿತವಾಗಿತ್ತು. ಏಕೆಂದರೆ ವ್ಯವಹಾರಗಳ ಪ್ರಮಾಣ ಭಾರೀ ಲಂಚಗಳಿಗೆ ಅವಕಾಶ ಕಲ್ಪಿಸುವಷ್ಟು ದೊಡ್ಡದಾಗಿದ್ದದ್ದು ಅಪರೂಪವೇ

ನವ-ಉದಾರವಾದೀ ಸನ್ನಿವೇಶದಲ್ಲಿ

ಸ್ವಾತಂತ್ರ್ಯೋತ್ತರ ಯುಗದಲ್ಲಿ, ನಿರ್ದಿಷ್ಟವಾಗಿ ನವ-ಉದಾರವಾದಿ ಧೋರಣೆಗಳನ್ನು ಅಂಗೀಕರಿಸಿದ ನಂತರ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದಲ್ಲಿ ಮತ್ತು ಮೂಲರಚನೆಗಳ ಆಧುನೀಕರಣದ ಬೃಹತ್ ಪ್ರಾಜೆಕ್ಟುಗಳಲ್ಲಿ ಅಪಾರ ಹಣ ತೊಡಗುವ ಸಂದರ್ಭದಲ್ಲಿ ಭ್ರಷ್ಟಾಚಾರ ಹುಚ್ಚಾಬಟ್ಟೆ ವ್ಯಾಪಿಸಿತು. ನವ-ಉದಾರೀಕರಣದ ಸಾರಾಂಶವೆಂದರೆ ಸಾರ್ವಜನಿಕ ಆಸ್ತಿಗಳನ್ನು ಖಾಸಗೀ ಭಂಡಾರಗಳಿಗೆ ವರ್ಗಾಯಿಸುವುದು. ಇದರಲ್ಲಿ ಹರಿದಾಡುವ ಹಣದಲ್ಲಿ ಒಂದು ಭಾಗ ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳ ಕೈಚಳಕದಿಂದ ಅವರ ಜೇಬಿಗೆ ಇಳಿಯಿತು. ಹೀಗೆ ಉಂಟಾದ ಕಪ್ಪು ಹಣವನ್ನು ಒಂದೋ ಸ್ವಿಸ್ ಬ್ಯಾಂಕುಗಳಲ್ಲಿ ಪೇರಿಸಿಡಲಾಗಿದೆ, ಇಲ್ಲವೇ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ, ಮಹಾನಗರಗಳ ಬೃಹತ್ ವಾಣಿಜ್ಯ ಸಂಕೀರ್ಣಗಳಲ್ಲಿ ಹೂಡಲಾಗಿದೆ ಎಂಬುದು ಜನರ ನಂಬಿಕೆ. ಈ ನಗರಗಳಲ್ಲಿ ಭ್ರಷ್ಟಾಚಾರ ಒಂದು ನವ-ಶ್ರೀಮಂತ ವರ್ಗವನ್ನು ಹುಟ್ಟಿಸಿದೆ. ಈ ವರ್ಗದ ಜನಗಳ ದುಂದು ವೆಚ್ಚಕ್ಕೆ ಪಾರವೇ ಇಲ್ಲ.

ಸಾರ್ವಜನಿಕ ಸಂಸ್ಥೆಗಳ ಹೂಡಿಕೆಗಳ ಹಿಂಪಡೆಯುವಿಕೆ. ದೂರಸಂಪರ್ಕ ಉದ್ದಿಮೆಯ ವ್ಯವಹಾರಗಳು, ಕಾಮನ್ವೆಲ್ತ್ ಕ್ರೀಡಾಕೂಟ, ಅಕ್ರಮ ಗಣಿಗಾರಿಕೆ ಇತ್ಯಾದಿ ಇತ್ಯಾದಿಗಳನ್ನು ಕುರಿತು ಬಯಲಿಗೆ ಬಂದಿರುವ ಸಂಗತಿಗಳು ಆಳುವ ಕುಲೀನರು ಎಷ್ಟೊಂದು ಆಳವಾದ ಭ್ರಷ್ಟಾಚಾರದ ಕೆಸರಲ್ಲಿ ಮುಳುಗಿದ್ದಾರೆ ಎಂಬುದನ್ನು ಎತ್ತಿ ತೋರಿವೆ. ಆದರೆ ಭ್ರಷ್ಟಾಚಾರ ಇದೊಂದು ಸ್ತರಕ್ಕೆ ಮಾತ್ರ ಸೀಮಿತವಾಗಿಲ್ಲ. ವಾಸ್ತವವಾಗಿ, ಇದು ಬಹಳ ವ್ಯಾಪಕವಾಗಿರುವ ಒಂದು ವಿದ್ಯಮಾನವೆಂಬುದೇ ನಿಜವಾಗಿ ಆತಂಕ ಉಂಟು ಮಾಡುವಂತಹ ಸಂಗತಿ. ಅದು ಆಡಳಿತದ ಎಲ್ಲಾ ಮಟ್ಟಗಳಿಗೆ ಇಳಿದು ಬಂದಿದೆ. ಜನಸಾಮಾನ್ಯರಿಗೆ ಸಾರ್ವಜನಿಕ ಕಚೇರಿಗಳಲ್ಲಿ ಯಾವುದೇ ಕೆಲಸ


ಮಾಡಿಸಿಕೊಳ್ಳುವುದು– ಅದು ವಿದ್ಯುತ್ ಸಂಪರ್ಕವೇ ಆಗಿರಲಿ, ಡ್ರೈವಿಂಗ್ ಲೈಸೆನ್ಸ್ ಆಗಿರಲಿ, ಅಥವ ಮಕ್ಕಳನ್ನು ಶಾಲೆಗೆ ಸೇರಿಸುವುದೇ ಆಗಿರಲಿ– ಅಕ್ರಮ ಸಂಭಾವನೆ ಕೊಡದೆ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಿದೆ. ಹೀಗೆ ಪ್ರತಿಯೊಬ್ಬರೂ ಭ್ರಷ್ಟರಾಗಿದ್ದಾರೆ, ಒಂದೋ ಲಂಚ ಸ್ವೀಕರಿಸಿ, ಇಲ್ಲವೇ ಲಂಚ ಕೊಡುವ ಮೂಲಕ. ಭ್ರಷ್ಟಾಚಾರ ಒಂದು ದೈತ್ಯ ಸ್ವರೂಪ ಪಡೆದಿದ್ದು ಸಮಸ್ತ ಸಮಾಜವನ್ನು ತನ್ನ ದುಷ್ಟಬಂಧದಲ್ಲಿ ಕಟ್ಟಿ ಹಾಕುವ ಬೆದರಿಕೆಯೊಡ್ಡುತ್ತಿದೆ. ಇಂತಹ ಪರಿಸ್ಥಿತಿಯೇ ಮಧ್ಯಮ ವರ್ಗ ಎದ್ದು ನಿಂತು ಭ್ರಷ್ಟಾಚಾರದ ವಿರುದ್ಧ ತಮ್ಮ ದನಿಯೆತ್ತುವಂತೆ ಮಾಡಿದೆ. ಉದಾರ ಮನೋಭಾವದ ಬುದ್ಧಿಜೀವಿಗಳು ಈಗ ಭ್ರಷ್ಟಾಚಾರ ಭಾರತೀಯ ಸಮಾಜವನ್ನು ಸಾಮಾಜಿಕವಾಗಿ, ರಾಜಕೀಯವಾಗಿ ವಿಕಲಗೊಳಿಸುವ ಒಂದು ಅತ್ಯಂತ ದೊಡ್ಡ ಶಕ್ತಿ ಎಂಬುದನ್ನು ಗುರುತಿಸುತ್ತಿದ್ದಾರೆ. ಈ ಅರಿವು ಮಧ್ಯಮ ವರ್ಗ ಭ್ರಷ್ಟಾಚಾರದ ರಾಜಕೀಯ ಮತ್ತು ನೈತಿಕ ದುಷ್ಪರಿಣಾಮಗಳನ್ನು ಎತ್ತಿ ತೋರುವಲ್ಲಿ ಮುಂಚೂಣಿಯಲ್ಲಿರುವಂತೆ ಮಾಡಿದೆ.

ಆದರೆ ಭ್ರಷ್ಟಾಚಾರದ ವಿಷಯದಲ್ಲಿ ಮಧ್ಯಮ ವರ್ಗದ ಆತಂಕದಲ್ಲಿ ಗೋಸುಂಬೆತನದ ಒಂದು ಅಂಶವೂ ಇದೆ. ಏಕೆಂದರೆ, ಮಧ್ಯಮ ವರ್ಗ ಈ ಹಿಂದೆ ಭ್ರಷ್ಟಾಚಾರವನ್ನು ಮನ್ನಿಸಿತ್ತು, ಕೆಲವೊಮ್ಮೆ ತನ್ನ ಸ್ವಂತದ ಸೌಖ್ಯಕ್ಕೆ, ಪ್ರಯೋಜನಕ್ಕೆ ಅದರಲ್ಲಿ ತೊಡಗಿತ್ತು ಕೂಡ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಯ ನಿರ್ವಹಣೆಯಲ್ಲಿ ಒಂದು ಪಾತ್ರವಿರುವ ಮಧ್ಯಮ ವರ್ಗದ ಸದಸ್ಯರೂ ಭ್ರಷ್ಟಾಚಾರದ ಪ್ರಧಾನ ಫಲಾನುಭವಿಗಳಲ್ಲಿ ಸೇರಿದ್ದಾರೆ. ಭ್ರಷ್ಟಾಚಾರದಲ್ಲಿ ಅವರ ಲೋಲುಪತೆ ಸಣ್ಣಮಟ್ಟ ಸೌಕರ್ಯಗಳಿಂದ ಹಿಡಿದು ದೊಡ್ಡ ಪ್ರಮಾಣದ ಹಣಕಾಸಿನ ಪ್ರಯೋಜನದ ವರೆಗೂ ಇದೆ. ಎಲ್ಲ ಅಭಿವೃದ್ಧಿಶೀಲ ದೇಶಗಳಲ್ಲಿ ಮಧ್ಯಮ ವರ್ಗದ ದುರಾಸೆ ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಒಳಿತಿನ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆಯೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಭಾರತದಲ್ಲಿ ಮಧ್ಯಮ ವರ್ಗ ಆಧುನಿಕತೆಯ ಎಲ್ಲ ಪ್ರಯೋಜನಗಳನ್ನು ಬಾಚಿಕೊಂಡಿದೆ. ಆದರೂ, ಸಮಾಜದಲ್ಲಿ ಅಧಿಕಾರದ ಅವಕಾಶ ಸಿಕ್ಕಿರುವ ವಿಭಾಗಗಳಲ್ಲಿ ಯಾವುದೂ ಭ್ರಷ್ಟಗೊಳ್ಳದೆ ಉಳಿದಿಲ್ಲವಾದರೂ, ಭ್ರಷ್ಟಾಚಾರದ ವಿರುದ್ಧ ಆಂದೋಲನ ರಾಜಕೀಯದವರನ್ನು ಮಾತ್ರ ಪ್ರತ್ಯೇಕಿಸಿ, ಅವರನ್ನು ಮಾತ್ರ ಹೊಣೆಯಾಗಿಸುವ ಪ್ರವೃತ್ತಿಯನ್ನು ತೋರಿಸಿದೆ.

ರಾಜಕೀಯ ಮತ್ತು ಭ್ರಷ್ಟಾಚಾರ

ಪ್ರಸಕ್ತ ಸನ್ನಿವೇಶದಲ್ಲಿ ಪ್ರಕಟಗೊಳ್ಳುತ್ತಿರುವ ಭ್ರಷ್ಟಾಚಾರ ಮಾಧ್ಯಮಗಳಲ್ಲಿ ಒಂದು ಜನಪ್ರಿಯ ಚರ್ಚೆಯ ವಿಷಯವಾಗಿದೆ. ಆದರೆ ಅದು ಗಮನ ಕೇಂದ್ರೀಕರಿಸಿರುವುದು ರಾಜಕೀಯದ ಮಂದಿಯ ದುರ್ವ್ಯವಹಾರಗಳ ಮೇಲಷ್ಟೇ. ಸಮಾಜದ ಅಭಿಪ್ರಾಯ ರೂಪಿಸುವವರಾಗಿರುವ ಮಧ್ಯಮ ವರ್ಗದ ಮಂದಿ ಈ ಚರ್ಚೆಯನ್ನು ಸಾರ್ವಜನಿಕ ವೇದಿಕೆಗಳಿಗೆ, ಕೆಲವೊಮ್ಮೆ, ತಾವು ಮಾತ್ರ ಧರ್ಮಿಷ್ಠರು ಎಂಬಂತಹ ಕ್ರೋಧದೊಂದಿಗೆ, ಹಿಂದೆಲ್ಲಾ ಶುದ್ಧ ಚಾರಿತ್ರ್ಯವಿರುತ್ತಿತ್ತು ಎಂಬ ಹೋಲಿಕೆಯೊಂದಿಗೆ ಒಯ್ದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರ ಹಳೆಯ ಪೀಳಿಗೆಯವರ ಪ್ರಾಮಾಣಿಕತೆ ಮತ್ತು ಸಾರ್ವಜನಿಕ ಶ್ರೇಯಸ್ಸಿಗೆ ಹೋಲಿಸಿ ಹೊಸ ಪೀಳಿಗೆಯವರನ್ನು ತುಚ್ಛೀಕಾರದಿಂದ ಕಾಣುವಂತಾಗಿದೆ. ಈ ಬೆಳವಣಿಗೆಯ ಒಂದು ಪರಿಣಾಮವೆಂದರೆ ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ಸಾರ್ವತ್ರಿಕ ಅವಿಶ್ವಾಸ, ಅವರಲ್ಲಿ ಎಲ್ಲರೂ ಭ್ರಷ್ಟರು ಎಂಬ ನಂಬಿಕೆ ಬೆಳೆದಿರುವುದು. ಭ್ರಷ್ಟಾಚಾರ ಎಂಬುದು ರಾಜಕೀಯದ ಒಂದು ಅನಿವಾರ್ಯ ಕೇಡು ಎಂದು ಬಗೆಯಲಾಗಿದೆ. ಅಧಿಕಾರಶಾಹಿ ಕೂಡ ಅಷ್ಟೇ ಅಪ್ರಾಮಾಣಿಕ, ಅವರೂ ರಾಜಕಾರಣಿಗಳೊಂದಿಗೆ ಕೈಮಿಲಾಯಿಸುವವರು ಎಂದು ನಂಬಲಾಗಿದೆ. ಮಧ್ಯಮ ವರ್ಗದ ಈ ಅಭಿಪ್ರಾಯ ಸರ್ಕಾರೇತರ ಸಂಘಟನೆ (ಎನ್‌ಜಿಒ)

ಏನಿದು ಹುಕುಂ ! ಜನತೆಗೆ ಉತ್ತರದಾಯಿತ್ವ ಇಲ್ಲದ ಲೋಕಪಾಲಕ್ಕೆ ಚುನಾಯಿತ ಸಂಸತ್ತು, ನ್ಯಾಯಾಂಗ, ಎಲ್ಲದರ ಮೇಲೂ ಹಿಡಿತ ಕೊಡಿ ಎಂದೇ ?



ಗಳ ಕೆಲಸದಲ್ಲಿ ಪ್ರತಿಫಲನಗೊಂಡಿದೆ. ಈ ಎನ್‌ಜಿಒಗಳು ತಾವು ರಾಜಕೀಯ ಪರಿಗಣನೆಯಿಲ್ಲದೇ ಅಭಿವೃದ್ಧಿ ಕೆಲಸ ಮಾಡುವವರು ಎಂದು ಹೇಳಿಕೊಳ್ಳುತ್ತಾರೆ. ರಾಜಕೀಯ ಎಂಬುದು ಹೊಲಸು ಆಟ, ಸಮಾಜದ ಎಲ್ಲ ದುಷ್ಟತನಗಳಿಗೆ ಭ್ರಷ್ಟ ರಾಜಕೀಯವೇ ಕಾರಣ ಎಂಬ ಭಾವನೆಯನ್ನು ಅವರು ಹರಡಿದ್ದಾರೆ. ಆದರೆ ಭ್ರಷ್ಟಾಚಾರ–ವಿರೋಧಿ ಆಂದೋಲನ ಸಾರ್ವಜನಿಕ ಹಣದ ಕ್ರಿಮಿನಲ್ ದುರ್ಬಳಕೆ ಮತ್ತು ಖಾಸಗೀ ಸೂರೆಯನ್ನು ಸಾಕಷ್ಟು ಪ್ರಮಾಣದಲ್ಲಿ ಗಮನಿಸಿಲ್ಲ.


ಭ್ರಷ್ಟಾಚಾರವನ್ನು ಪ್ರತಿರೋಧಿಸುವಲ್ಲಿ ಮತ್ತು ಭ್ರಷ್ಟರನ್ನು ಶಿಕ್ಷಿಸುವಲ್ಲಿ ಪ್ರಭುತ್ವದ ಪಾತ್ರ ಅತ್ಯಂತ ಅತೃಪ್ತಿಕರವಾಗಿದೆ. ಕಳೆದ


ಅರವತ್ನಾಲ್ಕು ವರ್ಷಗಳಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳು ನೇರವಾಗಿ ಸಿಲುಕಿದ್ದ ಅಸಂಖ್ಯ ಭ್ರಷ್ಟಾಚಾರದ ಉದಾಹರಣೆಗಳಿವೆ. ಅವರ ವಿಚಾರಣೆಯಾದದ್ದು, ಅವರನ್ನು ಶಿಕ್ಷೆಗೆ ಒಳಪಡಿಸಿದ್ದು ಬಹಳ ಅಪರೂಪ. ಅವರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಪ್ರಭುತ್ವ ಅವರನ್ನು ರಕ್ಷಿಸಲು ಪ್ರಯತ್ನಿಸಿದೆ, ಅವರ ವಿರುದ್ಧ ಕ್ರಮ ಕೈಗೊಳ್ಳಲೇ ಬೇಕಾಗಿ ಬಂದಾಗ ವರ್ಗಾವಣೆ, ಅಮಾನತು ಮುಂತಾದ ಅತ್ಯಂತ ಹಗುರ ಶಿಕ್ಷೆ ಕೊಡಲಾಗಿದೆಯಷ್ಟೇ. ಇದು ಕಾನೂನಿನಲ್ಲಿ ಅದಕ್ಕೆ ಅವಕಾಶಗಳಿಲ್ಲವೆಂದೇನಲ್ಲ; ವಿಫುಲ ಅವಕಾಶಗಳಿವೆ, ಕೊರತೆಯಿರುವುದು ರಾಜಕೀಯ ಇಚ್ಛಾಶಕಿಯದ್ದು. ಫಲಿತಾಂಶವೆಂದರೆ, ಸಮಾಜದ ಹಲವು ಪ್ರಮುಖರು ಫಲಾನುಭವಿಗಳಾಗಿದ್ದಾರೆ.

ನಾಗರಿಕ ಸಮಾಜದಲ್ಲಿ ಲೆಕ್ಕ ಕೊಡದ ಹಣದ ಅಸ್ತಿತ್ವ ಸಾಮಾಜಿಕ ಮತ್ತು ರಾಜಕೀಯ ಜೀವನದ ಮೇಲೆ ಹಲವು ವಿಧಗಳಲ್ಲಿ ಪ್ರಭಾವ ಬೀರುತ್ತದೆ. ಭ್ರಷ್ಟಾಚಾರವು ಅನೀತಿಯುತ ರಾಜಕೀಯವನ್ನು ಹುಟ್ಟಿಸಿ, ಬೆಳೆಸುವ ನೆಲ. ಏಕೆಂದರೆ, ಬೇರೆ ರೀತಿಯಲ್ಲಿ ಅನೀತಿಯುತ ರಾಜಕೀಯವನ್ನು ಅನುಸರಿಸುವುದು ಸಾಧ್ಯವಿಲ್ಲ. ಭಾರತದಲ್ಲಿ ಪ್ರಜಾಸತ್ತಾತ್ಮಕ ಆಚರಣೆ ಶ್ರೀಮಂತರದ್ದು ಮತ್ತು ಶ್ರೀಮಂತರಾಗುವ ಗುರಿಯಿಟ್ಟುಕೊಂಡವರದ್ದು. ಸಂಸತ್ತಿನ ಬಹುಪಾಲು ಸದಸ್ಯರು ಕೋಟ್ಯಾಧೀಶರು ಅಥವ ಬಹುಕೋಟ್ಯಾಧೀಶರು. ಅವರಲ್ಲಿ ಕೆಲವರಾದರೂ ಕೋಟ್ಯಾಧೀಶರ, ಬಹುಕೋಟ್ಯಾಧೀಶರ ಸ್ಥಾನಮಾನ ಪಡೆದಿರುವುದು ಸಂಸತ್ತಿನೊಡನೆ ಅವರ ಸಂಬಂಧದಿಂದಾಗಿ. ಯಾವುದೇ ಸಾಮಾನ್ಯ ನಾಗರಿಕರು, ಅವರಾಗಲೀ, ಅವರು ಪ್ರತಿನಿಧಿಸುವ ಪಕ್ಷವಾಗಲೀ ಸದಾ ಸ್ವಚ್ಛವೇನೂ ಆಗಿರದ ಮೂಲದಿಂದ ಹಣ ಪಡೆಯದೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಿಲ್ಲ. ಚುನಾವಣೆಯಲ್ಲಿ ಹೂಡಿದ ಹಣವನ್ನು ಮರಳಿ ಪಡೆಯಬೇಕಾದರೆ ಜನತೆಯ ಪ್ರತಿನಿಧಿಗಳು ಹಲವು ಭ್ರಷ್ಟ ಆಚರಣೆಗಳಲ್ಲಿ ತೊಡಗಬೇಕಾಗುತ್ತದೆ. ಅವರಲ್ಲಿ ಹಲವರಿಗೆ ರಿಯಲ್ ಎಸ್ಟೇಟ್, ಗಣಿಗಾರಿಕೆ, ಶಿಕ್ಷಣ ಮುಂತಾದವುಗಳಲ್ಲಿ ಅಕ್ರಮವಾಗಿ ತೊಡಗಿರುವ ಸಂಘಟಿತ ಗ್ಯಾಂಗ್‌ಗಳೊಡನೆ ಸಂಪರ್ಕವಿದೆ. ರಾಜಕೀಯದ ಅಪರಾಧೀಕರಣ ಭ್ರಷ್ಟ ಆಚರಣೆಗಳು ಹುಟ್ಟಿ ಹಾಕುವ ಕಪ್ಪು ಹಣದ ಒಂದು ಪರಿಣಾಮ. ರಾಜಕೀಯ ಮತ್ತು ಭ್ರಷ್ಟಾಚಾರ ಪರಸ್ಪರ ಪೂರಕವಾಗಿ ಬಿಟ್ಟಿವೆ; ಭ್ರಷ್ಟಾಚಾರ ಆದರ್ಶವಿರದ ರಾಜಕೀಯದಿಂದ ಹೊಮ್ಮುತ್ತದೆ ಮತ್ತು ಆದರ್ಶವಿಲ್ಲದ ರಾಜಕೀಯ ಭ್ರಷ್ಟಾಚಾರ ತಲೆಯೆತ್ತುವಂತೆ ಮಾಡುತ್ತದೆ. ಇಂದಿರಾ ಗಾಂಧಿಯವರ ಸಮಯದಿಂದ ಈ ಪ್ರವೃತ್ತಿ ನೆಲೆ ಪಡೆಯುತ್ತಿದೆ. ಅವರು ಅಧಿಕಾರದಲ್ಲುಳಿಯಲು ಆದರ್ಶವನ್ನು ಬಿಡಲು ಹಿಂಜರಿಯಲಿಲ್ಲ. ನಂತರ ರಾಜೀವ ಗಾಂಧಿ ಬೊಫೋರ್ಸ್ ಹಗರಣದಲ್ಲಿ ಸಿಲುಕಿದ್ದರು ಮತ್ತು ನರಸಿಂಹರಾವ್ ಅಧಿಕಾರದಲ್ಲುಳಿಯಲು ರಾಜಕೀಯ ಭ್ರಷ್ಟಾಚಾರ ನಡೆಸಿದ್ದಕ್ಕೆ ಹೆಸರಾದವರು.

ಭ್ರಷ್ಟಾಚಾರದ ಪ್ರಭಾವ ಆರ್ಥಿಕ ಅಥವ ರಾಜಕೀಯ ವಲಯಕ್ಕಷ್ಟೇ ಸೀಮಿತವಾಗಿರುವುದಿಲ್ಲ, ಅದು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನೂ ಆವರಿಸುತ್ತದೆ. ಭ್ರಷ್ಟಾಚಾರದ ಮೂಲಕ, ವಿಶೇಷವಾಗಿ ಉದಾರೀಕೃತ ಆಡಳಿತದಲ್ಲಿ, ಹುಟ್ಟಿದ ಅಪಾರ ಹಣದ ಮೊತ್ತ, ಸಮಾಜದ ಒಂದು ಅತಿ ಸಣ್ಣ ವಿಭಾಗದ ಕೈಗಳಲ್ಲಿ ಶೇಖರಣೆಗೊಂಡಿದೆ. ಇದು ಒಂದು ಸುಸಂಸ್ಕೃತ ಮಧ್ಯವರ್ತಿಗಳ ವಿಭಾಗವನ್ನು ಹುಟ್ಟು ಹಾಕಿದೆ. ಇವರು ಒಂದು ಹೊಸ ಜೀವನ ಶೈಲಿಯನ್ನು ಪೋಷಿಸುವ ಸಾಂಸ್ಕೃತಿಕ ವಲಯದ ರಕ್ಷಕರಾಗಿ, ಪ್ರಾಯೋಜಕರಾಗಿ ಮೂಡಿ ಬಂದಿದ್ದಾರೆ. ಅತ್ಯಂತ ಮುಂದುವರೆದ, ಬಹುಮಂದಿ ಬಯಸುವ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವ ಈ ವಲಯವನ್ನು ಬಹಳ ಜತನದಿಂದ ಕಾಪಾಡಿಕೊಳ್ಳಲಾಗುತ್ತಿದೆ. ಈ ವಲಯದಲ್ಲಿ ವಾಸಿಸುವವರ ಜೀವನ ವಿಧಾನ ಸಮಾಜದ ಇತರರೊಂದಿಗೆ ಸಂಪೂರ್ಣವಾಗಿ ಬೇರ್ಪಟ್ಟಂತದ್ದು. ಕಳೆದ ಎರಡು ದಶಕಗಳಲ್ಲಿ ಇದ್ದಕಿದ್ದಂತೆ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಸಾಂಸ್ಕೃತಿಕ "ಈವೆಂಟ್'ಗಳಿಗೆ, 'ಫೆಸ್ಟಿವಲ್'(ಉತ್ಸವ)ಗಳಿಗೆ ಪೋಷಣೆ ದೊರೆತಿರುವುದು ಭ್ರಷ್ಟಾಚಾರದಿಂದ ಹರಿದು ಬಂದ ಹಣದಿಂದ. ಇಂತಹ ಉತ್ಸವಗಳಲ್ಲಿ, ಕಾರ್ಯಕ್ರಮಗಳಲ್ಲಿ ಪ್ರಸ್ತುತ ಪಡಿಸುವ ಸಾಂಸ್ಕೃತಿಕ ಜೀವನ ಮಹಾನಗರಗಳ ನವ-ಉದಾರವಾದಿ ಸಿರಿವಂತ ವಿಭಾಗಗಳು ಆದರ್ಶೀಕರಿಸುವ ಜೀವನ, ಇದನ್ನು ಬೆಂಬಲಿಸುವವರು ಸಾಮಾಜಿಕ ಮತ್ತು ಬೌದ್ಧಿಕ ಜೀವನದ ನವ್ಯ ಪಂಥೀಯರು. ಯುವ ಪೀಳಿಗೆ ಇಂತಹ ಜೀವನದತ್ತ ಆಕರ್ಷಿತರಾಗುವುದನ್ನು ಅರ್ಥಮಾಡಿಕೊಳ್ಳಬಹುದು.

ಕರ್ನಾಟಕ ರಾಜ್ಯ ಬಿಜೆಪಿ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದ ಬಗೆಗೆ ಏಕೆ ತುಟಿ ಬಿಚ್ಚುವುದಿಲ್ಲ ಅಣ್ಣಾ ತಂಡ !? ಲೋಕಾಯುಕ್ತ ಸಂಸ್ಥೆಯ ಮೇಲೆ ಬಾರಿ ದಾಳಿ ನಡೆಯುವಾಗ ಕೂಡ.





ಅವರಲ್ಲಿ ಹಲವರು ಕೊನೆಗೆ ಸಾಗರದಲ್ಲಿ ತೆರೆದ ಚುಕ್ಕಾಣಿಯಿಲ್ಲದ ದೋಣಿಗಳಂತಾಗಿ ಬಿಡುತ್ತಾರೆ. ಇಂತಹ ಸಾಂಸ್ಕೃತಿಕ ದ್ವೀಪಗಳ ಪ್ರಾಯೋಜನೆ ಮತ್ತು ಅದನ್ನು ಕಾದುಕೊಳ್ಳುವುದು ಭ್ರಷ್ಟಾಚಾರದಿಂದ ಉತ್ಪನ್ನಗೊಂಡ ಹಣದಿಂದ.

ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ಅದಮ್ಯ ಶಕ್ತಿಯಿಂದಾಗಿ ಅದೀಗ ಭಾರತೀಯ ಸಮಾಜ ಎದುರಿಸುವ ಅತ್ಯಂತ ಗಂಭೀರ ಸಮಸ್ಯೆ ಎಂಬ ಸಾರ್ವತ್ರಿಕ ಭಾವನೆ ಉಂಟಾಗಿದೆ. ಬಡತನ, ಜಾತಿ ದಮನ, ಲಿಂಗ ತಾರತಮ್ಯ ಮುಂತಾದ ಬೇರೆಲ್ಲಾ ಪ್ರಶ್ನೆಗಳನ್ನು ಹಿಂದಕ್ಕೆ ತಳ್ಳಲಾಗಿದೆ. ಹೀಗೆ ಮಾಡುವಾಗ ಭ್ರಷ್ಟಾಚಾರವನ್ನು ಪ್ರತ್ಯೇಕಿಸಿ ನೋಡಲಾಗುತ್ತಿದೆ, ಅದೊಂದು ರಾಜಕೀಯ ಅಥವ ಆರ್ಥಿಕ ಪ್ರಶ್ನೆ ಎಂದು ಪರಿಗಣಿಸಲಾಗುತ್ತಿದೆ, ಆ ಪ್ರಕ್ರಿಯೆಯಲ್ಲಿ ಅದರ ನೈತಿಕ ಆಯಾಮವನ್ನು ಉಪೇಕ್ಷಿಸಲಾಗುತ್ತಿದೆ. ಸರಕಾರವಾಗಲೀ, ಭ್ರಷ್ಟಾಚಾರ–ವಿರೋಧಿ ಕಾರ್ಯಕರ್ತರಾಗಲೀ ಈಗ ಅಂಗೀಕರಿಸಿರುವ ಭ್ರಷ್ಟಾಚಾರದ ನಿರೂಪಣೆ ಅದರ ಸಮಗ್ರ ಮತ್ತು ಸಾಮಾಜಿಕ ಸ್ವರೂಪವನ್ನು ಎದುರಿಸಲು ಸಾಲದು. ಅದು ಭ್ರಷ್ಟಾಚಾರದ ಪ್ರಶ್ನೆಯನ್ನು ರಾಜಕೀಯ ಅಥವ ಅಧಿಕಾರಶಾಹಿ ಮಟ್ಟದಲ್ಲಿ ಮಾತ್ರ ಪರಿಶೀಲಿಸುತ್ತದೆ, ಸಾರ್ವಜನಿಕ ವರ್ತನೆ ಒಳಗೊಳಗೊಂಡಿರಬೇಕಾದ ನ್ಯಾಯದ ಮಾನದಂಡವನ್ನು ಅದು ಒಳಗೊಳ್ಳುವುದಿಲ್ಲ. ಉದಾಹರಣೆಗೆ, ಒಬ್ಬ ವಕೀಲ ನ್ಯಾಯಾಲಯದಲ್ಲಿ ಒಮ್ಮೆ ಹಾಜರಾಗಲು ಐವತ್ತು ಲಕ್ಷ ರೂ. ವಸೂಲು ಮಾಡಿದರೆ, ಅದು ಸುಮಾರು ಎಪ್ಪತ್ತು ಶೇಕಡಾ ಮಂದಿ ದಿನಕ್ಕೆ ಇಪ್ಪತ್ತು ರೂ.ಗಳ ಮೇಲೆ ಬದುಕಬೇಕಾದ ಒಂದು ದೇಶದಲ್ಲಿ ಭ್ರಷ್ಟಾಚಾರ ಆಗುತ್ತದೆಯೇ?. ಅದೇ ರೀತಿ ಬಹುಪಾಲು ನಾಗರಿಕರು ಬೀದಿ ಬದಿಯಲ್ಲಿ ಮಲಗುತ್ತಿರುವಾಗ ಒಬ್ಬ ವ್ಯಾಪಾರೀ ಮಹಾಕುಳ ತನಗೆ ವಾಸಕ್ಕೆ ಹದಿನಾಲ್ಕು ಅಂತಸ್ತಿನ ಕಟ್ಟಡ ಕಟ್ಟಿಕೊಳ್ಳುವುದು ಭ್ರಷ್ಟಾಚಾರವಾಗುತ್ತದೆಯೇ? ಆಗುವುದಾದರೆ, ಭ್ರಷ್ಟಾಚಾರದ ವಿರೋಧಿ ಹೋರಾಟ ಒಂದು ನೈತಿಕ ಆಯಾಮದಿಂದ ಕೂಡಿರಬೇಕಾಗುತ್ತದೆ.

ಪ್ರಜಾಪ್ರಭುತ್ವದ ಮೇಲೆ ಪರಿಣಾಮ

ಗಾಂಧೀವಾದಿ ಕಾರ್ಯಕರ್ತರ ನೇತೃತ್ವದ ಪ್ರಸಕ್ತ ಭ್ರಷ್ಟಾಚಾರ–ವಿರೋಧಿ ಆಂದೋಲನ ಪ್ರಭುತ್ವ ಮತ್ತು ಮಧ್ಯಮ ವರ್ಗ ಹಣಾಹಣಿಗಿಳಿದಿದ್ದಾರೋ ಎಂಬ ಭಾವನೆ ಉಂಟು ಮಾಡುತ್ತಿದೆ. ವಾಸ್ತವವಾಗಿ ಪ್ರಭುತ್ವಕ್ಕೂ, ಸಿವಿಲ್ ಸೊಸೈಟಿ ಅಥವ ನಾಗರಿಕ ಸಮಾಜ ಎನಿಸಿಕೊಳ್ಳುವವರಿಗೂ ಭ್ರಷ್ಟಾಚಾರವನ್ನು ಹತ್ತಿಕ್ಕುವಲ್ಲಿ ಸಾಕಷ್ಟು ಸಮಾನ ಹಿತಾಸಕ್ತಿಗಳಿವೆ. ಭ್ರಷ್ಟಾಚಾರದ ಪ್ರಸರಣ ಮತ್ತು ಅದರ ಪ್ರಮಾಣ ಪ್ರಭುತ್ವದ ಅಧಿಕಾರವನ್ನು ಬುಡಮೇಲು ಮಾಡುತ್ತವೆ, ಏಕೆಂದರೆ ಭ್ರಷ್ಟರು ಅಧಿಕಾರ ವಲಯವನ್ನು ಆಕ್ರಮಿಸಿಕೊಂಡಿದ್ದಾರೆ. ಅದೇ ವೇಳೆಗೆ ಮಧ್ಯಮ ವರ್ಗ ಅನುಭೋಗಿಸುತ್ತಿದ್ದ ರಿಯಾಯ್ತಿಗಳು ಮತ್ತು ವಿಶೇಷ ಸೌಕರ್ಯಗಳಿಗೆ ಕುತ್ತು ಬಂದಿದೆ. ಹೀಗೆ ಪ್ರಭುತ್ವ ಮತ್ತು ಮಧ್ಯಮ ವರ್ಗದ ಹಿತಾಸಕ್ತಿಗಳು ಒಂದಾಗಿವೆ. ಆದ್ದರಿಂದ ಪ್ರಭುತ್ವ ಮತ್ತು ಮಧ್ಯಮ ವರ್ಗ ಒಂದು ಪರಿಹಾರ ಕಂಡುಕೊಳ್ಳುವಲ್ಲಿ ತೊಡಗಿದ್ದಾರೆ. ಅಣ್ಣಾ ಹಝಾರೆಯವರ ಉಪವಾಸಕ್ಕೆ ಪ್ರಭುತ್ವದ ಸ್ಪಂದನ ಮತ್ತು ಸರಕಾರ ಮತ್ತು ಸಿವಿಲ್ ಸೊಸೈಟಿಯ ಜಂಟಿ ಕರಡು ಸಮಿತಿಯ ವಿಚಾರವನ್ನು ಸ್ವೀಕರಿಸಿದ್ದು ಅವರ ಸಮಾನ ಹಿತಾಸಕ್ತಿಯ ಪ್ರತೀಕ.

ಅಣ್ಣಾ ಹಝಾರೆ ನಾಗರಿಕ ಸಮಾಜದ ಹೆಸರಿನಲ್ಲಿ ಆರಂಭಿಸಿರುವ ಕ್ರಮಗಳು ಪ್ರಜಾಪ್ರಭುತ್ವದ ನಿರ್ವಹಣೆಯ ಮೇಲೆ ವಿವಿಧ ಪರಿಣಾಮಗಳನ್ನು ಬೀರುತ್ತವೆ. ಅಣ್ಣಾ ಹಝಾರೆ ಮತ್ತು ಅವರ ತಂಡ ಅಂಗೀಕರಿಸಿರುವ ವಿಧಾನಗಳು ಸಂಸತ್ತಿನ ಶಾಸನಾತ್ಮಕ ಅಧಿಕಾರಗಳನ್ನು ತಟ್ಟುತ್ತವೆ. ಅವರ ಗುರಿಗಳು ಪ್ರಶಂಸಾರ್ಹ, ಆದರೆ ಅವರು ಅಂಗೀಕರಿಸಿರುವ ಸಾಧನಗಳು ನಿರ್ಬಂಧಕಾರಿ ಮತ್ತು ಪ್ರಜಾಪ್ರಭುತ್ವ–ವಿರೋಧಿಯಾಗಿವೆ. ಆಮರಣ ಉಪವಾಸ ಕೈಗೊಳ್ಳುವಾಗ ಅಣ್ಣಾ ಲೋಕಪಾಲ ಮಸೂದೆಗೆ ಒಂದು ಕರಡು ತಯಾರಿಕಾ ಸಮಿತಿಯನ್ನು ರಚಿಸಬೇಕೆಂದು ಸರ್ವಾಧಿಕಾರಿಯ ರೀತಿಯಲ್ಲಿ ಸರಕಾರಕ್ಕೆ ಒಂದು ಗಡುವು ನೀಡಿದ್ದರು. ಅವರು ಒಂದು ಜನಮತಸಂಗ್ರಹವನ್ನು ಕೂಡ ಮಾಡಿದ್ದರು. ಅವರ ಸಂಪೂರ್ಣ ಚರ್ಯೆ ಸರ್ವಾಧಿಕಾರಶಾಹಿ ಸ್ವರೂಪದಲ್ಲಿತ್ತು. ಇದಕ್ಕೆ ಸರಕಾರ ಆರಂಭದಲ್ಲಿ ಕಂಗಾಲಾಗಿ, ಒಂದು ಸಾಮೂಹಿಕ ಆಂದೋಲನದ ಸಾಧ್ಯತೆಯ ಭೀತಿಯಿಂದ ಬಲಿಬಿತ್ತು.

ಹೀಗೆ ಸರಕಾರ ಕಂದಾಚಾರಿ ಮತ್ತು ಕೋಮುವಾದಿ ಶಕ್ತಿಗಳು ಪ್ರಾಯೋಜಿಸಿದ ಒಬ್ಬ ಸಣ್ಣ ಎನ್‌ಜಿಒ ಕಾರ್ಯಕರ್ತನನ್ನು ಗೌರವಾನ್ವಿತಗೊಳಿಸಿತು. ಸರಕಾರಕ್ಕೆ ತನ್ನ ತಪ್ಪನ್ನು ಅರಿತು ಶಾಸನ ರಚನೆಯ ವಿಷಯದಲ್ಲಿ ಸಂಸತ್ತಿನ ಪಾರಮ್ಯವನ್ನು ಎತ್ತಿ ಹಿಡಿಯಲು ಸ್ವಲ್ಪ ಸಮಯ ಬೇಕಾಯಿತು. ಪ್ರತಿಯೊಬ್ಬ ನಾಗರಿಕನಿಗೆ ಪ್ರತಿಭಟಿಸುವ, ಶಾಸನದಲ್ಲಿ ಬದಲಾವಣೆ ಸೂಚಿಸುವ ಮತ್ತು ಅಭಿಪ್ರಾಯ ಮೂಡಿಸುವ ಕಾನೂನುಬದ್ಧ ವಿಧಾನಗಳನ್ನು ಬಳಸಿ ಸಾರ್ವಜನಿಕ

ಅಭಿಪ್ರಾಯದ ಮೇಲೆ ಪ್ರಭಾವ ಬೀರುವ ಹಕ್ಕು ಇದೆ. ಅದೇ ವೇಳೆಗೆ ಯಾವ ನಾಗರಿಕನಿಗೂ ದೇಶದ ಪ್ರಾತಿನಿಧಿಕ ಸಂಸ್ಥೆಯಾದ ಸಂಸತ್ತಿನ ನಿರ್ವಹಣೆಯನ್ನು ತನಗೇ ದಕ್ಕಿಸಿಕೊಳ್ಳುವುದು ಸಾಧ್ಯವಿಲ್ಲ.

ಅಣ್ಣಾ ಹಝಾರೆಯವರ ಪ್ರತಿಭಟನೆಯನ್ನು ಗಾಂಧಿವಾದಿ ಆಂದೋಲನದೊಂದಿಗೆ ಹೋಲಿಸುವುದು ಅನುಚಿತ. ಗಾಂಧಿಯವರು ಯಾವುದೇ ಪ್ರಾತಿನಿಧಿಕ ಸ್ವರೂಪ ಇಲ್ಲದ ಒಂದು ವಸಾಹತುಶಾಹಿ ಸರಕಾರದ ವಿರುದ್ಧ ನಿಷ್ಕ್ರಿಯ ಪ್ರತಿರೋಧ ಸಂಘಟಿಸುತ್ತಿದ್ದರು.

ಆದರೆ ಅದರ ದೌರ್ಬಲ್ಯಗಳೇನೇ ಇರಲಿ, ಅಣ್ಣಾ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯೊಂದಿಗೆ ವ್ಯವಹರಿಸುತ್ತಿದ್ದಾರೆ. ಗಾಂಧೀಜಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದ್ದರು, ಆದರೆ ಅಣ್ಣಾ ಹಝಾರೆಯವರ ಆಂದೋಲನ ಪ್ರಜಾಪ್ರಭುತ್ವ ಸಂಸ್ಥೆಗಳ ಔಚಿತ್ಯವನ್ನು ಶಿಥಿಲಗೊಳಿಸುವ ಪ್ರವೃತ್ತಿ ತೋರುತ್ತಿದೆ. ಮೊದಲ ಸಂದರ್ಭದಲ್ಲಿ ಸರಕಾರ ಅಣ್ಣಾರೊಂದಿಗೆ ರಾಜಿಗೆ ಧಾವಿಸಿದರೆ, 'ಎರಡನೇ ಅವತಾರ'ದಲ್ಲಿ ಅವರೊಡನೆ ಸೊಕ್ಕಿನಿಂದ ವರ್ತಿಸಿದೆ. ಅವರ ಉಪವಾಸದ ಮೇಲೆ ಹಲವಾರು ಮಿತಿಗಳನ್ನು ಹೇರಿತು, ಎಷ್ಟು ಮಂದಿ ಭಾಗವಹಿಸಬೇಕು ಎಂದೂ ವಿಧಿಸಿತು, ಅಂತಿಮವಾಗಿ ಅವರನ್ನು ಮತ್ತು ಅವರ ಅನುಯಾಯಿಗಳನ್ನು ಬಂಧಿಸಿತು. ಅವರು ಚಳುವಳಿ ನಡೆಸಿದ ರೀತಿಯಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಬುಡಮೇಲು ಮಾಡುವ ಸಾಧ್ಯತೆಗಳಿದ್ದರೆ, ಸರಕಾರ ಕೂಡ ಪ್ರಜಾಪ್ರಭುತ್ವದ ನಿಯಮಗಳನ್ನು ತಟ್ಟುವ ಸರ್ವಾಧಿಕಾರಶಾಹಿ ದಾರಿಯನ್ನು ಅನುಸರಿಸಿ ಅಷ್ಟೇ ತಪ್ಪಿತಸ್ಥನಾಗಿದೆ.

ಭ್ರಷ್ಟಾಚಾರದ ನಿಗ್ರಹಕ್ಕೆ ಶಾಸನಾತ್ಮಕ ಕ್ರಮಗಳ ಅಂಗೀಕಾರ ಕುರಿತಂತೆ ಪ್ರಭುತ್ವದ ನಿಲುವಿನಲ್ಲಿ ಹೊಯ್ದಾಟಗಳಿವೆ. ಈ ವಿಷಯದಲ್ಲಿ ಯಾವುದೇ ತುರ್ತನ್ನು ಅದು ತೋರಿಸಿಲ್ಲ. ಈ ಕುರಿತ ಶಾಸನವನ್ನು ಬಿಟ್ಟು-ಬಿಟ್ಟು ಕೈಗೆತ್ತಿಕೊಳ್ಳುತ್ತಿದ್ದು ಕಳೆದ ನಲ್ವತ್ತು ವರ್ಷಗಳಿಂದ ಅದು ನೆನೆಗುದಿಯಲ್ಲಿದೆ. ಈ ಅವಧಿಯಲ್ಲಿ ಭ್ರಷ್ಟಾಚಾರ ನಿಗ್ರಹದ ಒಂದು ಕಾನೂನಿಗೆ ಶಾಸನಾತ್ಮಕ ಮಂಜೂರಾತಿ ಪಡೆಯುವ ಪ್ರಯತ್ನಗಳೆಲ್ಲ ಒಂದಿಲ್ಲೊಂದು ಕಾರಣಕ್ಕೆ ಬಿದ್ದು ಹೋಗಿವೆ. ಅಷ್ಟೇ ಅಲ್ಲ, ಈಗಾಗಲೇ ಇರುವ 1988ರ ಭ್ರಷ್ಟಾಚಾರ ವಿರೋಧಿ ಕಾನೂನನ್ನು ಕೂಡ ಕಟ್ಟುನಿಟ್ಟಾಗಿ ಜಾರಿ ಮಾಡುತ್ತಿಲ್ಲ. ಈಗ ಎಂತಹ ಪರಿಸ್ಥಿತಿ ತಲುಪಿದೆಯೆಂದರೆ ಸರಕಾರ ಮಧ್ಯಮ ವರ್ಗವನ್ನು ಸಮಾಧಾನ ಪಡಿಸಲು ಏನಾದರೂ ಕ್ರಮ ಕೈಗೊಳ್ಳಲೇ ಬೇಕಾಗಿ ಬಂದಿದೆ. ಅಣ್ಣಾ ಹಝಾರೆಯವರ ಮುತುವರ್ಜಿ ಅದಕ್ಕೆ ಜನಬೆಂಬಲ ಗಳಿಸುವ, ಅದೇ ವೇಳೆಗೆ ತನ್ನ ಸಾಮಾಜಿಕ ನೆಲೆಯ ಹಿತಾಸಕ್ತಿಗಳನ್ನು ಬಹಳವೇನೂ ತಟ್ಟದಿರುವ ಒಂದು ಶಾಸನವನ್ನು ಮುಂದಿಡಲು ಅನುಕೂಲಕರವಾದ ಒಂದು ಅವಕಾಶವನ್ನು ಒದಗಿಸಿದೆ.

ಮೂಲಭೂತ ಪ್ರಶ್ನೆಗಳು ಮತ್ತು ಪರಿಹಾರಗಳು



ಅಣ್ಣಾ ತಂಡದ ಕರಡು ಜನ ಲೋಕಪಾಲ್ ಮಸೂದೆ ಮತ್ತು ಸರಕಾರ ಮುಂದಿಟ್ಟಿರುವ ಲೋಕಪಾಲ ಮಸೂದೆಯನ್ನು ಹೋಲಿಸಿದಾಗ ಹಲವು ಸಮಾನ ಲಕ್ಷಣಗಳನ್ನು ಕಾಣಬಹುದು. ಭಿನ್ನತೆ ಇರುವುದು ಈ ಮಸೂದೆಗಳ ಮೂಲಭೂತ ಸ್ವರೂಪದಲ್ಲಿ ಅಲ್ಲ, ಬದಲಾಗಿ ಇದರ ವ್ಯಾಪ್ತಿಗೆ ನ್ಯಾಯಾಂಗವನ್ನು ತರುವುದು ಮುಂತಾದ ಕೆಲವು ವಿಧಿಗಳಿಗೆ ಸಂಬಂಧಪಟ್ಟಂತೆ ಮಾತ್ರ. ಸರಕಾರ ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಪ್ರಾಮಾಣಿಕವಾಗಿಲ್ಲ, ಏಕೆಂದರೆ ಅದು ಹಲವಾರು ಸಂಗತಿಗಳನ್ನು ಮರೆಮಾಚಬೇಕಾಗಿದೆ ಎಂದು 'ನಾಗರಿಕ ಸಮಾಜ' ಕಾರ್ಯಕರ್ತರು ನಂಬಿದ್ದಾರೆ. ಅವರ ಪ್ರಕಾರ ಸರಕಾರಕ್ಕೆ ಭ್ರಷ್ಟರನ್ನು ಶಿಕ್ಷಿಸುವುದಕ್ಕಿಂತ ಅವರನ್ನು ರಕ್ಷಿಸುವ ಕಾಳಜಿಯೇ ಹೆಚ್ಚು. ಈ ಮಸೂದೆಯ ಪ್ರಧಾನ ದೌರ್ಬಲ್ಯವೆಂದರೆ ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಇದರಲ್ಲಿ ಗುಣಾತ್ಮಕವಾಗಿ ಉತ್ತಮವಾದುದೇನೂ ಕಾಣುತ್ತಿಲ್ಲ.

ಭ್ರಷ್ಟರಿಗೆ ಶಿಕ್ಷೆಗಿಂತ ಭ್ರಷ್ಟಾಚಾರದ ನಿರೋಧ ಮುಖ್ಯ ಪ್ರಶ್ನೆ. ಜನ ಲೋಕಪಾಲ ಮತ್ತು ಲೋಕಪಾಲ ಕರಡುಗಳೆರಡೂ ಈ ಅಂಶವನ್ನು ಉಪೇಕ್ಷಿಸಿವೆ. ಸರಕಾರದ ಮಸೂದೆಯ ಪೀಠಿಕೆಯಲ್ಲಿ 'ಭ್ರಷ್ಟಾಚಾರಕ್ಕೆ ಪ್ರತಿರೋಧ' ಎಂಬ ಪದವನ್ನೇ ಕೈಬಿಡಲಾಗಿದೆ, ಅದರ ಸ್ಥಾನದಲ್ಲಿ 'ಭ್ರಷ್ಟಾಚಾರ ತಡೆ' ಎಂಬ

ಪದವನ್ನು ಹಾಕಲಾಗಿದೆ. ಹೀಗೆ ಈ ಮಸೂದೆಗಳು ವ್ಯವಸ್ಥೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಪರಿಶೀಲಿಸುವುದಿಲ್ಲ, ಬದಲಿಗೆ ಮೇಲುಮೇಲಿನ ವಿಷಯಗಳನ್ನಷ್ಟೇ ಪರಿಶೀಲಿಸುವ ಗುರಿ ಹೊಂದಿವೆ. ಆದ್ದರಿಂದ ಈ ಮಸೂದೆಗಳು ಭ್ರಷ್ಟಾಚಾರವನ್ನು ಪ್ರತಿರೋಧಿಸಲಾರವು ಎಂಬುದು ಸ್ಪಷ್ಟ. ಭ್ರಷ್ಟರನ್ನು ಶಿಕ್ಷಿಸಲು ಹೊಸದೊಂದು ಕಾನೂನಿನ ಅಗತ್ಯವೇನಿಲ್ಲ, ಅದರತ್ತ ಲಕ್ಷ್ಯ ಕೊಡಲು ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಕಾನೂನುಗಳಿವೆ.

ಅಣ್ಣಾರವರು ಪ್ರಾಯೋಜಿಸಿರುವ ಚಳುವಳಿಯಲ್ಲಿ ಕಾಣಬರುತ್ತಿರುವ ಕೆಲವು ಪ್ರವೃತ್ತಿಗಳು ಉದಾರ ಮನೋಭಾವದ ಮತ್ತು ಜಾತ್ಯಾತೀತ ಬೌದ್ಧಿಕರಲ್ಲಿ ಕೆಲವು ಆತಂಕಗಳ ಅಲೆಯನ್ನು ಎಬ್ಬಿಸಿವೆ. ಈ ಆಂದೋಲನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಂಬಲಿಸುತ್ತಿದೆ, ಸಾಧುಗಳು, ಸಂತರು ಇದರ ಮುಂಚೂಣಿಯಲ್ಲಿದ್ದಾರೆ. ಉಪವಾಸದ ವೇಳೆಗೆ ಜಂತರ್ ಮಂತರ್‌ನಲ್ಲಿದ್ದ ಜನಜಂಗುಳಿ ಸಮೃದ್ಧ ಮಧ್ಯಮ ವರ್ಗದವರು ಮತ್ತು ಆರೆಸ್ಸೆಸ್ ಕಾರ್ಯಕರ್ತರ ಒಂದು ಕುತೂಹಲಕಾರೀ ಮಿಶ್ರಣವಾಗಿತ್ತು. ಈ ಹಿಂದೆ ಭ್ರಷ್ಟ ವ್ಯವಸ್ಥೆಯ ಭಾಗವಾಗಿದ್ದ ಕಿರಣ್ ಬೇಡಿಯಂತಹ ನಿವೃತ್ತ ಅಧಿಕಾರಶಾಹಿಗಳು ಮತ್ತು ಪ್ರಶಾಂತ್ ಭೂಷಣ್‌ರಂತಹ ಮಾಜಿ ಮಂತ್ರಿಗಳು ಮುಖಂಡತ್ವದಲ್ಲಿದ್ದಾರೆ. ಅಣ್ಣಾ ಹಝಾರೆಯವರು ತಮ್ಮ ಅಂದೋಲನ ಎರಡನೇ ಸ್ವಾತಂತ್ರ್ಯ ಹೋರಾಟ, ತಾವು ಗಾಂಧೀಜಿಯಂತೆ ದೇಶದ ಚೈತನ್ಯದ ಪ್ರತಿಮೆ ಎಂಬ ಭ್ರಮೆಯಲ್ಲಿದ್ದಾರೆ.

ಭ್ರಷ್ಟಾಚಾರಕ್ಕೆ ಪ್ರತಿರೋಧ ಒಡ್ಡಲು ಸಂಪೂರ್ಣವಾಗಿ ಭಿನ್ನವಾದ ಪರಿಹಾರೋಪಾಯಗಳ ಅಗತ್ಯವಿದೆ. ಈ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಎರಡು ಕ್ರಮಗಳು ಮಹತ್ವದ್ದಾಗುತ್ತವೆ. ಮೊದಲನೆಯದು, ಆಡಳಿತಾತ್ಮಕ ವಿಧಾನಗಳಲ್ಲಿ ಒಂದು ಮೂಲಭೂತ ಬದಲಾವಣೆ. ಈಗ ಆಡಳಿತವನ್ನು ಅತ್ಯಂತ ರಹಸ್ಯದ ಭಾವನೆಯಿಂದ ನಡೆಸಲಾಗುತ್ತಿದೆ, ನಿರ್ಣಯ ಪ್ರಕ್ರಿಯೆ ಸಾರ್ವಜನಿಕರಿಗೆ ತಿಳಿದಿಲ್ಲ. ಇದು ಅಧಿಕಾರಶಾಹಿಗೆ ಮತ್ತು ರಾಜಕೀಯ ಮಂದಿಗೆ ವ್ಯವಸ್ಥೆಯಲ್ಲಿ ತಮಗೆ ಅನುಕೂಲವಾಗುವಂತೆ ಕೈವಾಡ ನಡೆಸಲು ಸಾಕಷ್ಟು ಅವಕಾಶ ಕಲ್ಪಿಸುತ್ತದೆ. ಇದರ ಸ್ಥಾನದಲ್ಲಿ ಒಂದು ಪಾರದರ್ಶಕ ವ್ಯವಸ್ಥೆಯನ್ನು ತರಬೇಕು, ಈ ಮೂಲಕ ಸಾರ್ವಜನಿಕರಿಗೆ ಪ್ರಕ್ರಿಯೆಗಳು ಮತ್ತು ವಿಧಾನಗಳ ಬಗ್ಗೆ ಘಟನೆ ಸಂಭವಿಸಿದ ಮೇಲೆ ತಿಳಿಯುವ ಮೊದಲು ಅದು ನಡೆಯುತ್ತಿರುವಾಗಲೇ ತಿಳಿಯುವಂತಾಗಬೇಕು. ಸಾರ್ವಜನಿಕ ಉದ್ದಿಮೆಗಳ ಹೂಡಿಕೆಗಳ ಹಿಂಪಡಿಕೆಯಲ್ಲಿ ಅರುಣ್ ಶೌರಿ ಕುದುರಿಸಿದ ವ್ಯವಹಾರದ ಶರತ್ತುಗಳ ಬಗ್ಗೆ ಸಾರ್ವಜನಿಕರಿಗೆ ಗೊತ್ತಾಗುವಂತಿದ್ದರೆ, ಅದರಲ್ಲಿ ಒಳಗೊಂಡಿದ್ದ ಭ್ರಷ್ಟಾಚಾರವನ್ನು ಪ್ರತಿರೋಧಿಸಬಹುದಿತ್ತು. ಅದೇ ರೀತಿ ದೂರಸಂಪರ್ಕ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದ ವಿಷಯಗಳಲ್ಲೂ ಸಾಧ್ಯವಿತ್ತು.

ಎರಡನೆಯದಾಗಿ, ಅಧಿಕಾರದ ಮತ್ತು ನಿರ್ಣಯ ಪ್ರಕ್ರಿಯೆಯ ವಿಕೇಂದ್ರೀಕರಣ, ಆಮೂಲಕ ಜವಾಬ್ದಾರಿಕೆ ವೈಯಕ್ತಿಕವಾಗದೆ, ಸಾಮೂಹಿಕವಾಗುವುದು ಭ್ರಷ್ಟಾಚಾರವನ್ನು ಪ್ರತಿರೋಧಿಸಲು ಅಗತ್ಯವಾದ ಪೂರ್ವಭಾವಿ ಶರತ್ತು. ವ್ಯಕ್ತಿಗೆ ಕೊಟ್ಟಿರುವ ವಿವೇಚನಾ ಅಧಿಕಾರ ಭ್ರಷ್ಟಾಚಾರದ ಮೂಲದಲ್ಲಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವವನ್ನು ಆಳಗೊಳಿಸುವುದೇ ಏಕೈಕ ಪರಿಹಾರ. ಜನ ಲೋಕಪಾಲ ಮಸೂದೆಯಾಗಲೀ, ಲೋಕಪಾಲ ಮಸೂದೆಯಾಗಲೀ ಈ ಮೂಲಭೂತ ಸಮಸ್ಯೆಗಳನ್ನು ಪರಿಶೀಲಿಸಿಯೇ ಇಲ್ಲ.

ಪ್ರಜಾಪ್ರಭುತ್ವವನ್ನು ವಿಸ್ತಾರಗೊಳಿಸಲು ಚುನಾವಣಾ ಪ್ರಾತಿನಿಧ್ಯದ ವಿಧಾನದಲ್ಲಿ ಅಗತ್ಯವಾದ ಬದಲಾವಣೆಗಳನ್ನು ತರಬೇಕಾಗುತ್ತದೆ. ಚುನಾವಣಾ ಯಶಸ್ಸನ್ನು ಪಡೆಯುವ ಈಗಿನ ವಿಧಾನವು, ಮತದಾನದ ಹಕ್ಕನ್ನು ಚಲಾಯಿಸುವ ಬಹುಸಂಖ್ಯಾತ ಜನರ ಬೆಂಬಲವನ್ನು ಪಡೆಯಬೇಕೆಂಬ ಖಾತ್ರಿ ನೀಡುವುದಿಲ್ಲ. ಬಹುಸಂಖ್ಯಾತರ ಪರವಾಗಿ ಅಧಿಕಾರ ಚಲಾಯಿಸುವವರು ವಾಸ್ತವದಲ್ಲಿ ಅಲ್ಪಸಂಖ್ಯಾತರ ಬೆಂಬಲವನ್ನು ಮಾತ್ರ ಹೊಂದಿದ್ದಾರೆ. ಸ್ಪರ್ಧಿಸಿದವರ ಪೈಕಿ ಮೊದಲು ಬಂದವರು ಚುನಾಯಿತರಾಗುವ ಬಹು–ಪಕ್ಷಗಳ ವ್ಯವಸ್ಥೆಯಲ್ಲಿ ಇದು ಅಂತರ್ಗತವಾಗಿದೆ. ಇಂತಹ ಪರಿಸ್ಥಿತಿಯು ಪ್ರಜಾಪ್ರಭುತ್ವ ಸಂಸ್ಥೆಗಳ ಪ್ರಾತಿನಿಧಿಕ ಲಕ್ಷಣದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

ಈ ಅಸ್ತಿತ್ವದಲ್ಲಿರುವ ಸಾಮಾಜಿಕ ಪರಿಸ್ಥಿತಿಗಳಲ್ಲಿ ನೇರ ಚುನಾವಣೆಯನ್ನು ಆಧರಿಸಿದ ಪ್ರಾತಿನಿಧಿನಿಕ ವ್ಯವಸ್ಥೆಯ ಮುಕ್ತ ಮತ್ತು ನ್ಯಾಯಸಮ್ಮತ ಕಾರ್ಯಚರಣೆಯು ನಿಜವಾಗಿಯೂ ಯಶಸ್ವಿಯಾಗಿದೆಯಾ ಎಂಬುದು ಮತ್ತೊಂದು ಪ್ರಶ್ನೆಯಾಗಿದೆ. ಭಾರತದ ರಾಜಕೀಯ ವರ್ಗವು ಸಮಾಜದ ಶ್ರೀಮಂತ, ವಿದ್ಯಾವಂತ ಮತ್ತು ಸಾಮಾಜಿಕವಾಗಿ ಶಕ್ತಿಶಾಲಿಯಾದ ವಿಭಾಗಗಳಿಂದ ಬಂದಿವೆ. ಈ ವ್ಯವಸ್ಥೆಯು ಇವರ ಕೈಯಲ್ಲಿ ಎಷ್ಟೊಂದು ಸಿಕ್ಕಿಕೊಂಡಿದೆಯೆಂದರೆ, ಬಡ ಮತ್ತು ಅಂಚಿನ ಜನರು ಇದರ ಹತ್ತಿರ ಬರುವ ಅವಕಾಶಗಳೂ ಇಲ್ಲವಾಗಿವೆ. ಪರಿಣಾಮವಾಗಿ ಶಾಸನಸಭೆಗಳು ಮತ್ತು ಸಂಸತ್ತಿನಲ್ಲಿ ಅವರು ಪ್ರತಿನಿಧಿಸಲ್ಪಟ್ಟರೂ, ತಾವೇ ಪ್ರತಿನಿಧಿಸಲು ಕಷ್ಟವಾಗಿದೆ.

ಒಂದು ರಾಜಕೀಯ ಅಭಿಪ್ರಾಯ/ನಿಲುವಿನ ಪರವಾಗಿ ಪ್ರಾದೇಶಿಕವಾಗಿ ಅಥವಾ ರಾಷ್ಟ್ರೀಯವಾಗಿ ಜನತೆ ವ್ಯಕ್ತಪಡಿಸುವ ಅಭಿಪ್ರಾಯವು, ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯವಾಗಿ ಬಿಂಬಿತವಾಗದಿರುವ ಸಾಧ್ಯತೆಯೂ ಇದೆ. ಒಂದು ರಾಜಕೀಯ ಪಕ್ಷವು ಶೇ–20 ರಷ್ಟು ಮತಗಳನ್ನು ಪಡೆದರೂ ಸಂಸತ್ತಿನಲ್ಲಿ ಅದರ ಪ್ರಭಾವಕ್ಕೆ ಅನುಗುಣವಾಗಿ ಪ್ರಾತಿನಿಧ್ಯ ದೊರಕದಿರುವ ಸಾಧ್ಯತೆಯೂ ಇದೆ. ಕಳೆದ 60 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಪ್ರಸಕ್ತ ಪ್ರಾತಿನಿಧಿಕ ವಿಧಾನದ

ಪುಟ 21 ಕ್ಕೆ



ರಾಜ್ಯೋತ್ಸವ ಸಂದರ್ಭದಲ್ಲಿ ರಾರಾಜಿಸುತ್ತಿರುವ ಭ್ರಷ್ಟ ರಾಕ್ಷಸರು

ಭಾರತ ಮಾತೆಗೆ ಚೂರಿ ಹಾಕುವ ಸಂಘಪರಿವಾರದ 'ಸುಪುತ್ರರು'

ಜಯ
ಅಂಕಣಕಾರರು, ಜನಶಕ್ತಿ

'ಕರ್ನಾಟಕದ ' ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಹಿರಿಮೆಗೆ ಬಿಜೆಪಿ ಮತ್ತು ಸಂಘ ಪರಿವಾರ ಈಗಾಗಲೆ ಧಕ್ಕೆ ತಂದು ಬಿಟ್ಟಿದೆ. ಈಗ 'ಹಸುರಿನ ಗಿರಿಗಳ ಸಾಲೇ ನಿನ್ನಯ ಕೊರಳಿನ ಮಾಲೆ' ಎಂಬ ಕವಿವಾಣಿಗೂ ಗಂಭೀರ ಧಕ್ಕೆ ಬಂದಿದೆ. ಕರ್ನಾಟಕದ ಗಿರಿ ಪರ್ವತಗಳೇ ಮಾಯವಾಗುವ ಸಂದರ್ಭ ರಾಜ್ಯ ಬಿಜೆಪಿ ದರ್ಬಾರಿನಲ್ಲಿ. "ಬಣ್ಣಿಸಲಸದಳವೋ ನಮ್ಮಿ ತಾಯ್ನಲವೋ.." ಎಂದು ದೇಶ ಭಕ್ತಿಯ ಘೋಸು ನೀಡುವುದು ಸಂಘ ಪರಿವಾರದ ಯೋಜಿತ ವಂಚನೆ ಎಂಬುದು ಸ್ಪಷ್ಟವಾಗಿದೆ.

ಇಡೀ ವಿಶ್ವದಲ್ಲಿ ಬೆಳಕಿನಷ್ಟು ವೇಗದಲ್ಲಿ ಚಲಿಸುವುದು ಇನ್ನಾವುದೂ ಇಲ್ಲ ಎಂದು ಐನ್‌ಸ್ಟೀನ್‌ರ ಸಾಪೇಕ್ಷ ಸಿದ್ದಾಂತ ಹೇಳುತ್ತದೆ. ಆದರೆ ಜಿನೋೕವಾದ ಭೌತಶಾಸ್ತ್ರ ಸಂಶೋಧನಾ ಪ್ರಯೋಗಾಲಯದಲ್ಲಿ ಇತ್ತೀಚೆಗೆ ಜರುಗಿದ ಪ್ರಯೋಗದಲ್ಲಿ ವಸ್ತುವಿನ ಸಣ್ಣಾತಿಸಣ್ಣ ಕಣವಾದ ನ್ಯೂಟ್ರಿನೋ ಎಂಬುವುಗಳು ಬೆಳಕಿನ ವೇಗಕ್ಕಿಂತ ಹೆಚ್ಚಿನ ವೇಗದಲ್ಲಿ ಚಲಿಸಬಲ್ಲವು ಎಂಬಂತಹ ಫಲಿತಾಂಶ ಬಂದಿದ್ದು, ಇದರಿಂದ ಸಂಶಯಗೊಂಡು ಮತ್ತೊಮ್ಮೆ ಇದನ್ನು ಪರೀಕ್ಷಿಸಿಕೊಳ್ಳಲು ವಿಜ್ಞಾನಿಗಳು ಸಿದ್ದತೆ ನಡೆಸಿದ್ದಾರೆ. ನ್ಯೂಟ್ರಿನೋಗಳು ಬೆಳಕಿನ ವೇಗವನ್ನು ಮೀರಿಸುತ್ತವೆಯೋ ಇಲ್ಲವೋ ಆದರೆ ರಾಜ್ಯ ಬಿಜೆಪಿ ಸರ್ಕಾರದ ಇಡೀ ಮಂತ್ರಿ ಮಂಡಲ ಮತ್ತು ಶಾಸಕರು ಭಾಗಿಯಾಗಿರುವ ಭ್ರಷ್ಟಾಚಾರದ ಗಾತ್ರ ಮತ್ತು ವೇಗ ಮಾತ್ರ ಬೆಳಕು & ನ್ಯೂಟ್ರಿನೋ ಎರಡನ್ನೂ ಮೀರಿಸಿವೆ' ಎಂಬುದ'ರ'ಲ್ಲಿ ವಿಜ್ಞಾನಿಗಳಾದಿಯಾಗಿ ಯಾರಿಗೂ ಯಾವುದೇ ಸಂಶಯ ಇರುವುದಿಲ್ಲವಷ್ಟೆ.

ರಾಜ್ಯದ ಜನತೆಗೆ ಎರಡು ರೂಪಾಯಿಗೊಂದು ಕೆಜಿ ಅಕ್ಕಿ ನೀಡುವುದಾಗಿ ಮತ್ತು ಹತ್ತು ಹಲವು ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ–ಸಂಘಪರಿವಾರ, ಗಣಿ ಕಳ್ಳರು, ಭೂಗಳ್ಳರು ಮತ್ತು ಮಠಾಧೀಶರ ಹಿಡಿತಕ್ಕೆ ಸಿಲುಕಿ 'ಸಿಕ್ಕಿದೋರ್ಗೆ ಸೀರುಂಡೆ' ಎಂಬಂತೆ ಎಲ್ಲರೂ ಬಟಾಬಯಲೇ ಬೆತ್ತಲಾಗಿ ರಾಜ್ಯದ ಬೊಕ್ಕಸ ಮತ್ತು ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿಯಾದಿಯಾಗಿ ಪರಪ್ಪನ ಅಗ್ರಹಾರ ಸೇರುತ್ತಿರುವ ಮಂತ್ರಿ ಮಹೋದಯರ ಸಂಖ್ಯೆ ದಿನದಿಂದ ದಿನಕ್ಕೆ



ಭ್ರಷ್ಟ ಬಿಜೆಪಿ ಸರ್ಕಾರದ ಪ್ರಮುಖ ಹಗರಣಗಳು		
ಕ್ರಮ ಸಂಖ್ಯೆ	ಹಗರಣದ ವಿವರ	ರಾಜ್ಯ ಬೊಕ್ಕಸಕ್ಕೆ ನಷ್ಟ (ರೂ. ಕೋಟಿಗಳಲ್ಲಿ)
1	ಲೋಕಾಯುಕ್ತ ವರದಿಯಂತೆ 2006 –2010 ರ ಅವಧಿಯಲ್ಲಿ ಅಕ್ರಮವಾಗಿ ರಫ್ತಾಗಿರುವ 2.98 ಕೋಟಿ ಮೆಟ್ರಿಕ್ ಟನ್ ಕಬ್ಬಿಣದ ಅದಿರು . ಬೇಲೆಕೇರಿ ಬಂದರಿನಲ್ಲಿ ಲೋಕಾಯುಕ್ತರು ಮುಟ್ಟುಗೋಲು ಹಾಕಿಕೊಂಡಿದ್ದ ಕೋಟ್ಯಾಂತರ ರೂಪಾಯಿಯ ಅದಿರನ್ನು ಕಳ್ಳದಾರಿಯಲ್ಲಿ ರಫ್ತು ಮಾಡಿರುವುದು.	16,085 ಕೋಟಿ
2	ಲೋಕಾಯುಕ್ತ ವರದಿಯಲ್ಲಿ ತಿಳಿಸಿರುವಂತೆ ಸರ್ಕಾರದ ಬೊಕ್ಕಸಕ್ಕೆ ನೇರವಾಗಿ ರೂ. 16,085 ಕೋಟಿ ನಷ್ಟವಾಗಿದ್ದರೆ, ಪರೋಕ್ಷವಾಗಿ ಸರ್ಕಾರಕ್ಕೆ ಆಗಿರುವ ನಷ್ಟ	1.0 ಲಕ್ಷ ಕೋಟಿಗೂ ಹೆಚ್ಚು ಎಂಬ ಅಂದಾಜು
3	ರಾಜ್ಯದಲ್ಲಿ 12 ಲಕ್ಷ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಬೆಂಗಳೂರು ನಗರದ ಸುತ್ತಮುತ್ತಲಿನಲ್ಲೇ ಸುಮಾರು 40,000 ಎಕರೆ ಸರ್ಕಾರಿ ಭೂಮಿ ಭೂಗಳ್ಳರ ಕೈವಶದಲ್ಲಿದೆ.	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
4	ಅಕ್ರಮ ಗಣಿಗಾರಿಕೆಯಿಂದಾಗಿ 25000 ಎಕರೆ ಅರಣ್ಯ ಭೂಮಿ ನಾಶವಾಗಿದೆ. ಬಳ್ಳಾರಿ, ಚಿತ್ರದುರ್ಗ, ತುಮಕೂರು ಪ್ರದೇಶಗಳಲ್ಲಿ ಅಕ್ರಮವಾಗಿ ಖನಿಜ ಸಂಪತ್ತು ಲೂಟಿಯಾಗಿದ್ದು ಸುತ್ತಮುತ್ತಲ ಪರಿಸರಕ್ಕೆ ಧಕ್ಕೆಯಾಗಿರುವುದು.	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
5	ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ರವರು ತನ್ನದೇ ಕಂಪನಿಗೆ 330 ಎಕರೆ ಸರ್ಕಾರಿ ಜಮೀನನ್ನು ಕಡಿಮೆ ಬೆಲೆಗೆ ಪಡೆದುಕೊಂಡು ಜೈಲು ಸೇರಿರುವುದು	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
6	ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಯವರು ಮತ್ತು ಯಡಿಯೂರಪ್ಪನವರು ಷಾಮೀಲಾಗಿ ಭೂ ಸ್ವಾಧೀನಕ್ಕೆ ಹೊರಡಿಸಿದ್ದ ಅಧಿಸೂಚನೆ ಹಿಂತೆಗೆದುಕೊಂಡು ನೂರಾರು ಎಕರೆಯನ್ನು ಕೈಬಿಟ್ಟಿದ್ದು, ನಂತರ ಅದೇ ಜಮೀನನ್ನು ದುಬಾರಿ ಬೆಲೆಗೆ ಮಾರಿರುವುದು	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
7	ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸ್ವಾಧೀನಕ್ಕೆ ಹೊರಡಿಸಿದ್ದ ಅಧಿಸೂಚನೆ ಹಿಂತೆಗೆದುಕೊಂಡು 27 ಎಕರೆಯನ್ನು ಕೈಬಿಟ್ಟಿದ್ದು, ನಂತರ ಅದೇ ಜಮೀನನ್ನು ತಾನು ಖರೀದಿಸಿ ದುಬಾರಿ ಬೆಲೆಗೆ ಮಾರಿರುವುದು	130 ಕೋಟಿ
8	ವೈದ್ಯಕೀಯ ಸಚಿವ ರಾಮದಾಸ್ ಮೈಸೂರಿನಲ್ಲಿ ಭೂಕಬಳಿಕೆ ಮಾಡಿರುವ ಕುರಿತು ಜಿಲ್ಲಾಧಿಕಾರಿ ವರದಿ ನೀಡಿದ್ದಾರೆ.	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
9	ಯಡಿಯೂರಪ್ಪ, ಮಕ್ಕಳು ಮತ್ತು ಅಳಿಯಂದಿರು ನಡೆಸಿರುವ ಭೂಮಿ ಹಗರಣಗಳು. ಇದರಿಂದ ಯಡಿಯೂರಪ್ಪ ಜೈಲು ಸೇರಿರುವುದು.	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
10	ಸಚಿವೆ ಶೋಭಾ ಕರಂದ್ಲಾಜೆ ಭೂಮಿ ಅವ್ಯವಹಾರ	ರೂ. 10 ಕೋಟಿ
11	ಗೃಹ ಸಚಿವ ಅಶೋಕ್ ನಡೆಸಿರುವ ಭೂಸ್ವಾಧೀನ ಅಧಿಸೂಚನೆ ಹಿಂತೆಗೆದುಕೊಂಡು ನಡೆಸಿರುವ ಭೂಮಿ ಅವ್ಯವಹಾರ	ಬೆಲೆ ಮೌಲ್ಯ ಮಾಪನ ಆಗಬೇಕಿದೆ.
12	ಯಡಿಯೂರಪ್ಪ ಆರ್ ಎಸ್ ಎಸ್ ಮುಖಂಡರಿಗೆ ಮತ್ತು ಇತರರಿಗೆ ಬಿಡಿಎ, ಬೃಹತ್ ಬೆಂಗಳೂರು ನಗರ ನಿಗಮ ಗಳಿಂದ ಸರ್ಕಾರಿ ಭೂಮಿ ಹಂಚಿಕೆ ಮಾಡಿದ್ದು ಇವುಗಳ ಮಾರುಕಟ್ಟೆ ಬೆಲೆ ಕೋಟ್ಯಾಂತರ ರೂಪಾಯಿ ಇದೆ.	ರೂ. 50 ಕೋಟಿ
	ದುರ್ಲಾಭ ಪಡೆದಿರುವ ಆರ್‌ಎಸ್‌ಎಸ್ ಸಂಸ್ಥೆಗಳು:	
	ಅ. ಜನ ಸೇವಾ ವಿದ್ಯಾ ಕೇಂದ್ರಕ್ಕೆ 10 ಎಕರೆ ಸರ್ಕಾರಿ ಜಮೀನನ್ನು ಕೆಲವೇ ಲಕ್ಷಗಳಿಗೆ ನೀಡಲಾಗಿದೆ	ರೂ. 15 ಕೋಟಿ
	ಆ. ರಾಷ್ಟ್ರೋತ್ಥಾನ ಪರಿಷತ್ ಆರೋಗ್ಯ ಕೇಂದ್ರ ನಡೆಸಲು ಬೆಂಗಳೂರಿನ ಸದಾಶಿವನಗರದಲ್ಲಿ ಭೋಗ್ಯಕ್ಕೆ ನೀಡಿರುವ ಸರ್ಕಾರಿ ಭೂಮಿ 906.2 ಚ.ಮೀಟರ್.	ರೂ. 13 ಕೋಟಿ
	ಇ. ಸಂಸ್ಕಾರ ಭಾರತಿ ಮತ್ತು ಹಿಂದೂ ಜಾಗರಣ ವೇದಿಕೆ ಎರಡಕ್ಕೂ 2000 ಚ. ಅಡಿ ಭೂಮಿ ಹಂಚಿಕೆಯಾಗಿದೆ.	ರೂ. 5ಕೋಟಿ

	ಈ. ಅನಂತ ಶಿಶು ನಿವಾಸಕ್ಕೆ 3585 ಚ.ಮೀಟರ್ ಮತ್ತು ಮಹಿಳಾ ದಕ್ಷಕ ಸಮಿತಿಗೆ 396 ಚ.ಮೀಟರ್ ಸರ್ಕಾರಿ ಭೂಮಿ ಹಂಚಿಕೆಯಾಗಿದೆ.	ರೂ. 5 ಕೋಟಿ
	ಉ. ಕಲೆ, ಕ್ರೀಡೆ, ಸಂಸ್ಕೃತಿ ಮತ್ತು ಸಾಮಾಜಿಕ ಸೇವೆಗಳಲ್ಲಿರುವವರಿಗೆ 'ಜಿ' ವಿಭಾಗದಲ್ಲಿ ಸರ್ಕಾರಿ ನಿವೇಶನ ಹಂಚಿಕೆ ಮಾಡಬಹುದು ಎಂಬ ಸರ್ಕಾರಜ ನಿಯಮಾವಳಿಗಳನ್ನು ಗಾಳಿಗೆ ತೂರಿ ಸಂಘ ಪರಿವಾರ, ಕಾರ್ಮಿಕ ಸಂಘಟನೆ, ಭಾರತೀಯ ಮಜದೂರು ಸಂಘ, ಸ್ಥಳೀಯ ಪ್ರಚಾರಕರು, ಆರ್‌ಎಸ್‌ಎಸ್ ಪ್ರಕಟಣೆಗೆ ಬರೆಯುವ ಲೇಖಕರು ಇವರಿಗೆಲ್ಲ ಕೋಟ್ಯಾಂತರ ಬೆಲೆಯ ನಿವೇಶನ ಹಂಚಿಕೆ ಮಾಡಲಾಗಿದೆ.	ಬೆಲೆ ಅಂದಾಜಿಸ ಬೇಕ

ಬೆಳೆಯುತ್ತಿದೆ. ಲೋಕಾಯುಕ್ತರ ವರದಿಯನ್ನು ಅಂಗೀಕರಿಸಿ ಕ್ರಮ ಕೈಗೊಳ್ಳುವುದಾದಲ್ಲಿ ಇಡೀ ಮಂತ್ರಿ ಮಂಡಲ ಮತ್ತು ಶಾಸಕರೆಲ್ಲರೂ ಸೆರೆಮನೆಯಲ್ಲಿರಬೇಕಾಗುತ್ತಿತ್ತು.

ಪರಿಸರ, ಅರಣ್ಯ ನಾಶ ಮತ್ತು ಖನಿಜ ಸಂಪತ್ತು ಲೂಟಿ:

2006-10 ರ ಅವಧಿಯ ನಾಲ್ಕು ವರ್ಷಗಳಲ್ಲಿ ಅಕ್ರಮವಾಗಿ ರಫ್ತಾಗಿರುವ 2.98 ಕೋಟಿ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಮೌಲ್ಯ ರೂ. 16,085 ಕೋಟಿ ಮೊತ್ತವನ್ನು ರಾಜ್ಯ ಬೊಕ್ಕಸಕ್ಕೆ ನಷ್ಟ ಮಾಡಲಾಗಿರುವ ಕುರಿತು ಲೋಕಾಯುಕ್ತರ ವರದಿಯಲ್ಲಿದೆ. ಗಣಿ ಲೂಟಿ ಇದೇ ಪ್ರಮಾಣದಲ್ಲಿ ಮುಂದುವರಿದಲ್ಲಿ ಕೇವಲ 20 ವರ್ಷಗಳಲ್ಲಿ ಬಳ್ಳಾರಿ ಭಾಗದ ಗಣಿ ಪ್ರದೇಶಗಳಲ್ಲಿನ ಖನಿಜ ಸಂಪತ್ತೆಲ್ಲವೂ ಬರಿದಾಗಿ ಮುಂದಿನ ಪೀಳಿಗೆಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಏನೂ ಉಳಿದಿರುವುದಿಲ್ಲ. ಅಲ್ಲದೆ ಅಕ್ರಮ ಗಣಿಗಾರಿಕೆಯಿಂದಾಗಿ 25000 ಎಕರೆ ಅರಣ್ಯ ಭೂಮಿ ನಾಶವಾಗಿದೆ. ಈ ನಷ್ಟಗಳು ನೇರವಾಗಿ ಬೊಕ್ಕಸಕ್ಕೆ ಉಂಟಾಗಿದ್ದರೆ ಪರೋಕ್ಷವಾಗಿ ಇದಕ್ಕಿಂತಲೂ ಹಲವು ಪಟ್ಟು ಪರಿಣಾಮಗಳು ಸುತ್ತಲಿನ ಅಂತರ್ಜಲ, ಪರಿಸರ, ಕೃಷಿ, ಅರಣ್ಯ, ವಾಯುಗುಣ ಮತ್ತು ಜೀವವೈವಿಧ್ಯತೆಯ ಮೇಲುಂಟಾಗಿದೆ. ಪರಿಸರದ ಮೇಲಿನ ಇಂತಹ ದುಷ್ಪರಿಣಾಮಗಳು ಸಹಜವಾಗಿ ಜನಜೀವನದ ಮೇಲೂ ಪರಿಣಾಮ ಉಂಟು ಮಾಡಿವೆ. ಅಕ್ರಮವಾಗಿ ಲಕ್ಷಾಂತರ ಟನ್ ತ್ಯಾಜ್ಯ ಧೂಳನ್ನು ಕೃಷಿ ಭೂಮಿ ಮೇಲೆ ಸುರಿದಿರುವುದರಿಂದ ಭೂಮಿಯ ಫಲವತ್ತತೆ ಹಾಳಾಗಿದ್ದು ಅಲ್ಲಿ ಕೃಷಿ ಮಾಡಲಾಗುವುದಿಲ್ಲ. ಕಣಿವೆ ಪ್ರದೇಶಗಳ ಮೇಲೆ ತ್ಯಾಜ್ಯ ಧೂಳು ಸುರಿದಿರುವುದರಿಂದ ಧೂಳಿನ ಕಣಗಳು ಎಲ್ಲೆಂದರಲ್ಲಿ ಹಾರಾಡಿ ಮನುಷ್ಯರ ಸ್ವಾಸ್ಥ್ಯಕ್ಕೆ ಮಾತ್ರವಲ್ಲದೆ ಜೀವವೈವಿಧ್ಯತೆಗೆ ಅಪಾಯ ತಂದಿವೆ.

ರಾಜ್ಯದ ಪರಿಸರ ಜೀವವೈವಿಧ್ಯತೆಯ ಮೇಲೆ ನಡೆಯುತ್ತಿರುವ ಅನಿಯಂತ್ರಿತ ಧಾಳಿಯ ತೀವ್ರತೆ ಮತ್ತು ಅಗಾಧತೆಯು ಪರಿಸರ ಸಮತೋಲನದ ಮೇಲೆ ಇನ್ನಿಲ್ಲದಂತಹ ಹೊಡೆತ ನೀಡಿದ್ದು, ಈ ದುಷ್ಪರಿಣಾಮಗಳಿಂದುಂಟಾಗುವ ಆರ್ಥಿಕ, ಜೈವಿಕ, ಸಾಮಾಜಿಕ, ಔದ್ಯೋಗಿಕ ನಷ್ಟವನ್ನು ಇನ್ನೂ ಅಂದಾಜು ಮಾಡಬೇಕಾಗಿದೆ. ಗಣಿಗಳಲ್ಲಿ, ಅದಿರು ಸಾಗಣೆ ಉದ್ದಿಮೆಗಳಲ್ಲಿ ಲಕ್ಷಾಂತರ ಕಾರ್ಮಿಕರನ್ನು ಗುಲಾಮರಂತೆ ದುಡಿಸಿಕೊಂಡು ನಿರ್ಗತಿಕ ಸ್ಥಿತಿಗೆ ತಳ್ಳಲಾಗಿದ್ದು, ಇಂದು ಅವರು ಬೀದಿಗೆ ಬಿದ್ದಿದ್ದಾರೆ.

ಅಕ್ರಮ ಕಪ್ಪುಶಿಲೆ ಸಾಗಣೆ:

ಅಕ್ರಮ ಕಪ್ಪುಶಿಲೆ ಗಣಿಗಾರಿಕೆಯನ್ನು ರಾಜ್ಯದಾದ್ಯಂತ ಅವ್ಯಾಹತವಾಗಿ ನಡೆಸಲು ಅವಕಾಶ ಕೊಟ್ಟಿರುವ ಸರ್ಕಾರ ಕಂಡೂ ಕಾಣದಂತೆ ಕಣ್ಣು ಮುಚ್ಚಿ ಕುಳಿತಿದೆ. ಮಾಧ್ಯಮಕ್ಕೆ ಬಯಲಾದಂತಹ ಪ್ರಕರಣಗಳಲ್ಲಿ ಮಾತ್ರವೇ ಕ್ರಮ ಕೈಗೊಳ್ಳುತ್ತಿದೆಯಷ್ಟೆ. ಚಾಮರಾಜನಗರವೊಂದರಲ್ಲೇ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ರೂ. 1687 ಕೋಟಿ ನಷ್ಟವಾಗಿದ್ದು ಮೂರು ಗಣಿ ಕಂಪನಿಗಳು ಭಾಗಿಯಾಗಿರುವುದು ಕಂಡು ಬಂದಿದೆ. ಇವಲ್ಲದೆ ಗ್ರಾನೈಟ್ ಕಲ್ಲು, ಜಲ್ಲಿ ಕಲ್ಲುಗಳಿಗಾಗಿ ಬಂಡೆಗಳನ್ನೇ ಅಕ್ರಮ ಗಣಿಗಾರಿಕೆ ಮೂಲಕ ಹರಿಯ ಬಿಡಲಾಗುತ್ತಿದೆ.


RSS LEADERS WHO SHARED THE LAND LARGESSE

WHO: **D.K. SADASHIVA,**
vice-president, Bharatiya Mazdoor Sangh
LAND: 2,400 sq ft in Valgerahalli
FOR: ₹10 lakh
MARKET VALUE: **₹1 crore.**

WHO: **MALLIKA PRASAD,**
MLA. Her husband, Prasad Bhandari, is a Pracharak in Dakshina Kannada district
LAND: 4,000 sq ft in J.P. Nagar
FOR: An unknown sum
MARKET VALUE: **₹4 crore**

WHO: **SRIDHAR PATLA,**
a Bangalore-based RSS functionary
LAND: 4,000 sq ft in Sir M. Visvesvaraya Layout

Mallika Prasad got a 4,000 sq ft plot.

FOR: Less than ₹10 lakh
MARKET VALUE:
₹1.25 crore (estimated)

WHO: **P MALATHI,**
a columnist for Kannada publications

brought out by Rashtrotthana Parishath
LAND: 1,200 sq ft in HSR Layout
FOR: An unknown sum
MARKET VALUE: **₹1.2 crore**

WHO: **K.R. MALLIKARJUNAPPA,**
BJP MLC. He actively participated in RSS meetings in Mysore
LAND: 4,000 sq ft in HSR Layout
FOR: An unknown sum
MARKET VALUE: **Over ₹4 crore**

Other RSS functionaries, who benefited from Yeddyurappa's generosity include, [illegible] 2,400 sq ft in HSR Layout in Bangalore [illegible] RSS cadre MLAs from North Karnataka and [illegible] 2,400 sq ft in OMBR Layout

ಭೂಮಿ ಲೂಟಿ:

ರಾಜ್ಯದಲ್ಲಿ 12 ಲಕ್ಷ ಎಕರೆ ಮತ್ತು ಬೆಂಗಳೂರು ಸುತ್ತಮುತ್ತಲು 40,000 ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ ಎಂದು ರಾಜ್ಯ ಸರ್ಕಾರವೇ ನೇಮಿಸಿದ್ದ

ಬಾಲಕೃಷ್ಣನ್ ನೇತೃತ್ವದ ಸಮಿತಿ ವರದಿ ಮಾಡಿದ್ದರೂ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ.

ಅಕ್ರಮ ಮರಳು ಸಾಗಣೆ ದಂಧೆ:

ಅಕ್ರಮವಾಗಿ ಮರಳು ದಂಧೆ ನಡೆಸಲು ಬಿಟ್ಟಿದ್ದ ಸರ್ಕಾರ ರಾಜ್ಯದಾದ್ಯಂತ ಎಲ್ಲ ನದಿ, ಕೆರೆ, ಹಳ್ಳಗಳಲ್ಲಿ ಮರಳು ತೆಗೆದು ನದಿ ಪಾತ್ರಕ್ಕೆ ಧಕ್ಕೆಯುಂಟಾಗುತ್ತಿದೆ. ಕೆರೆ, ಹಳ್ಳಗಳು ಅಂತರ್ಜಲ ಭರ್ತಿ ಮಾಡುವ ಸಾಮರ್ಥ್ಯ ಕಳೆದುಕೊಳ್ಳುತ್ತಿವೆ. ಈಗಾಗಲೇ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಉದಾಹರಣೆಗೆ ಭೀಮಾ ನದಿ ಪ್ರದೇಶದಲ್ಲಿ ಅಕ್ರಮ ಮರಳು ಸಾಗಿಸಲು ತನಗಿಷ್ಟ ಬಂದ ಶಾಸಕರು ಮತ್ತು ಅಧಿಕಾರಿಗಳಿಗೆ ಬೆಂಬಲ ನೀಡಿದ್ದ ಸರ್ಕಾರದ ಕ್ರಮದ ವಿರುದ್ಧ ಅಲ್ಲಿಯ ಸ್ಥಳೀಯರೇ ಹೋರಾಡಬೇಕಾಯಿತು.

ಸಂಘಪರಿವಾರಕ್ಕೆ ಯಡ್ಡಿ ಸರ್ಕಾರಿ ಭೂಮಿ ಪರಭಾರೆ – ರಾಜ್ಯೋತ್ಸವದ ಸುದ್ದಿ

ಯಡಿಯೂರಪ್ಪನನ್ನು ಪರಪ್ಪನ ಅಗ್ರಹಾರ ಜೈಲಿಗೆ ಎಳೆದುಕೊಂಡು ಹೋದಾಕ್ಷಣ ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆಯವರು ಮಾತನಾಡಿ ಈ ಘಟನೆ ಮತ್ತು ಭ್ರಷ್ಟಾಚಾರ ಪ್ರಕರಣಗಳು ಸಂಘಪರಿವಾರ ಮತ್ತು ಬಿಜೆಪಿಗೆ ಕೆಟ್ಟ ಹೆಸರು ತರುತ್ತಿವೆ ಎಂದು ಹೇಳಿದ್ದರು.

ಆದರೆ ಸಂಘ ಪರಿವಾರದ ಪ್ರಮುಖ ಪದಾಧಿಕಾರಿಗಳು ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರಿ ಭೂಮಿಯನ್ನು ಅತಿ ಕಡಿಮೆ ಬೆಲೆಗೆ ಹಂಚಿಕೆ ಮಾಡಿಸಿಕೊಂಡಿದ್ದು, ಇದರ ಬೆಲೆ ಮಾರುಕಟ್ಟೆಯಲ್ಲಿ ರೂ. 50 ಕೋಟಿ ಮೀರುತ್ತದೆನ್ನುವ ಸುದ್ದಿ ರಾಜ್ಯೋತ್ಸವ ಆಚರಣೆಯ ದಿನವೇ ಹೊರಬಿದ್ದಿದೆ.

ರಾಜ್ಯೋತ್ಸವದ ಆಶಯಗಳಿಗೆ ದ್ರೋಹ:

ಕರ್ನಾಟಕ ಜನತೆಯು ರಾಜ್ಯವನ್ನು ಭಾಷೆಯಾಧಾರದ ಮೇಲೆ ಒಗ್ಗೂಡಿಸಲು ಆ ಮೂಲಕ ತಮಗೆ ಉದ್ಯೋಗ, ಅನ್ನ, ಆರೋಗ್ಯ, ಶಿಕ್ಷಣ, ವಸತಿ, ಇತ್ಯಾದಿ ಮೂಲ ಸೌಲಭ್ಯಗಳನ್ನು ಪಡೆಯಲು ನಡೆಸಿದ ಏಕೀಕರಣ ಚಳುವಳಿಯ ಆಶಯಗಳನ್ನು ಆಳುವ ವರ್ಗಗಳು ಎಂದೋ ಗಾಳಿಗೆ ತೂರಿವೆ. ರಾಜ್ಯದ ಸಂಪತ್ತನ್ನು ಬಂಡವಾಳಿಗರು ಮತ್ತು ಭೂಮಾಲೀಕರಿಗೆ ವರ್ಗಾಯಿಸುತ್ತಾ ಶ್ರೀಮಂತ–ಬಡವರ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುತ್ತಾ ಜನತೆಯ ಬದುಕಿನ ಮೇಲೆ ಪ್ರಹಾರ ಮಾಡುತ್ತಿರುವುದಷ್ಟೇ ಅಲ್ಲ ಇಡೀ ನಿಸರ್ಗ ಸಂಪತ್ತಿನ ಲೂಟಿ ಮೂಲಕ ಪರಿಸರದ ಮೇಲೆ ಇನ್ನಿಲ್ಲದಂತಹ ಧಾಳಿ ನಡೆಸಲಾಗುತ್ತಿದೆ.

ಮತ್ತೊಂದೆಡೆ, ವಿದ್ಯಾರ್ಥಿಗಳು ಕಡಿಮೆ ಸಂಖ್ಯೆಯಲ್ಲಿರುವ ಕನ್ನಡ ಸರ್ಕಾರಿ ಶಾಲೆಗಳನ್ನು ಮುಚ್ಚುವುದಾಗಿ ಕರ್ನಾಟಕದ ಜನತೆಯ ಬದುಕಿಗೆ ಚೂರಿ ಹಾಕಲು ಹೊರಟಿರುವ ಸರ್ಕಾರಕ್ಕೆ ಕನ್ನಡ ಭಾಷೆಯಲ್ಲಿ ಓದಿ ಬದುಕು ರೂಪಿಸಿಕೊಳ್ಳಲು ಸಾಧ್ಯವೇ ಎಂಬ ಮಾತಿಗೆ ಸುಮಾರು 50 ವರ್ಷಗಳ ಹಿಂದೆ ಕುವೆಂಪು ಹೇಳಿದ್ದ ಮಾತುಗಳು ಮಾರ್ಮಿಕವಾಗಿವೆ: "ಭರತಖಂಡಕ್ಕೆ ಸ್ವಾತಂತ್ರ್ಯ ಬಂದು ಆರೇಳು ವರ್ಷಗಳಾದರೂ ದಾಸ್ಯಬುದ್ದಿ ತೊಲಗಿಲ್ಲ; ಮಾನವಮಾನಗಳ ಭೇದವೇ ನಮ್ಮವರಿಗೆ ತಿಳಿದಿಲ್ಲ. ಅಭಿಮಾನ್ಯ ಶೂನ್ಯರಿಗೆ ಮಾನವೆಲ್ಲಿಯದು? ನಾಲ್ಕಾರು ವರ್ಷಗಳ ಕಾಲ ಗೂಟಕ್ಕೆ ಬಿಗಿಸಿಕೊಂಡು ಅಲ್ಲಿಯೇ ಹಾಕಿದ ಎಂಜಲು ಮೂಳೆಗಳನ್ನು ತಿಂದು, ಅಷ್ಟರಿಂದಲೇ ಮೈ ಬೆಳೆಸಿಕೊಂಡ ನಾಯಿಯು ಸರಪಳಿಯನ್ನು ಕಡಿದು, ಒದ್ದರೂ ಅದು ಸ್ವಾತಂತ್ರ್ಯದ ಬೆಲೆಯರಿಯದೆ, ಗೂಟದ ಸುತ್ತ ತಾರಾಡುತ್ತದೆ. ಆಂಗ್ಲರ ಸುಪುತ್ರರಾದ ನಮ್ಮ ಜನ ತಮ್ಮ ಭಾಷೆಯ ಮೌಲ್ಯವನ್ನರಿಯದೆ ಆತ್ಮಗೌರವದ ಮಹಿಮೆಯನ್ನರಿಯದೆ ಇನ್ನೂ ಕತಲಲ್ಲಿ ಮುಗ್ಗರಿಸುತ್ತಿದೆ" ಎಂದು ಉತ್ತರಿಸಿದರಂತೆ. ಹೀಗೆ ಜನತೆಯನ್ನು ಅನಕ್ಷರತೆಯ ದಾಸ್ಯತೆಗೆ ಮತ್ತಷ್ಟು ನೂಕಲು ಬಿಜೆಪಿ ಮತ್ತು ಸಂಘಪರಿವಾರಗಳು ಶತಾಯಗತಾಯ ಪ್ರಯತ್ನ ನಡೆಸುತ್ತಿವೆ.


ಕನ್ನಡ ಭಾಷೆಯ ಉಳಿವಿನ ಜೊತೆಗೆ ಪ್ರಾದೇಶಿಕ ಅಸಮಾನತೆಯ ಅಳಿಸುವ ಆಶಯಗಳನ್ನು ಸಹ ಕನ್ನಡ ಏಕೀಕರಣ ಚಳುವಳಿ ಹೊಂದಿತ್ತು. ಆದರಿಂದು ಜನತೆ ಕಂಡ ಇವೆರಡೂ ಕನಸುಗಳಿಗೆ ತೀವ್ರತರದ ಪೆಟ್ಟು ಬಿದ್ದಿದೆ. ಡಾ: ನಂಜುಂಡಪ್ಪ ವರದಿಯ ಪ್ರಕಾರ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಸರ್ಕಾರಗಳು ಒಂದು ಸೀಮಿತ ವರ್ಗಕ್ಕೆ ಮಾತ್ರವೇ ಹಣದ ಹರಿವನ್ನು ಒದಗಿಸುತ್ತಾ ಬಹುಸಂಖ್ಯಾತ ಜನತೆಗೆ ದ್ರೋಹ ಬಗೆಯುವುದನ್ನು ಮುಂದುವರೆಸಿವೆ. ಈ ಕಾರ್ಯದಲ್ಲಿ ಬಿಜೆಪಿಯಂತೂ ಮುಂಚೂಣಿಯಲ್ಲಿದೆ.

ತೀವ್ರಗೊಳ್ಳುತ್ತಿರುವ ಅಸಮಾನತೆ ಮತ್ತು ಸಂಕಷ್ಟಗಳು:

ಕೃಷಿಕರು, ಕೂಲಿಕಾರರು ಮತ್ತು ಅಸಂಘಟಿತ ಕಾರ್ಮಿಕರು ಸ್ಥಿತಿ ಇನ್ನಷ್ಟು ಸಂಕಟಕ್ಕೆಡೆ ಮಾಡಿದೆ. ರಾಜ್ಯದ ವಿವಿಧ ವಲಯಗಳಿಗೆ ಹರಿಸಿದ ಪಾಲು ವಿವಿಧ ಯೋಜನೆಗಳ

ಅನುಷ್ಠಾನದ ಫಲ ಯಾರಿಗೆ ಅತ್ಯಗತ್ಯವಾಗಿ ದೊರಕಬೇಕಾಗಿದ್ದಿತೋ ಅವರಿಗೆ ದೊರೆಯುತ್ತಿಲ್ಲ. ಜನಸಾಮಾನ್ಯರ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿ, ಕೃಷಿ ಮತ್ತಿತರ ಕೈಕಸುಬುಗಳಲ್ಲಿ ನಿರತರಾದವರ ಬದುಕಿನಲ್ಲಿ ಗಮನಾರ್ಹವಾದ ಪ್ರಗತಿಯೂ ಆಗಿಲ್ಲ. ಕೃಷಿಯೇತರ ಕ್ಷೇತ್ರಗಳಿಗೆ ಹೋಲಿಸಿದರೆ, ಕೃಷಿ ಮತ್ತು ಕೃಷಿ ಸಂಬಂಧಿ ಕ್ಷೇತ್ರಗಳನ್ನು ಅವಲಂಬಿಸಿ ಉಪಜೀವನ ನಡೆಸುತ್ತಿರುವವರ ಆದಾಯದಲ್ಲಿ ಏರಿಕೆಯಾಗಿಲ್ಲ. ಪಟ್ಟಣದಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಗೌರವಯುತ ಜೀವನ ನಡೆಸಲೂ ಆಗದ ಜನತೆಯ ಪಾಲು ಹೆಚ್ಚುತ್ತಿದೆ. ಒಟ್ಟಾರೆ ಹೇಳುವುದಾದರೆ, ಜನತೆಯ ಒಂದು ವಿಶಾಲ ವರ್ಗವನ್ನು ಸಂಕಟದ ಪ್ರಪಂಚಕ್ಕೆ ತರುವುದರಲ್ಲಿ ನಮ್ಮ ಸರ್ಕಾರಗಳು ಯಶಸ್ವಿಯಾಗುತ್ತಿವೆ.





ಪ್ರಜಾಪ್ರಭುತ್ವ ವ್ಯವಸ್ಥೆಯನ್ನೆ ಕೊರೆದು ಹಾಕುವ
ಭ್ರಷ್ಟಾಚಾರವೆಂಬ ವ್ಯಾಧಿ

ಜಿ.ವಿ. ಶ್ರೀರಾಮರೆಡ್ಡಿ
ಮಾಜಿ ಶಾಸಕರು


ಬಿಜೆಪಿ ಪಕ್ಷದ ಕೋಮು ದ್ವೇಷದ ರಾಜಕಾರಣ ದೇಶದ ಪ್ರಜಾಪ್ರಭುತ್ವಕ್ಕೆ ಹೇಗೆ ಮಾರಕವೋ ಹಾಗೇ ಕರ್ನಾಟಕ ರಾಜ್ಯದಲ್ಲಿ ಅನಾವರಣಗೊಳ್ಳುತ್ತಿರುವ ಲಂಚ, ಲೂಟಿ, ಅಕ್ರಮ, ಆಮಿಷ, ಪ್ರಲೋಬನೆಗಳ ಬಿಜೆಪಿ ರಾಜಕರಣ ಪ್ರಜಾಪ್ರಭುತ್ವಕ್ಕೆ ನಿಜಕ್ಕೂ ಅಪಾಯಕಾರಿ.

ಬಂಡವಾಳಶಾಹಿ ವ್ಯವಸ್ಥೆಯು ಪ್ರಜಾಪ್ರಭುತ್ವವನ್ನು ಮತ್ತು ಅದರಿಂದ ಸ್ಥಾಪಿತವಾದ ಸಂಸದೀಯ ವಿಧಾನವನ್ನು ಅದು ತನ್ನ ವರ್ಗ ಶೋಷಣೆಗೆ ಒಂದು ರಾಜಕೀಯ ಅಸ್ತ್ರವನ್ನಾಗಿ ಉಪಯೋಗಿಸುತ್ತದೆಂದು 1948 ರಲ್ಲೇ ಕಾರ್ಲ್‌ಮಾರ್ಕ್ಸ್ ರವರು ತಿಳಿಸಿದ್ದಾರೆ. ಅಷ್ಟೆ ಅಲ್ಲ ಅದು ತನಗೆ ಉಪಯುಕ್ತವಲ್ಲವೆಂದು ತಿಳಿದರೆ ಅದನ್ನು ನಿರರ್ಥಕಗೊಳಿಸುತ್ತದೆ ಎಂದೂ ಹೇಳಿದ್ದಾರೆ. ಅದನ್ನೇ ಬಿ.ಜೆ.ಪಿ. ಎಂಬ ಫ್ಯಾಸಿಸ್ಟ್ ಸಂಘಟನೆ ಕರ್ನಾಟಕದಲ್ಲಿ ಮಾಡಿದ್ದು. 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿ.ಜೆ.ಪಿ.ಗೆ ಸ್ಪಷ್ಟ ಬಹುಮತ ಪಡೆಯಲಾಗಲಿಲ್ಲ. ಮೊದಲಿಗೆ ಆರು ಪಕ್ಷೇತರರನ್ನು ಅಸೆ ಅಮಿಷಗಳಿಂದ ತನ್ನ ಕಡೆಗೆ ಸೆಳೆದು ಸರ್ಕಾರವನ್ನು ರಚಿಸಿತು. ಇದಾದ ನಂತರ ಸುಭದ್ರ ಸರ್ಕಾರವನ್ನು ಕೊಡುವ ಹೆಸರಿನಲ್ಲಿ ಇತರೆ ಪಕ್ಷಗಳ ಶಾಸಕರ ಕೈಯಲ್ಲಿ ರಾಜಿನಾಮೆಗಳನ್ನು ಕೊಡಿಸಿ ತನ್ನ ಪಕ್ಷಕ್ಕೆ ಸೇರಿಸಿಕೊಂಡು ಪಕ್ಷದ ಚಿನ್ಹೆ ಮೇಲೆ ಚುನಾವಣೆಗಳಿಗೆ ನಿಲ್ಲಿಸಿ ಕೋಟಿಗಟ್ಟಲೆ ಹಣ ಸುರಿದು ಗೆಲ್ಲಿಸಿ ತನ್ನ ಶಾಸಕರನ್ನಾಗಿ ಮಾಡಿಕೊಂಡಿತು. ಇದು ಎರಡು ರೀತಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಾಕಿದ ಕೊಡಲಿಪೆಟ್ಟು ಮತ್ತು ಆ ವ್ಯವಸ್ಥೆಗೆ ಮಾಡಿದ ಅವಹೇಳನ. ಒಂದನೇ ಅಪಾಯ ಪ್ರಜಾಪ್ರಭುತ್ವವನ್ನು ಮತ್ತು ಅದರ ಅರ್ಥವನ್ನು ನಿರರ್ಥಕಗೊಳಿಸಿದ್ದು, ಎರಡನೆಯದು ಇಡೀ ಸಂಸದೀಯ ವ್ಯವಸ್ಥೆಯನ್ನೇ ಅವಹೇಳನ ಮಾಡಿ ಇಡೀ ದೇಶದ ಜನತೆಯನ್ನೇ ಬೆಚ್ಚಿ ಬೀಳಿಸಿದ್ದು, ಇದರ ನಿಜವಾದ ಅರ್ಥ, ಹೇಗೆ ಒಂದು ಬಂಡವಾಳಶಾಹಿ ವರ್ಗವು ತನ್ನ ಫ್ಯಾಸಿಸ್ಟ್ ರಾಜಕೀಯ ಧೋರಣೆಯಿಂದ ಇಡೀ ಸಂಸದೀಯ ಪ್ರಜಾಪ್ರಭುತ್ವವನ್ನು ತನ್ನ ಹಿತಾಸಕ್ತಿಗೋಸ್ಕರ ಉಪಯೋಗಿಸಬಹುದೆಂದು ಅರ್ಥವಾಗುತ್ತದೆ. ಸಂಸದೀಯ ಪ್ರಜಾಪ್ರಭುತ್ವವನ್ನು ಒಂದು

ಪವಿತ್ರ ವ್ಯವಸ್ಥೆಯೆಂದು ದೇಶದ ಜನರನ್ನು ನಂಬಿಸಿ ಅದರ ಪಾವಿತ್ರತೆಯನ್ನು ಕಾಪಾಡುವ ವಾರಸುದಾರರೆಂದು ಹೇಳುವ ಈ ಬಂಡವಾಳಶಾಹಿ ವರ್ಗದ ಹಿತವನ್ನು ಕಾಪಾಡಲು ಮತ್ತು ರಕ್ಷಿಸಲು ಸಾಧ್ಯವಿಲ್ಲವೆಂದು ತಿಳಿದ ತಕ್ಷಣ ಅದನ್ನು ಕಸದ ಬುಟ್ಟಿಗೆ ಹೇಗೆ ಎಸೆಯುತ್ತದೆಂದು ಸಾಬೀತಾಗುತ್ತದೆ. ಇದೇ ಕೆಲಸವನ್ನು ಇಂದಿರಾಗಾಂಧಿಯವರು ಸಹ 1975ರಲ್ಲಿ ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರುವ ಮುಖಾಂತರ ತೋರಿಸಿಕೊಟ್ಟಿದ್ದರು. ಇಂದಿರಾಗಾಂಧಿಯ ಈ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ ಜೈಲು ಸೇರಿದ್ದ ಬಿ.ಜೆ.ಪಿ.ಗರು ಇಂದು ಕರ್ನಾಟಕದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇಡೀ ಸಂಸದೀಯ ವ್ಯವಸ್ಥೆಯ ಅರ್ಥವನ್ನೇ ತಿರುಚಿ ಬಿಟ್ಟಿದ್ದಾರೆ. ಇದು ಕೇವಲ ಕರ್ನಾಟಕದ ಬಿ.ಜೆ.ಪಿ. ಮಾತ್ರ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡಿದ ರಾಜಕೀಯ ತಂತ್ರವೆಂದು ಲಘುವಾಗಿ ಪರಿಗಣಿಸಬಾರದು, ಇದು ಬಿ.ಜೆ.ಪಿ. ಪಕ್ಷದ ರಾಷ್ಟ್ರೀಯ ನಾಯಕತ್ವದ ಸಮ್ಮತಿಯಿಂದಲೆ ನಡೆದಿದ್ದು, ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ದೊಡ್ಡದೊಡ್ಡ ವಿಷಯಗಳನ್ನು ಮಾತನಾಡುವ ಎಲ್.ಕೆ.ಅಡ್ವಾನಿಯವರು ಕರ್ನಾಟಕದ ಅವರ ಪಕ್ಷದ ಈ ಪ್ರಜಾಪ್ರಭುತ್ವ ವಿರೋಧಿ ಧೋರಣೆಯ ಬಗ್ಗೆ ದೇಶದ ಜನತೆಗೆ ಉತ್ತರ ಕೊಡಬೇಕಾಗುತ್ತದೆ.

ಇನ್ನೊಂದು ಮುಖ್ಯ ವಿಚಾರ. ಕರ್ನಾಟಕದಲ್ಲಿ ಬಿ.ಜೆ.ಪಿ.ಯು ವಿಧಾನಸಭೆಯನ್ನು ನಡೆಸಿಕೊಳ್ಳುತ್ತಿರುವ ವಿಧಾನವನ್ನು ಯಾರಾದರೂ ಸೂಕ್ಷ್ಮವಾಗಿ ಗಮನಿಸಿದರೆ ಅರ್ಥವಾಗುತ್ತದೆ. ಯಾವ ಶಾಸನ ಸಭೆಯು ಇಡೀ ರಾಜ್ಯದ ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ವೇದಿಕೆ ಆಗಬೇಕಿತ್ತೋ, ಸಂಸದೀಯ ವ್ಯವಸ್ಥೆಯಲ್ಲಿ ಯಾವ ಶಾಸನ ಸಭೆಯು ಬಹಳ ಪವಿತ್ರ ಎಂದು ಹೇಳಿ ಅದರ ಪಾವಿತ್ರತೆಯನ್ನು ರಕ್ಷಿಸುವ ಜವಾಬ್ದಾರಿ ನಮಗೆ ಮಾತ್ರವೇ ಇದೆಯೆಂದು ಬೊಗಳೆ ಹೊಡೆಯುತ್ತಾರೋ ಆ ಶಾಸನಸಭೆಯನ್ನೇ ಬಿ.ಜೆ.ಪಿ.ಯು ನಿರುಪಯುಕ್ತಗೊಳಿಸಿದ್ದು, ಅಷ್ಟೇ ಅಲ್ಲ ಇಡೀ ಶಾಸನಸಭೆಯನ್ನೇ ಅವಹೇಳನ ಮಾಡಿದೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನಸಭೆ ರಚನೆಯಾಗುವುದು ಜನರ ಆಶೋತ್ತರಗಳನ್ನು ಪೂರೈಸಲು ಮತ್ತು ಪ್ರಜಾಪ್ರಭುತ್ವವನ್ನು ಬಲಿಷ್ಠಗೊಳಿಸಿ ರಕ್ಷಿಸಲು. ಆದರೆ 3½ ವರ್ಷಗಳ ಬಿ.ಜೆ.ಪಿ ಆಡಳಿತಕ್ಕೆ ಬಂದಾಗಿನಿಂದ ಒಂದೇ ಒಂದು ಅಧಿವೇಶನದಲ್ಲೂ ಸಹ ರಾಜ್ಯದ ಜನತೆ ಎದುರಿಸುತ್ತಿರುವ ಯಾವುದೇ ಜ್ವಲಂತ ಸಮಸ್ಯೆಯನ್ನು ಚರ್ಚಿಸಲಿಲ್ಲ. ಸದನ ಸೇರಿದರೆ ಯಾವುದೋ ಕ್ಷುಲ್ಲಕ ಕಾರಣಕ್ಕೆ ಗಲಭೆ ಗೊಂದಲಗಳನ್ನು ಸೃಷ್ಟಿಸಿ ಹಠಾತ್ತಾಗಿ ಸದನವನ್ನು ಅನಿರ್ದಿಷ್ಟಕಾಲ ಮುಂದೂಡುವುದು ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ. ಸಂಸದೀಯ ಪದ್ಧತಿಯಲ್ಲಿ ವಿಧಾನಸಭೆಯನ್ನು 365 ದಿವಸಗಳಲ್ಲಿ ಕನಿಷ್ಠ 100 ದಿನಗಳಾದರೂ ಅಧಿವೇಶನ ನಡೆಸಬೇಕೆಂದು ನಿಯಮಗಳನ್ನು ರೂಪಿಸಲಾಗಿದೆ. ಅದರೆ ಇಡೀ 3½ ವರ್ಷದಲ್ಲಿ ಅದರ ಅರ್ಧದಷ್ಟು ದಿನಗಳು ಕೂಡ ಅಧಿವೇಶನ ನಡೆದಿಲ್ಲ.

ಸಂಸದೀಯ ವ್ಯವಸ್ಥೆಯಲ್ಲಿ ಶಾಸನ ಸಭೆಯ ಕರ್ತವ್ಯಗಳು ಬಹಳ ಮುಖ್ಯವಾಗಿ ಮೂರು, ಒಂದನೇಯದು ರಾಜ್ಯದ ಜನರ ಮತ್ತು ರಾಜ್ಯದ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ ಪರಿಹಾರವನ್ನು ಕಂಡು ಹಿಡಿಯುವುದು. ಎರಡನೆಯದು ಶಾಸನಗಳನ್ನು ರಚನೆ ಮಾಡುವುದು, ಮೂರನೇಯದು ವಿಧೇಯಕಗಳನ್ನು ಅನುಮೋದಿಸುವುದು. ಇವು ಶಾಸನ ಸಭೆಯ ಪ್ರಮುಖ ಕರ್ತವ್ಯಗಳು. ಆದರೆ ಇಡೀ 3½ ವರ್ಷದಲ್ಲಿ ಬಿ.ಜೆ.ಪಿ. ಸರ್ಕಾರವು ರಾಜ್ಯದ ಜನತೆಯ ಒಂದೇ ಒಂದು ಸಮಸ್ಯೆ ಬಗ್ಗೆಯೂ ಅರ್ಥಪೂರ್ಣ ಚರ್ಚೆ ನಡೆಸಿ ಸಮಸ್ಯೆಗೆ ಪರಿಹಾರ ರೂಪಿಸಿದ ಉದಾಹರಣೆ ಇಲ್ಲ. ಅಥವಾ ಒಂದೇ ಒಂದು ಕಾಯ್ದೆಯನ್ನೂ ಆಳವಾಗಿ ಚರ್ಚಿಸಲಿಲ್ಲ. ಇದಕ್ಕಿಂತ ಬಹಳ ಮುಖ್ಯವಾದ ಮತ್ತು ಅತ್ಯಂತ ಜವಾಬ್ದಾರಿ ಕೆಲಸವೆಂದರೆ ವಿಧೇಯಕಗಳನ್ನು ಅಂಗೀಕರಿಸಿರುವುದು, ಅದರಲ್ಲೂ ಮುಖ್ಯವಾಗಿ ಹಣಕಾಸು ವಿಧೇಯಕಗಳನ್ನು, ಆದರೆ ಬಿ.ಜೆ.ಪಿ. ಸರ್ಕಾರವು ಅಧಿಕಾರಕ್ಕೆ ಬಂದಾಗಲಿಂದಲೂ ಒಂದೇ ಒಂದು ಹಣಕಾಸು ವಿಧೇಯಕವನ್ನು ಪ್ರಾಮಾಣಿಕ ಚರ್ಚೆಗೆ ಬಳಪಡಿಸಿದ ಉದಾಹರಣೆ ಇಲ್ಲ. ಸಾವಿರಾರು ಕೋಟಿ ರೂಪಾಯಿಗಳ ಅಯ-ವ್ಯಯ ವಿಧೇಯಕಗಳು ಒಂದೇ ಒಂದು ಅಕ್ಷರದ ಚರ್ಚೆ ಇಲ್ಲದೆ ಒಂದೇ ಒಂದು ನಿಮಿಷದಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಲ್ಪಟ್ಟವು. ನೂರಾರು ಸಾವಿರಾರು ಕೋಟಿ ರೂಪಾಯಿಗಳ ಸರ್ಕಾರದ ಹಣವನ್ನು (ಅಂದರೆ ಜನತೆ ಹಣವನ್ನು) ಯಾವ ಬಾಬ್ತಿಗೆ ಎಷ್ಟು ಖರ್ಚು ಮಾಡಬೇಕೆಂದು ತೀರ್ಮಾನಿಸುವ ಅಧಿಕಾರವಿರುವುದು ಶಾಸನ ಸಭೆಗೆ ಮಾತ್ರ, ಶಾಸನ ಸಭೆ ಒಪ್ಪಿಗೆ ಇಲ್ಲದೇ ಸರ್ಕಾರವು ಒಂದೇ ಒಂದು ಪೈಸೆ ಕೂಡ ಖರ್ಚು ಮಾಡುವ ಅಧಿಕಾರವಿಲ್ಲ. ಯಾವ ಯಾವ



ಬಾಬ್ತಿಗೆ ಎಷ್ಟು ಹಣ ತೆಗೆದಿಡಲಾಗಿದೆ. ಅದು ಸರಿಯಾದ ರೀತಿಯಲ್ಲಿ ಖರ್ಚಾಗಿದೆಯೇ ? ಇಲ್ಲವೇ ? ಎಂಬುದನ್ನು ಚರ್ಚೆ ಮಾಡುವ ಅಧಿಕಾರವು ಶಾಸನ ಸಭೆಗೆ ಮಾತ್ರ ಇರುವುದು. ಸಂಸದೀಯ ವ್ಯವಸ್ಥೆಯಲ್ಲಿ ಶಾಸನ ಸಭೆಗಳು ಅತ್ಯಂತ ಪ್ರಮುಖವಾದ ಕರ್ವತ್ಯವನ್ನು ಪೋಷಿಸುತ್ತವೆ. ಆದರೆ ಬಿ.ಜೆ.ಪಿ. ಸರ್ಕಾರ ಮಾಡಿದ್ದು ತದ್ವಿರುದ್ದ ಕೆಲಸ. ಯಾವ ಹಣಕಾಸು ವಿಧೇಯಕವು ಶಾಸನ ಸಭೆಯಲ್ಲಿ ಚರ್ಚೆ ಆಗಲಿಲ್ಲ. ಬಿಜೆಪಿ ಆಡಳಿತದಲ್ಲಿ ಪ್ರಜಾತಂತ್ರದ ಆಶಯಗಳಿಗೆ ಎಂತಹ ಅಪಮಾನ ಶಾಸನ ಸಭೆಯಲ್ಲಿ ಆಗಿದೆ ಎಂಬುದನ್ನು ನಾವೆಲ್ಲ ತಿಳಿಯಬೇಕಾಗಿದೆ. ಇನ್ನು ಸಂಸದೀಯ ವ್ಯವಸ್ಥೆಯಲ್ಲಿ ಇನ್ನೊಂದು ಪವಿತ್ರವಾದದ್ದು, ವಿಧಾನಸಭಾಧ್ಯಕ್ಷರ ಸ್ಥಾನ. ಈ ಸ್ಥಾನವನ್ನು ಬಿ.ಜೆ.ಪಿ ಯು ಹೇಗೆ ನಡೆಸಿಕೊಂಡಿದೆ ? ಕೇಂದ್ರ ಸರ್ಕಾರದಲ್ಲಿ ಈಗ ನಡೆಯುತ್ತಿರುವ ಭ್ರಷ್ಟಾಚಾರ ಪ್ರಜಾಪ್ರಭುತ್ವಕ್ಕೆ ಅಪಾಯುವೆಂದು ಬಿ.ಜೆ.ಪಿ.ಯು ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ದೇಶದ ಜನತೆಗೆ ಇತ್ತೀಚೆಗೆ ಮಂಗಳೂರಿನಿಂದ ಉಪದೇಶ ನೀಡಿದ್ದಾರೆ. ಆದರೆ ಈ ಅಡ್ವಾಣಿಯವರು ದೇಶದ ಜನರ ಮನಸಿನಲ್ಲಿ ಮೂಡಿರುವ ಈ ಪ್ರಶ್ನೆಗಳಿಗೆ ಉತ್ತರಿಸಬೇಕಲ್ಲವೇ ?



ಬಿಜೆಪಿ ಪಕ್ಷ ಮತ್ತು ಸರ್ಕಾರ ಕರ್ನಾಟಕದ ವಿಧಾನಸಾಭಾಧ್ಯಕ್ಷರ ಸ್ಥಾನವನ್ನು ಹೇಗೆ ಉಪಯೋಗಿಸಿ ಕೊಂಡಿತು ? ದೇಶದ ಭ್ರಷ್ಟಾತಿ ಭ್ರಷ್ಟ ರಾಜ್ಯ ಸರ್ಕಾರವಾದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಇಡೀ ಸಂಸದೀಯ ವ್ಯವಸ್ಥೆಯನ್ನೇ ಅಣಕ ಮಾಡುವ ರೀತಿಯಲ್ಲಿ ಜನರಿಂದ ಆಯ್ಕೆಯಾದ ಶಾಸಕರನ್ನು ಅನರ್ಹಗೊಳಿಸುವ ಕೆಲಸದಲ್ಲಿ ವಿಧಾನಸಭಾಧ್ಯಕ್ಷರನ್ನು ಬಳಸಿಕೊಂಡ ವಿಧಾನ, ದೇಶದ ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವ ಜನರನ್ನು ಬೆಚ್ಚಿ ಬೀಳಿಸಿತು. ಕಡೆಗೆ ಈ ದೇಶದ ಸರ್ವೋಚ್ಚ ನ್ಯಾಯಾಲಯ ಬಿಜೆಪಿ ಪಕ್ಷಕ್ಕೆ, ಸರ್ಕಾರಕ್ಕೆ ಮತ್ತು ವಿಧಾನಸಭಾಧ್ಯಕ್ಷರಿಗೆ ಛೀಮಾರಿ ಹಾಕಿತು. ಅಡ್ವಾಣಿಯವರು ಈ ಬಗ್ಗೆ ಯಾಕೆ ಬಾಯಿ ಬಿಡುವುದಿಲ್ಲ. ?

ಕೇಂದ್ರದ ಯುಪಿಎ ಸರ್ಕಾರದಲ್ಲಿ ನಡೆಯುತ್ತಿರುವ ಹಣಕಾಸಿನ ಭ್ರಷ್ಟಾಚಾರ ಹಾಗೂ ಸಂಸದರನ್ನು ಖರೀದಿಸಿ ಪಾರ್ಲಿಮೆಂಟಿನಲ್ಲಿ ಬಹುಮತ ಸಾಧಿಸುವ ಧೋರಣೆಗಿಂತ ಇದು ಯಾವ ರೀತಿಯಲ್ಲಿ ಕಡಿಮೆ ಅಪಾಯಕಾರಿ ? ಕರ್ನಾಟಕದಲ್ಲಿ ಬಿಜೆಪಿ ಪಕ್ಷ ವಿಧಾನಸಭಾಧ್ಯಕ್ಷರ ಸ್ಥಾನವನ್ನು ಉಪಯೋಗಿಸಿದ ರೀತಿಯನ್ನು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ನಂಬಿಕೆ ಇರುವ ಯಾರಾದರೂ ಸಮರ್ಥಿಸಿಕೊಳ್ಳಲು ಸಾಧ್ಯವೇ ?

ಅದರ ಜೊತೆಗೆ ಶಾಸಕರನ್ನು ಪಕ್ಷಾಂತರ ಮಾಡಿಸಿ ರಾಜಿನಾಮೆ ಕೊಡಿಸಿ ವಿವಿದ ಆಸೆ, ಅಮಿಷಗಳನ್ನು ಒಡ್ಡಿ ಇಡೀ ಪ್ರಜಾಪ್ರಭುತ್ವದ ಮತ್ತು ಸಂಸದೀಯ ವ್ಯವಸ್ಥೆಯನ್ನೇ ನಿರರ್ಥಕಗೊಳಿಸಿದ್ದು, ಇಡೀ ಸಂಸದೀಯ ವ್ಯವಸ್ಥೆಯನ್ನೇ ಅಪಾಯಕ್ಕೆ ನೂಕಿಲ್ಲವೇ ?

ಬಿ.ಜೆ.ಪಿ.ಯು ಕರ್ನಾಟಕದಲ್ಲಿ ನಡೆಸಿರುವ ಅಗಾಧ ಭ್ರಷ್ಟಾಚಾರ ಅದರಲ್ಲೂ ಮುಖ್ಯವಾಗಿ ಲೋಕಾಯುಕ್ತರು ಸಲ್ಲಿಸಿರುವ ಗಣಿ ಹಗರಣದ ಕುರಿತ ವರದಿಯಲ್ಲಿ ಅನಾವರಣಗೊಂಡಿರುವ ಲೂಟಿಯ ಭಯಾನಕ ಸ್ವರೂಪವು ಪ್ರಜ್ಞಆವಂತರಾದ ಯಾರನ್ನೇ ಆದರೂ ಘಾಸಿಗೊಳಿಸದೇ ಇರದು. ಈ ಹಗರಣದಲ್ಲಿ ಬರೀ ರಾಜಕಾರಣಿಗಳಷ್ಟೆ ಅಲ್ಲ, ಇಡೀ ಆಡಳಿತ ಯಂತ್ರಾಂಗವೇ ಮುಳುಗಿರುವುದು, 787 ಅಧಿಕಾರಿಗಳು ಶಾಮೀಲಾಗಿರುವುದು ನಿಜವಾಗಿಯೂ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಗೆ ಗಂಡಾಂತರಕಾರಿಯಾಗಿದೆ ಎಂಬುದನ್ನು ಯಾರು ಅಲ್ಲಗಳೆಯಲು ಸಾಧ್ಯ ?

ಬಿ.ಜೆ.ಪಿ. ಎಂಬ ಕೋಮುವಾದಿ ಪಕ್ಷವೊಂದರ ಕೈಗೆ ದೇಶದ ಮತ್ತು ರಾಜ್ಯಗಳ ಅಧಿಕಾರ ಸಿಕ್ಕಿದರೆ ಏನಾಗಬಹುದೆಂಬುದಕ್ಕೆ ಇದಕ್ಕಿಂತ ಉದಾಹರಣೆ ಇನ್ನು ಏನು ಬೇಕು ? ಜರ್ಮನಿಯಲ್ಲಿ ಹಿಟ್ಲರ್ ಹೇಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಡೆಸಿಕೊಂಡ, ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ತೆಹಲ್ಕಾವು ದೇಶದ ರಕ್ಷಣಾ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರವನ್ನು ಬಯಲಿಗೆ ಎಳೆದಿದ್ದಕ್ಕೆ ಅದರ ಬಗ್ಗೆ ತನಿಖೆ ಮಾಡಲು ರಚಿಸಿದ ಆಯೋಗದ ಹಣೆ ಬರಹ ಏನಾಯಿತು ? ತನಿಖಾ ಆಯೋಗವು ತನಿಖೆ ಹೆಸರಿನಲ್ಲಿ ತೆಹಲ್ಕಾ ಸಂಸ್ಥೆಯ ವಿರುದ್ದವೇ ಹೇಗೆ ತೀವ್ರ ದಾಳಿ ನಡೆಸಿತು ?

ಗುಜರಾತ್‌ನಲ್ಲಿ ನರೇಂದ್ರ ಮೋದಿಯು ನರಹಂತಕತನವನ್ನು ಬಯಲಿಗೆಳೆದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಪರಿಸ್ಥಿತಿಯನ್ನು ಗಮನಿಸಿದರೆ ಬಿ.ಜೆ.ಪಿ. ಎಂಬ ಪಕ್ಷದ ಅಡಿಯಲ್ಲಿ ಸಂಸದೀಯ ವ್ಯವಸ್ಥೆ ಏನಾಗುತ್ತದೆಂದು ಕನ್ನಡಿಯಷ್ಟೆ ಸ್ಪಷ್ಟವಾಗಿದೆಯಲ್ಲವೇ.

ಭ್ರಷ್ಟಾಚಾರ: ಪ್ರಜಾಪ್ರಭುತ್ವಕ್ಕೊಂದು ಕಂಟಕ

ಪುಟ 13 ರಿಂದ

ಕಾರ್ಯಚರಣೆಯಲ್ಲಿರುವ ಲೋಪಗಳ ಬಗ್ಗೆ ಪುನರ್ ಚಿಂತಿಸುವ ಅಗತ್ಯವಿದೆ. ಹೀಗಿದ್ದರೂ, ಚುನಾವಣಾ ಸುದಾರಣೆಗಳು ಬಹಳ ಸಂಕೀರ್ಣವಾದವುಗಳಾಗಿವೆ ಮತ್ತು ಸರ್ವಸಮ್ಮತಕ್ಕೆ ಬರುವುದು ಸಲೀಸಾಗಿಲ್ಲ. ವಿವಿಧ ದೇಶಗಳಲ್ಲಿ ಆಚರಣೆಯಲ್ಲಿರುವ ಹಲವಾರು ಪರ್ಯಾಯ ವಿಧಾನಗಳಿವೆ. ಅನುಪಾತದ ಪ್ರಾತಿನಿಧ್ಯ, ಶೇ-50ಕ್ಕಿಂತ ಹೆಚ್ಚಿನ ಮತಗಳು ಪಡೆದರೆ ಮಾತ್ರ ಆಯ್ಕೆ ಮತ್ತು ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು ಇವುಗಳಲ್ಲಿ ಕೆಲವು. ಇವೆಲ್ಲವುಗಳಿಗೂ ಸಾಮರ್ಥ್ಯಗಳೂ ಮತ್ತು ದೌರ್ಬಲ್ಯಗಳೂ ಇವೆ. ಈ ಏನೆಲ್ಲಾ ಪ್ರಶ್ನೆಗಳಿದ್ದರೂ ವ್ಯವಸ್ಥೆಯನ್ನು ಉತ್ತಮಪಡಿಸುವ ಸಾಧ್ಯತೆಗಳ ಬಗ್ಗೆ ಚರ್ಚೆಯನ್ನು ನಡೆಸಬೇಕು.

ಸರಕಾರದ ಪ್ರಸ್ತಾವಿತ ಶಾಸನದ ದೌರ್ಬಲ್ಯವೆಂದರೆ, ಅದು ಆಧಾರಭೂತ ಪ್ರಶ್ನೆಗಳನ್ನು ಪರಿಶೀಲಿಸಲು ವಿಫಲವಾಗಿದೆಯಷ್ಟೇ ಅಲ್ಲ, ಅದು ಯಾವ ವಿಷಯಗಳಲ್ಲಿ ಪ್ರಯತ್ನ ನಡೆಸಿದೆಯೋ ಅದು ಕೂಡ ಅಸಮರ್ಪಕವಾಗಿದೆ. ಉದಾಹರಣೆಗೆ, ಲೋಕಪಾಲ ಒಂದು ಸ್ವಾಯತ್ತ ಸಂಸ್ಥೆಯಾಗಿರಬೇಕು, ಪ್ರಭುತ್ವದ ಪ್ರಭಾವ ಅದರ ಮೇಲಿರಬಾರದು ಎಂದಿದೆ. ವಾಸ್ತವ ಆಚರಣೆಯಲ್ಲಿ ಇಂತಹ ನಿರೀಕ್ಷೆ ಈಡೇರುವುದೇ ಎಂಬುದು ಸಂದೇಹಾಸ್ಪದ. ತದ್ವಿರುದ್ಧವಾಗಿ ಅದು ಪ್ರಭುತ್ವದ ಒಂದು ವಿಭಾಗವಾಗಿ ಬಿಡಬಹುದು. ಇಂತಹ ಸಾಧ್ಯತೆಯ ಒಂದು ಸೂಚನೆ ಲೋಕಪಾಲ ಆಯ್ಕೆಯ ವಿಧಾನದಲ್ಲಿಯೇ ಅಡಕವಾಗಿದೆ. ಲೋಕಪಾಲರನ್ನು ಆರಿಸುವ ಸಮಿತಿಯಲ್ಲಿರುವವರು ಬಹುಪಾಲು ಪ್ರಭುತ್ವದ ಪ್ರತಿನಿಧಿಗಳೇ, ನಾಗರಿಕ ಸಮಾಜದ ಇರುವಿಕೆ ಅಲ್ಲಿ ಹೆಸರಿಗಷ್ಟೇ.

ಎರಡನೇ ಕೊರತೆಯೆಂದರೆ, ಅದರ ಅತ್ಯಂತ ಕೇಂದ್ರೀಕೃತ ರಚನೆ, ವಿಪರೀತ ಅಧಿಕಾರಗಳಿರುವ ಒಂದು ತನಿಖಾ ವಿಭಾಗ ಮತ್ತು ಒಂದು ತಕ್ಸೀರಿನ ಅಂದರೆ ಆರೋಪ ಪಟ್ಟಿ ಹಾಕುವ ವಿಭಾಗ. ಇತ್ತೀಚಿನ ಕಾಲದಲ್ಲಿ ಅಧಿಕಾರದ ಕೇಂದ್ರೀಕರಣ ಕೇಂದ್ರ ಸರಕಾರ ತನ್ನ ಎಲ್ಲ ಸುಧಾರಣಾ ಕ್ರಮಗಳಲ್ಲಿ ಅನುಸರಿಸುವ ನೀತಿ. ಪ್ರಭುತ್ವದಲ್ಲಿ ಹೀಗೆ ಇಟ್ಟಿರುವ ಅಧಿಕಾರ, ಅದರೊಂದಿಗೆ ಪ್ರಧಾನ ಮಂತ್ರಿಗಳಿಗೆ, ಉನ್ನತ ನ್ಯಾಯಾಂಗಕ್ಕೆ ಹಾಗೂ ಸಂಸತ್ತಿನ ಸದಸ್ಯರಿಗೆ ಲೋಕಪಾಲದ ಅನ್ವಯದಿಂದ ನೀಡಿರುವ ವಿನಾಯ್ತಿ ಸರ್ವಾಧಿಕಾರಶಾಹಿ ಆಳ್ವಿಕೆಗೆ ಒಂದು ಆಹ್ವಾನವಾಗಬಹುದು. ಕೇಂದ್ರೀಕೃತ ರಚನೆಯ ಇನ್ನೊಂದು ಪರಿಣಾಮವೆಂದರೆ, ಅದು ಜನಸಾಮಾನ್ಯರ ಎಟುಕಿನ ಹೊರಗೇ ಉಳಿಯುತ್ತದೆ. ಇದಕ್ಕೆ ಪರಿಹಾರವೆಂದರೆ ಪಂಚಾಯತು ಮಟ್ಟದ ವರೆಗೆ ತಲುಪುವ ಒಂದು ಬಹುಸ್ತರೀಯ ರಚನೆ. ಲೋಕಪಾಲ ಬೇಕಾಗಿರುವುದು ಜನತೆಯ ಸಬಲೀಕರಣಕ್ಕಾಗಿಯೇ ತಾನೇ?

ಈಗ ಸಾರ್ವಜನಿಕವಾಗಿರುವ ಸರಕಾರದ ಮತ್ತು 'ನಾಗರಿಕ ಸಮಾಜ'ದ ಪ್ರಸ್ತಾವಗಳೆರಡೂ ಭ್ರಷ್ಟಾಚಾರವನ್ನು ಪ್ರತಿರೋಧಿಸಲಾರವು. ವಾಸ್ತವವಾಗಿ, ಅವರೆಡರ ನಡುವೆ ಬಹಳಷ್ಟು ಸಮಾನ ನೆಲೆಗಳಿವೆ. ಪ್ರಸ್ತಾವಿತ ಶಾಸನ, ಜನ ಲೋಕಪಾಲ್ ಆಗಲೀ, ಲೋಕಪಾಲ್ ಆಗಲೀ, ಭ್ರಷ್ಟ ಆಚರಣೆಗಳಿಗೆ ಅನುವು ಮಾಡಿಕೊಡುವ ಅಧಿಕಾರ ಸಂರಚನೆಗೆ ಸವಾಲು ಹಾಕುವುದಿಲ್ಲ. ಈ ಪ್ರಸ್ತಾವಗಳು ಕೆಲವು ಹೊರ ಸ್ವರೂಪದ ಬದಲಾವಣೆಗಳಿಗಿಂತ ಬಹಳ ಆಚೆಗೇನೂ ಹೋಗುವುದಿಲ್ಲ. ಅವರು ಕಿತ್ತಾಡುವುದು ಕೆಲವು ಮೇಲುಮೇಲಿನ ವಿಷಯಗಳ ಮೇಲಷ್ಟೇ. ಅಣ್ಣಾ ತಂಡದ ಮೇಲೆಯೇ ಭ್ರಷ್ಟಾಚಾರದ ಆಪಾದನೆಗಳನ್ನು ಹಾಕಲಾಗಿದೆ. ಅಣ್ಣಾ ತಂಡ ಕೂಡ, ಒಂದೆಡೆ ಪ್ರಭುತ್ವದೊಂದಿಗೆ ಶಾಮೀಲಾಗಿ ಮತ್ತು ಜನತೆಯ ತುರ್ತು ಪ್ರಶ್ನೆಗಳಾದ ಬಡತನ, ಗ್ರಾಮೀಣ ಬಂಡಾಯ ಮತ್ತು ಕೋಮುವಾದ ಮುಂತಾದವುಗಳನ್ನು ಬದಿಗೆ ತಳ್ಳಿ ಜನತೆಯ ವಿರೋಧದ ಸಾಧ್ಯತೆಯನ್ನು ಕ್ಷುಲ್ಲಕಗೊಳಿಸಿದೆ.

ಅಣ್ಣಾ ಹಜಾರೆ ಹೋರಾಟವನ್ನು ರಾಷ್ಟ್ರೀಯ ಉತ್ಪಾತವೆಂಬಂತೆ ಈಗ ಬಿಂಬಿಸಲಾಗಿದೆ. ನಿಷ್ಕ್ರಿಯ ಸರ್ಕಾರದಿಂದ ಅತೃಪ್ತಿಗೊಳಗಾಗಿರುವ ಮಧ್ಯಮವರ್ಗ, ಯುವಜನ ಮತ್ತು ಸಮಾಜದ ಇತರೆ ಎಲ್ಲಾ ವಿಭಾಗಗಳಿಂದ ವಿಶಾಲ ಜನಬೆಂಬಲ ಇದಕ್ಕೆ ಸಿಗುತ್ತಿದೆ. ಉಪವಾಸಕ್ಕೆ ನಿಷೇಧ ಹೇರಿದ ಮತ್ತು ಅಣ್ಣಾರನ್ನು ಬಂಧಿಸಿದ ಸರ್ಕಾರದ ಕ್ರಮಗಳಿಂದಾಗಿ ಹೋರಾಟದ ದಿಕ್ಕು ಬದಲಾಗಿದೆ. ಪ್ರತಿಭಟನೆಯ ಹಕ್ಕನ್ನು ನಿರಾಕರಿಸಲಾಯಿತು ಎಂಬುದರ ವಿರುದ್ಧವಾದ ಅತೃಪ್ತಿಯು ಲೋಕ್‌ಪಾಲ್ ಹೋರಾಟದೊಂದಿಗೆ ಮೇಳೈಸಿಕೊಂಡಿದೆ. ಇದು ಸಂಪೂರ್ಣವಾಗಿ ಸ್ವಯಂಪ್ರೇರಿತ ಪ್ರತಿಕ್ರಿಯೆಯಾಗಿ ಕಾಣುವುದಿಲ್ಲ. ಬಲಪಂಥೀಯ ಶಕ್ತಿಗಳು ಪ್ರಸರಣ ಮಾಡುತ್ತಿರುವ ಹಾಗೆ ಕಾಣುತ್ತದೆ. ಹಾಗೇನಾದರೂ ಆಗಿದ್ದಲ್ಲಿ ಅಣ್ಣಾ ಹಜಾರೆ ಭಾರತದಲ್ಲಿ ಬಲಪಂಥದ ಎರಡನೇ ಉತ್ಪಾತಕ್ಕೆ ದಾರಿ ಮಾಡಿಕೊಡುವ ದೇವದೂತರಾಗುವರೇ?

ಅನುವಾದ : **ಎನ್.ಕೆ.ವೇದರಾಜ**

ಅಬ್ಬರಿಸಿದ ಗಣಿಗಳಲ್ಲೀಗ ನೀರವ ಮೌನ !!



ಬಳ್ಳಾರಿಗೆ ಸಿಪಿಐ(ಎಂ) ಎಂ.ಪಿ.ಗಳ ಭೇಟಿ ಅದಿರು ದರೋಡೆಯ ವಿರಾಟ ರೂಪದ ಪ್ರತ್ಯಕ್ಷ ದರ್ಶನ

ಯು.ಬಸವರಾಜು

ಬಳ್ಳಾರಿ ಜಿಲ್ಲೆಯಲ್ಲಿ ನಡೆದಿರುವ ಕಬ್ಬಿಣದ ಹಾಗು ಮ್ಯಾಂಗನೀಸ್ ಅದಿರಿನ ಭಾರಿ ಕಳ್ಳತನ–ಲೂಟಿ ಹಾಗು ಆ ಕುರಿತ ಲೋಕಾಯುಕ್ತ ವರದಿ ಮತ್ತು ಸುಪ್ರೀಂ ಕೋರ್ಟ್‌ನ ಮಧ್ಯ ಪ್ರವೇಶವನ್ನು ಆದೇ ರೀತಿ ಸಿ.ಬಿ.ಐ. ದಾಳಿಯ ನಂತರದ ಪರಿಸ್ಥಿತಿಯನ್ನು ಅವಲೋಕಿಸಲು ಜೊತೆಗೆ ಸ್ಥಳೀಯ ವಿವಿಧ ಜನ ಸಮೂಹಗಳ ಅಭಿಪ್ರಾಯ–ಅನುಭವವನ್ನು ಕ್ರೋಢೀಕರಿಸಿಕೊಳ್ಳಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಇಬ್ಬರು ಪಾರ್ಲಿಮೆಂಟ್ ಸದಸ್ಯರನ್ನು ಕಳೆದ 18–19 ಅಕ್ಟೋಬರ್ 2011 ರಂದು ಬಳ್ಳಾರಿ ಜಿಲ್ಲೆಗೆ ಕಳುಹಿಸಿಕೊಟ್ಟಿತ್ತು. ಇವರ ಜೊತೆ ಸೇರಿಕೊಳ್ಳಲು ರಾಜ್ಯ ಸಮಿತಿ ಹಾಗು ಬಳ್ಳಾರಿ ಜಿಲ್ಲಾ ಸಮಿತಿಗಳು ಕ್ರಮವಾಗಿ ಇಬ್ಬರು ಮತ್ತು ಮೂವರು ಸಂಗಾತಿಗಳನ್ನು ಸೇರಿಸಿ ಒಟ್ಟು 07 ಜನರ ತಂಡವಾಗಿಸಿದವು.

ತಂಡದ ನೇತೃತ್ವವನ್ನು ಕಾಂ॥ ಬಸುದೇವ ಆಚಾರ್ಯ, ಲೋಕಸಭಾ ಸದಸ್ಯರು ಹಾಗು ಸಿ.ಪಿ.ಐ (ಎಂ) ನ ಪಾರ್ಲಿಮೆಂಟರಿ ಸಮಿತಿಯ ನಾಯಕರು ಹಾಗು ಕಾಂ॥ ಬಾಲ ಗೋಪಾಲ್, ಕೇರಳದಿಂದ ಆಯ್ಕೆಯಾಗಿರುವ ರಾಜ್ಯಸಭಾ ಸದಸ್ಯರು ವಹಿಸಿದ್ದರು. ತಂಡದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಹಾಗು ಎಸ್.ಪ್ರಸನ್ನ ಕುಮಾರ್ ಮತ್ತು ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಯು. ಬಸವರಾಜ್ ಹಾಗು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆರ್.ಎಸ್.ಬಸವರಾಜ್ ಮತ್ತು ಬಾಬು ಪಾಲ್ಗೊಂಡಿದ್ದರು.

ಬಳ್ಳಾರಿಯಿಂದ ಓಬಳಾಪುರಂ ಮೈನ್ಸ್ ಕಡೆ ಕಡಿದಾದ ಕುಣಿಗಳ ಕೆಟ್ಟ ರಸ್ತೆಯಲ್ಲಿ ನಮ್ಮ ಪ್ರಯಾಣ ಸಾಗಿತ್ತು. ಪ್ರಸನ್ನಕುಮಾರ್- ಬಳ್ಳಾರಿಯಲ್ಲಿರುವುದು ಎರಡೇ ಕಾಲ, ಒಂದು ಬೇಸಿಗೆ ಕಾಲ ಮತ್ತೊಂದು ಉರಿ ಬೇಸಿಗೆ ಕಾಲವೆಂದು ಬಳ್ಳಾರಿಯ ಹಾಸ್ಯ ಸಾಹಿತಿ ಬೀಚಿಯವರ ನೆನಸಿಕೊಂಡು ಬಸುದೇವರಿಗೆ ವಿವರಣೆ ನೀಡುತ್ತಿದ್ದರು.

ಎಲ್ಲೆಲ್ಲೂ ತೋಡುವ
ಪುಡಿಗುಟ್ಟುವ ಯಂತ್ರಗಳು

06-07 ವರ್ಷಗಳ ಕಾಲ ಬಳ್ಳಾರಿ ಜಿಲ್ಲೆ ಭಾರಿ ಗಣಿಗಾರಿಕೆ ನಡೆಸಿದ ನಾಡಾಗಿತ್ತು. ಬೆಟ್ಟದ ಕಣಿವೆಗಳಲ್ಲಿ ಭಾರಿ ಕಾಡುಗಳಲ್ಲಿ ಎಲ್ಲೆಲ್ಲೂ ಯಂತ್ರಗಳದ್ದೇ ಸದ್ದಾಗಿತ್ತು. ಹಲವು ನೂರು ಡಿಗ್ಗಿಂಗ್(ತೋಡುವ) ಹಾಗು ಲೋಡಿಂಗ್ (ತುಂಬುವ) ಮೇಷಿನ್‌ಗಳು, ನೂರಾರು ಡಂಪರ್‌ಗಳು, ಸಾವಿರಾರು ಬೊಲೆರೋ ಗಾಡಿಗಳು, 8-10 ಸಾವಿರ ಲಾರಿಗಳು, ಹತ್ತಾರು ರೈಲ್ವೆ ವ್ಯಾಗಿನ್‌ಗಳು, ಅದಿರು ಕುಟ್ಟಿ ಪುಡಿಗುಟ್ಟುವ ನೂರಾರು ಕ್ರಷರ್‌ಗಳು, 30-40 ಮೆದು ಕಬ್ಬಿಣದ ಘಟಕಗಳು, ಜಿಂದಾಲ್, ಕಿರ್ಲೋಸ್ಕರನಂತಹ ಭಾರಿ ಕೈಗಾರಿಕೆಗಳು ತಮ್ಮನ್ನು ತೊಡಗಿಸಿಕೊಂಡಿದ್ದು. ಇದರ ಲಾಭದಿಂದಾಗಿ ಎಲ್ಲೆಲ್ಲೂ ರಿಯಲ್ ಎಸ್ಟೇಟ್ ದಂದೆಯಲ್ಲಿ ತೊಡಗಿದವರು, ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾದವರು ಎಲ್ಲರೂ ವ್ಯಾಪಾರ ವಹಿವಾಟನ್ನು ತ್ವರಿತಗೊಳಿಸಿದ್ದರು. ಬಡ ರೈತ ಕೂಲಿಕಾರರು ಮಾತ್ರವಲ್ಲ ಮಧ್ಯಮ ರೈತರು, ಮಧ್ಯಮ ವರ್ಗದವರು, ನಿವೇಶನ ಖರೀದಿಸಲಾಗದಷ್ಟು ಬೆಲೆಯನ್ನು ಈ ಭೂಮಿಗೆ ತಂದಿದ್ದರು. ಒಟ್ಟಾರೆ 2 ಲಕ್ಷಕ್ಕೂ ಅಧಿಕ ಕಾರ್ಮಿಕರು, ನೌಕರರು, ನಾಗರೀಕರು ಈ ಗಣಿ ಉದ್ದಿಮೆಯಲ್ಲಿ ತೊಡಗಿದ್ದರು.

ಈ ವ್ಯಾಪಕವಾದ ವಹಿವಾಟು, ಇರುವ ರಸ್ತೆಗಳನ್ನೆಲ್ಲಾ ಜಿಲ್ಲೆಯಾದ್ಯಂತ ಕುಣಿಗಳನ್ನಾಗಿಸಿತ್ತು. ಇದು ಎಬ್ಬಿಸಿದ ಧೂಳು, ನಡೆಸಲಾದ ಪಟ್ಟಾ ಜಮೀನಿನ ಡಿಗ್ಗಿಂಗ್ ಹತ್ತಾರು ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದು ನಿಂತ ಬೆಳೆಗೆ ಹರಡಿ ಕೈಗೆ ಬೆಳೆ ದೊರೆಯದಂತಹ ಪರಿಸ್ಥಿತಿ ನಿರ್ಮಿಸಿತ್ತು. ಇದರ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ, ಹೊಸಪೇಟೆ ಘಟಕವು 36 ತಾಸುಗಳ ಅನಿರ್ಧಿಷ್ಟ ಕಾಲ ರಸ್ತೆ ತಡೆ ನಡೆಸಿತ್ತು. ಆಗ ನೋಡಬೇಕಿತ್ತು. ಕೊಪ್ಪಳದಿಂದ ಹೊಸಪೇಟೆವರೆಗೆ, ಹೊಸಪೇಟೆಯಿಂದ ಪಾಪಿನಾಯಕನಹಳ್ಳಿಯವರೆಗೆ ಎಲ್ಲೆಲ್ಲೂ ನಿಂತಿದ್ದ ಸಾವಿರಾರು ಲಾರಿಗಳ ಸಾಲು.

ಇಲ್ಲಿ ಚಳುವಳಿಯಲ್ಲಿ ತೊಡಗಿದ್ದ ರೈತರ ಸಂಖ್ಯೆ 300-400 ರಷ್ಟಾದರೆ ಅಲ್ಲಿ ನೆರೆದಿದ್ದ ಲಾರಿ ಚಾಲಕರು-ಸಹಾಯಕರುಗಳ ಸಂಖ್ಯೆ ಹಲವು ಸಾವಿರಗಳಷ್ಟಾಗಿತ್ತು. ಲಾರಿಗಳ ಓಡಾಟದಿಂದ ಬಳ್ಳಾರಿಯಿಂದ-ಹೊಸಪೇಟೆ-ಕೊಪ್ಪಳದ-ಗದಗ-ಹುಬ್ಬಳಿಯವರೆಗೆ ಮುಂದೆ ಬಂದರಿನವರೆಗೆ ಎಲ್ಲೆಲ್ಲೂ ಧೂಳಿನದೇ-ಲಾರಿಗಳದೇ ಕಾರುಬಾರಾಗಿತ್ತು. ಇಲ್ಲಿ ಬಸ್‌ಗಳಲ್ಲಿಯೇ ಆಗಲಿ, ಯಾವುದೇ ವಾಹನದಲ್ಲಿ ಪ್ರಯಾಣಿಸುವವರು ಯಾರೇ ಆಗಿರಲಿ ಪ್ರತಿದಿನ ಭಾರಿ ಧೂಳಿನ ಸ್ನಾನ ಮಾಡಲೇ ಬೇಕಿತ್ತು. ಬೆಳಿಗ್ಗೆ ಹೊಸಬಟ್ಟೆ ತೊಟ್ಟರೆ ಸಂಜೆಯ ವೇಳೆಗೆ ಅವರು ಗಣಿಯಲ್ಲಿ ಕೆಲಸ ಮಾಡುವವರಂತೆ ಕಾಣುತಿದ್ದರು. ಅದೇ ರೀತಿ ರೈಲುಗಳಲ್ಲಿ ಸಾಗುವವರು ಮತ್ತು ರೈಲುಗಳು ಈ ದೂಳಿನ ಕಾಟದಿಂದ ಹೊರತಾಗಿರಲಿಲ್ಲ.

ಬಳ್ಳಾರಿ ಜಲ್ಲೆಯಲ್ಲಿ 2008 ರಲ್ಲಿ 1,657 ಅಪಘಾತ ಸಂಭವಿಸಿ 355 ಜನಗಳು ಹಾಗೂ 2009 ರಲ್ಲಿ 3,346 ಅಪಘಾತ ಸಂಭವಿಸಿ 312 ಜನ ದುರ್ಮಣ ಹೊಂದಿದ್ದಾರೆ! ಸುಮಾರು 5,000 ಜನರು ಈ ಎರಡು ವರ್ಷಗಳಲ್ಲಿ ಗಂಭಿರವಾಗಿ ಗಾಯಗೊಂಡಿದ್ದಾರೆ.

ಎಲ್ಲೆಲ್ಲೂ ಸಂಭವಿಸುವ ಟ್ರಾಫಿಕ್ ಜಾಮ್‌ಗಳು ನಾಗರೀಕರನ್ನು, ಪ್ರಯಾಣಿಕರನ್ನು ಬೆದರಿಕೆಯಲ್ಲಿಟ್ಟದ್ದವು. ಚಳುವಳಿಗೆ ತೊಡಗುವಂತೆ ಮಾಡಿದ್ದವು. ಕೊನೆಗೆ ಬಳ್ಳಾರಿ-ಕೊಪ್ಪಳ-ಗದಗ ಜಿಲ್ಲಾಧಿಕಾರಿಗಳು ರಾತ್ರಿ 8 ಗಂಟೆಯ ನಂತರ ಮಾತ್ರವೇ ಲಾರಿ ಸಾಗಾಣಿಯನ್ನು ನಡೆಸುವಂತೆ ನಿರ್ಬಂಧ ಹೇರುವಂತಾಗಿತ್ತು.

ಇದೀಗ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿ ಗಣಿಗಾರಿಕೆ ನಿಷೇದಿಸುವುದರೊಂದಿಗೆ 24 ತಾಸುಗಳ ಕಾಲ ಅಬ್ಬರದ ಬಿರುಸಿನ ಕಾರ್ಯದಲ್ಲಿ ತೊಡಗಿದ್ದ ಈ ಪ್ರದೇಶ ಈಗ ನಿರ್ಜನ ಪ್ರದೇಶವಾಗಿ ಬಿಕೋ ಎನ್ನುತ್ತಿತ್ತು. ಸುಮಾರು 70 ವರ್ಷಗಳ ಇಳಿ ವಯಸ್ಸಿನ ಬಸುದೇವರನ್ನು ಜೊತೆಯಲ್ಲಿ ಕರೆದುಕೊಂಡು ಆತಂಕದಿಂದಲೇ ಕಣಿವೆಯಲ್ಲಿ ಸುಡುವ 35^{0} ಬಿಸಿಲಿನಲ್ಲಿ



ಸಾಗುತ್ತಿದ್ದೆವು. ಅದಾಗಲೇ ವೈ. ಮಹಾಬಲೇಶರಪ್ಪರವರ ಗಣಿ ಪ್ರದೇಶ ದಾಟಿ ಮೋದಿಯವರ ಗಣಿ ಪ್ರದೇಶದಲ್ಲಿದ್ದೆವು.

ಅಲ್ಲಿ ಮಾಯವಾಗಿತ್ತು ಸುಗ್ಗಲಮ್ಮ ಗುಡಿ

ಅದೊಂದು ವಿವಾದಾತ್ಮಕ ಪ್ರದೇಶವಾಗಿತ್ತು. ಅಲ್ಲಿ ಮೋದಿಯವರ ಹಾಗು ರೆಡ್ಡಿಯವರ ಮೈನಿಂಗ್ ಸಂಬಂಧ ಗಡಿ ರೇಖೆಯು ವಿವಾದದಲ್ಲಿತ್ತು. ನಾವಾಗಲೇ ಸಮುದ್ರ ಮಟ್ಟದಿಂದ 600 ಮೀಟರ್ ಎತ್ತರದಲ್ಲಿದ್ದೆವು. ಸ್ನೇಹಿತರೊಬ್ಬರು ಅಲ್ಲಿಂದ ಪೂರ್ವ ದಿಕ್ಕಿಗೆ ಕೈ ತೋರಿ ನಾವು ನಿಂತಿದ್ದ ಬೆಟ್ಟದ ಅತಿ ಎತ್ತರದ ಪ್ರದೇಶದಿಂದ 60 ಮೀಟರ್ ಎತ್ತರದ ಕಡೆ ಗಮನ ಸೆಳೆದು. ಆ ಎತ್ತರದಲ್ಲಿ ಸುಗ್ಗಲಮ್ಮನ ಗುಡಿ ಇದ್ದುದನ್ನು ನೆನಪಿಸಿದರು. ಅಲ್ಲಿಂದ ಆ ಪ್ರದೇಶಕ್ಕೆ ಗಣಿ ಕಣವೆಗಳ ನಡುವೆ ಒಂದು ಕಿ.ಮಿ.ಗೂ ಅಧಿಕ ಪ್ರದೇಶವನ್ನು ಪಾದ ಯಾತ್ರೆ ಮೂಲಕ ಇಳಿದು-ಏರಿದಾಗ ಓಬಳಾಪುರಂ ಮೈನಿಂಗ್ ಪ್ರದೇಶ ಸಿಕ್ಕಿತು.

ಸುಗ್ಗಲಮ್ಮನ ಗುಡಿಯನ್ನು ಸ್ಫೋಟಿಸಿ ಗುಡಿಯ ತಳ ಬಗೆದ ಪ್ರದೇಶವಿದು. 60 ಮೀಟರ್ ಎತ್ತರದ ಬೆಟ್ಟ ಬೋಳಾಗಿದೆ. ಮಾತ್ರವಲ್ಲಾ ಇನ್ನು 60 ಮೀಟರಿಗೂ ಹೆಚ್ಚಿನ ಆಳಕ್ಕೆ ಭೂಮಿ ಬರಿದಾಗಿದೆ. ಅಂದರೆ ದೊಡ್ಡ ಹೊಂಡವಾಗಿದೆ. ಇಲ್ಲಿನ, ಸುಗ್ಗಲಮ್ಮ ಗುಡಿ ಜಾಗದ ಸುಮಾರು 5 ಹೆಕ್ಟರ್ ಪ್ರದೇಶ ಸುತ್ತಲಿನ ಗಣಿಗಳ ನಡುವೆ ಯಾರಿಗೂ ಸೇರದ ಪ್ರದೇಶವಾಗಿತ್ತು. ಅದೀಗ ಒತ್ತುವರಿಯಾಗಿದೆ. ಸುಮಾರು 30 ಹೆಕ್ಟರ್‌ಗೂ ಅಧಿಕ ಪ್ರದೇಶದಲ್ಲಿ ಗಣಿಗಾರಿಕೆ ನಡೆದಿದೆ.

ಆಂಧ್ರ-ಕರ್ನಾಟಕದ ಗಡಿ ರೇಖೆಯ ಗುರುತಾಗಿ, ಆಂಧ್ರ ಗಡಿಯ ಭಾಗದಲ್ಲಿ ನೆಲೆಸಿದ್ದ ಸುಗ್ಗಲಮ್ಮ ದೇವಿಯು ಜನಾರ್ಧನ ರೆಡ್ಡಿ ಬೆಟ್ಟದ ಕೆಳಗಡೆ ಕಟ್ಟಿಸಿಕೊಟ್ಟ ಹೊಸ ಗುಡಿಯಲ್ಲಿ ತೆಪ್ಪಗೆ ಕುಳಿತಿರುವುದನ್ನು ನಮ್ಮ ತಂಡ ಆ ನಂತರ ತಂಡ ವೀಕ್ಷಿಸಿತು.

ಕೇವಲ ಬಳ್ಳಾರಿ ನಗರದ ವಾರ್ಡ್ ರಾಜಕೀಯದಲ್ಲಿದ್ದ ರೆಡ್ಡಿ ಗ್ಯಾಂಗ್‌ನ್ನು ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಕಿಂಗ್ ಮೇಕರ್‌ನನ್ನು ಮಾಡಿದ್ದು. ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವನ್ನು ಹಾಗು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ವಾಚಾಮ ಗೋಚರವಾಗಿ ನಿಂದಿಸಲು ಕಾರಣವಾಗಿದ್ದು, ವರಮಹಾಲಕ್ಷ್ಮಿ ವ್ರತಕ್ಕೆ ಪ್ರತಿ ವರ್ಷವೂ ಬಿಜೆಪಿಯ ನಾಯಕಿ ಸುಷ್ಮಾ ಸ್ವರಾಜ್‌ರವನ್ನು ಬಳ್ಳಾರಿಗೆ ಬರುವಂತೆ ಮಾಡಿದ್ದು, ಅಪರೇಷನ್ ಕಮಲಕ್ಕೆ ರಾಜ್ಯದ ಹಲವು ಶಾಸಕರು ಹಲವು ಜನ ಪ್ರತಿನಿಧಿಗಳು ತಮ್ಮನ್ನೇ ಮಾರಿಕೊಳ್ಳುವಂತೆ ಮಾಡಿದ್ದು, ಮುಂದೆ ಬಳ್ಳಾರಿ ಜಿಲ್ಲೆಯನ್ನ ಪ್ರತ್ಯೇಕ ಒಂದು ಕಾನೂನಿನ ಆಡಳಿತವಶ ಇಲ್ಲದ 'ಸಾರ್ವಭೌಮ ರಾಷ್ಟ್ರ'ವೋ ಎನಿಸುವಂತೆ ಮಾಡಿ ಮಾಫಿಯಾ ಆಡಳಿತ ನಿರ್ಮಿಸಿದ್ದು, ಜನತೆ ಮೇಲೆ ಇನ್ನಿಲ್ಲದ ದಾಳಿಯನ್ನ ನಡೆಸಿದ್ದು ಹಾಗೂ ಪ್ರಜಾಸತ್ತೆಯ ಬಾಯಿಗೆ ಬೀಗ ಜಡಿಯಲು ಯತ್ನಿಸಿದ್ದು, ನಂತರ ಬಳ್ಳಾರಿ ಜಿಲ್ಲೆಯ ಸುಮಾರು 1.60 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆದ ಕಾಡನ್ನು ನಾಶ ಪಡಿಸಿದ್ದು ಮತ್ತು ಮಹಾತ್ಮಗಾಂಧಿಯನ್ನು ಸೆಳೆದು ಒಂದು ದಿನ ತನ್ನೊಂದಿಗೆ ಕಳೆಯುವಂತೆ ಮಾಡಿದ ಸಂಡೂರಿನ ಸೊಬಗನ್ನು ಮಸಣ ಮಾಡಿದುದು. ರಾಜ್ಯದ ಲೋಕಾಯುಕ್ತರು ವಶಪಡಿಸಿಕೊಂಡಿದ್ದ ಲಕ್ಷಾಂತರ ಟನ್ ಕಳ್ಳ ಅದಿರನ್ನು ಮರಳಿ ಕಳ್ಳತನ ಮಾಡಿಸಿ ವಿದೇಶಕ್ಕೆ ಸಾಗಿಸುವ ಭಂಡತನಕ್ಕೆ ಕಾರಣವಾದದ್ದು, ರೆಡ್ಡಿ ಬಳಗ ತನ್ನ ವಿರುದ್ದ ಬಂಡೆದ್ದಾಗ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನವರು ಸಾರ್ವಜನಿಕವಾಗಿ "....ರಾಜ್ಯದಲ್ಲಿ ನಿಸರ್ಗ ಸಂಪತ್ತಿನ ಲೂಟಿಯೇ ನಡೆಯುತ್ತಿದೆ. ನಾನೊಬ್ಬ ಅಸಹಾಯಕ. ಜನರೇ ಇದನ್ನು ತಡೆಯಬೇಕು..." ಎಂದು ಕಣ್ಣೀರು ಹಾಕುವಂತೆ ಮಾಡಿದ್ದು ಇದೇ ಗಣಿ ಕುಣಿಯೇ. ವಿಧಾನ ಸಭೆಯಲ್ಲಿ ಪ್ರತಿಪಕ್ಷದ ಮುಖಂಡ ಸಿದ್ದರಾಮಯ್ಯನವರಿಗೆ ಜನಾರ್ಧನ ರೆಡ್ಡಿ ಬಳ್ಳಾರಿಗೆ ಬನ್ನಿ ನೋಡ್ಕೋತ್ತೀವಿ ಎಂದು ಸವಾಲು ಹಾಕಲು ಕಾರಣವಾದದ್ದು...

ಮಾಫಿಯಾ ಗಣಿಗಾರಿಕೆ, ಲೂಟಿಕೋರ ಗಣಿಗಾರಿಕೆಯ ನಡುವೆ ಸಂಘರ್ಷ ಉಂಟಾಗುವಂತೆ ಮಾಡಿದ್ದು, ಗಡಿ ರೇಖೆ ಅಳಿಸಿ ಒತ್ತುವರಿ ಮಾಡಿದುದ್ದನ್ನು ಬಯಲುಗೊಳಿಸಿದ್ದು, ಗುತ್ತಿಗೆ ಗಣಿಗಾರಿಕೆ ಬೆಳೆಯುವಂತೆ ಮಾಡಿದ್ದು, ಅದೇ ರೀತಿ ಆಂಧ್ರದ ಮಾಜಿ ಮುಖ್ಯಮಂತ್ರಿ ರೋಸಯ್ಯ ಮಾನಸಿಕ ಹಿಂಸೆ ಅನುಭವಿಸುವಂತೆ ಮಾಡಿದ್ದು ಹಾಗು ಅವರ ಕೋಪದಿಂದ ಸಿಬಿಐ ತನಿಖೆಗೆ ಒಳಪಡುವಂತೆ ಆಗಿದ್ದು, ಆಂಧ್ರದ ಕಾಂಗ್ರೆಸ್ ಪಕ್ಷದೊಳಗೆ ಹಾಗು ಕರ್ನಾಟಕದ ಬಿಜೆಪಿಯೊಳಗೆ ಒಡಕು ಮೂಡುವಂತೆ ಮಾಡಿದ್ದು..... ಎಲ್ಲದರ ಮೂಲವಾಗಿದ್ದು ಇದೇ, ಇದೇ ಗಣಿ ಕುಣಿಯೇ......

ಗರಬಡಿದಂತೆ ನಿಂತಿತಿ ತಂಡ

ಮಾತೇ ಹೊರಡದೇ ಗರ ಬಡಿದಂತೆ ನಿಂತು ಒಮ್ಮೆ ನಮ್ಮ ತಂಡ ಗಣಿ ಕುಣಿಯನ್ನೊಮ್ಮೆ ವೀಕ್ಷಿಸಿತು. ಬಾಲ ಗೋಪಾಲ್ ಅದಿರಿನ ಕಲ್ಲನ್ನು ಸಂಗ್ರಹಿಸಿ ಇಟ್ಟುಕೊಂಡರು! ಅದಿರಾವುದು? ಅದರಲ್ಲಿನ ಬರಿ ಕೆಂಪು ಕಲ್ಲಾವುದು! ಅದರಿನ್ನು ಹೇಗೆ ಸಂಗ್ರಹಿಸಲಾಗುತ್ತದೆ ? ಅದೇ ರೀತಿ



ವ್ಯಾಪಕವಾಗಿರುವ ಅದಿರಿನ ಜೊತೆ ಇರುವ ಬಾರಿ ಮಣ್ಣನ್ನು ಎಲ್ಲಿ, ಹೇಗೆ, ಯಾವ ಪ್ರಮಾಣದಲ್ಲಿ ಸಂಗ್ರಹಿಸಲಾಗುತ್ತದೆ ? ಎಂದೆಲ್ಲಾ ವಿವರಗಳನ್ನು ನುರಿತ ಗೆಳೆಯರ ಜೊತೆ ತಿಳಿಯುತ್ತಲೆ ನಮ್ಮ ತಂಡ ಬಳ್ಳಾರಿ ಕಡೆ ಮುಖ ಮಾಡಿತು.

ದಾರಿಯಲ್ಲಿ ನಿಂತು ಹೋದ ನೂರಾರು ಭಾರಿ ಯಂತ್ರಗಳಿರುವ ಶೆಡ್‌ಗಳನ್ನು, ಕ್ರಷರ್ ಕೇಂದ್ರಗಳನ್ನು ವೀಕ್ಷಿಸುತ್ತಲೇ ಬೆಟ್ಟ ಇಳಿದೆವು! ಮುಂದೆ ನಮ್ಮ ಪ್ರಯಾಣ ಮುಚ್ಚಿ ಹೋದ ಮೆದು ಕಬ್ಬಿಣ ಕೈಗಾರಿಕೆಗಳತ್ತ ಸಾಗಿತ್ತು. ದಾರಿಯಲ್ಲಿ ಹತ್ತಾರು ಕೈಗಾರಿಕೆಗಳು ಸಿಕ್ಕವಾದರೂ ಅದಿರಿಲ್ಲದೆ ಕಳೆದ 2–3 ತಿಂಗಳಿಂದ ಮುಚ್ಚಿ ಹೋಗಿದ್ದವು. ಜಿಲ್ಲೆಯಲ್ಲಿ 35 ಕ್ಕೂ ಅಧಿಕ ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು. ಪ್ರತಿ ಘಟಕವು ನೇರವಾಗಿ ಹಾಗು ಗುತ್ತಿಗೆ ಆಧಾರದಲ್ಲಿ ಮತ್ತು ಅಪ್ರತ್ಯಕ್ಷವಾಗಿ 400 ರಷ್ಟು ಕುಟುಂಬಗಳಿಗೆ ಆಧಾರವಾಗಿದ್ದವು. ಸುಮಾರು 14,000 ಕುಟುಂಬಗಳು ಸಂಕಷ್ಟದಲ್ಲಿವೆ ಹಾಗೂ ಇವುಗಳಲ್ಲಿ ಹೂಡಿರುವ ಸುಮಾರು 3,500 ಕೋಟಿ ಬಂಡವಾಳವು ಉತ್ಪಾದನೆಯಿಲ್ಲದೇ ಸುಮ್ಮನೇ ಗುಡ್ಡೆ ಬೀಳುವಂತಾಗಿದೆ.

ಮಾರ್ಗ ಮಧ್ಯದಲ್ಲಿ ತಮ್ಮ ಘಟಕಕ್ಕೆ ನಮ್ಮನ್ನು ಆಹ್ವಾನಿಸಿದ ಈ ಕೈಗಾರಿಕಾ ಸಂಘದ ಅಧ್ಯಕ್ಷರಾದ ಶ್ರೀನಿವಾಸರೆಡ್ಡಿ ತಮ್ಮ ಕೈಗಾರಿಕೆಗಳಿಗೆ ಅದಿರು ಸಿಗದೇ ಆಗುತ್ತಿರುವ ಅನ್ಯಾಯದ ಬಗ್ಗೆ, ನಷ್ಟದ ಬಗ್ಗೆ, ಕಾರ್ಮಿಕರನ್ನು ಕಳೆದುಕೊಳ್ಳಲಾಗದೆ ಅವರಿಗೆ 2 ತಿಂಗಳುಗಳಿಂದ ತಾವು ಕೆಲಸವಿಲ್ಲದೇ ಸಂಬಳವನ್ನು ನೀಡುತ್ತಿರುವ ಬಗ್ಗೆ ಅಲವತ್ತುಕೊಂಡರು. ತಮ್ಮ ಕೈಗಾರಿಕೆಗಳಿಗೆ ಬೇಕಾಗಿರುವುದು ಭಾರಿ ಗುಣ ಮಟ್ಟದ ಅದಿರೇನಲ್ಲಾ! ಕಡಿಮೆ ಗುಣಮಟ್ಟದ ಅದಿರು ಸಿಕ್ಕರೂ ಸಾಕು!.

ಈಗ ಎನ್.ಎಂ.ಡಿ.ಸಿ.ಯಿಂದ ಕಂಪನಿಗಳಿಗೆ ಅದಿರು ಒದಗಿಸಲು ಸುಪ್ರೀಂ ಕೋರ್ಟ್ ಹೇಳಿದ್ದರೂ. ಅದು ನಮ್ಮಂತಹ ಸಣ್ಣ ಕೈಗಾರಿಕೆಗಳಿಗೆ ಒದಗಿಸುತ್ತಿಲ್ಲ, ದೊಡ್ಡ ಕೈಗಾರಿಕೆಗಳಿಗೆ ಒದಗಿಸಲಾಗುತ್ತಿದೆ. ಅವರಿಗೂ ಬೇಕಾದಷ್ಟು ಒದಗಿಸಲಾರದ ಸ್ಥಿತಿಯಲ್ಲಿದೆಯೆಂದು ತಮ್ಮ ನೋವನ್ನು ತೋಡಿಕೊಂಡರು. ಖಂಡಿತಾ, ತಮ್ಮ ಅಸೋಷಿಯೆಷನ್ ಅದಿರು ರಫ್ತು ಮಾಡುವುದರ ಪರವಾಗಿ ಇಲ್ಲ. ಮೌಲ್ಯ ವರ್ಧಿತ ಉತ್ಪಾದನೆಯ ಪರವಾಗಿದ್ದೇವೆಂದು ತಮ್ಮ ಕೈಗಾರಿಕೆಗಳ ಉತ್ಪಾದನೆಯ ವ್ಯಥೆಯನ್ನು ವಿವರಿಸಿದರು.

ನಮ್ಮ ನಿಯೋಗವನ್ನು ಭೇಟಿ ಮಾಡಿದ ಆ ಕೈಗಾರಿಕೆಯ ಕಾರ್ಮಿಕರು ನಿರುದ್ಯೋಗದಿಂದಾಗಿ ಉದ್ಭವಿಸಿರುವ ತಮ್ಮ ಕುಟುಂಬದ ಸಮಸ್ಯೆಯನ್ನು ಪರಿಹರಿಸಲು ಹಾಗು ಉದ್ಯೋಗವನ್ನು ಉಳಿಸಿಕೊಡಲು ಕ್ರಮವಹಿಸಬೇಕೆಂದು ಕೋರಿದರು.

ಮೂಲತಃ ಸಣ್ಣ ಕೈಗಾರಿಕಾ ಘಟಕಗಳು ಬೆಳೆದದ್ದು ಮೆದು ಕಬ್ಬಿಣ ಉತ್ಪಾದಿಸುವ ಉದ್ದೇಶದಿಂದಲ್ಲ, ಬದಲಿಗೆ ಅದಿರು ಸಂಗ್ರಹಿಸಿ ರಫ್ತು ಮಾಡುವ ಉದ್ದೇಶದಿಂದ ಎಂಬ ಬಲವಾದ ಆರೋಪಗಳನ್ನು ಇವು ಎದುರಿಸುತ್ತಿದ್ದರೂ, ಈ ಕೈಗಾರಿಕೆಗಳು ಉಳಿಯುವುದು ಅವಶ್ಯವಿದೆ. ಇವುಗಳಿಗೆ ಅಗತ್ಯವಿರುವ ಅದಿರನ್ನು ಒದಗಿಸುವುದು. ಇವರಲ್ಲಿ ಕಾರ್ಯ ನಿರ್ವಹಿಸುವ ಸು. 50,000 ಜನ ಸಂಖ್ಯೆಯ 14,000 ಕಾರ್ಮಿಕ ಕುಟುಂಬಗಳಿಗೆ ಉದ್ಯೋಗ ಒದಗಿಸುವುದು ಅವಶ್ಯವಿದೆಯೆಂದು ಮತ್ತು ಇವುಗಳಿಗಾಗಿ ಕಡಿಮೆ ದರದ ಅದಿರು ನೀಡುವುದು ಸ್ಪರ್ಧೆಯಿಂದ ಇವುಗಳನ್ನು ರಕ್ಷಿಸಲೂ ಬೇಕಾಗಿದೆಯೆಂದು, ನಿಯೋಗ ಚರ್ಚಿಸಿತು.

2ನೇ ದಿನ ನಮ್ಮ ಪ್ರಯಾಣ ಹೊಸಪೇಟೆಯಿಂದ ಸಂಡೂರು ಮಾರ್ಗವಾಗಿ ಅತ್ಯಂತ ಹೆಚ್ಚು ಗುಣಮಟ್ಟ ಅದಿರಿನ ನಿಕ್ಷೇಪವಿರುವ ರಾಮಘಡ ಮೈನ್ಸ್ ಕಡೆ ಸಾಗಿತು. ಬಳ್ಳಾರಿ ಜಿಲ್ಲೆಯ 132 ಮೈನ್ಸ್ ಪ್ರದೇಶಗಳಲ್ಲಿ 100 ಕ್ಕೂ ಹೆಚ್ಚು ಪ್ರದೇಶಗಳಿರುವುದೇ ಹೊಸಪೇಟೆ ಹಾಗೂ ಸಂಡೂರುಗಳ ಪ್ರದೇಶದಲ್ಲಿ ಮತ್ತು ಅವುಗಳಲ್ಲಿ 98 ರಷ್ಟು ಮೈನಿಂಗ್ ಪ್ರದೇಶಗಳಿರುವುದು ಕಾಯ್ದಿಟ್ಟ ಅರಣ್ಯ ಜಮೀನಿನಲ್ಲಿ. ಬಳ್ಳಾರಿ ಜಿಲ್ಲೆಯಲ್ಲಿ ಕಾಡುಗಳೆಂದರೆ ಕುರುಚಲು ಕಾಡುಗಳೇ ಆಗಿವೆ. ಆದರೆ ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯಲ್ಲಿ ತೊಡಗಿರುವ ಜನತೆ ಬಿಟ್ಟರೇ ಬಹುತೇಕರು ನೋಡದ ಕಾಡಿನ ವೈಭವವಿರುವುದು ಈ ಬೆಟ್ಟಗಳ ತುದಿಯಲ್ಲಿ, ಅದರ ಇಕ್ಕೆಲಗಳಲ್ಲಿ.

ಅರಣ್ಯಭೂಮಿಯ ಅಗಾಧ ದುರ್ಬಳಕೆ

ಬಳ್ಳಾರಿ ಜಿಲ್ಲೆಯ 1,38,000 ಹೆಕ್ಟೇರ್ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಈ ಗಣಿಗಾರಿಕೆಯ ನಂತರ ಸುಪ್ರಿಂ ಕೋರ್ಟ್ ನೇತೃತ್ವದಲ್ಲಿ ನಡೆದ ಸಿ.ಇ.ಸಿ. ಸರ್ವೆ ಗುರುತಿಸಿದ್ದು. ಕೇವಲ 77,200 ಹೆಕ್ಟರ್ ಮಾತ್ರವೇ ಆಗಿದೆ. ಅಂದರೇ ಅದರ ಅಗಾಧತೆ ಅರ್ಥವಾಗುತ್ತದೆ. ಈ ಪ್ರದೇಶದಲ್ಲಿ 99 ಗಣಿಗಳಿಗೆ ಅವಕಾಶ ನೀಡುವಾಗ ಅವರಿಗೆ ನೀಡಿದ್ದು ಕೇವಲ 7,220.80 ಹೆಕ್ಟೇರ್‌ಗಳಾಗಿವೆ. ಅವರು ಒತ್ತುವರಿ ಮಾಡಿದುದು 1,079.20 ಹೆಕ್ಟೇರ್ ಎಂದು ಗುರುತಿಸಲಾಗಿದೆ. ಅಂದರೆ ಉಳಿದ 50,000 ಹೆಕ್ಟೇರ್‌ನಷ್ಟು ಪ್ರದೇಶ ಈ ಗಣಿಗಾರಿಕೆಯ ಉಳಿಕೆ–ವ್ಯರ್ಥವಾದುದನ್ನು ಸಾಗಿಸಲು, ಅದಿರನ್ನು ಹಲವೆಡೆ ಸಂಗ್ರಹಿಸಲು ಮತ್ತು ಸಾಗಾಣಿಕೆ ಹಾಗು ಕಂಪೆನಿಗಳ ಕಾರ್ಯ ಚಟುವಟಿಕೆಗಳಿಗಾಗಿ ಬಳಸಲಾಗಿದೆಯೆಂಬುದು ಅಘಾತಕಾರಿಯಾಗಿದೆ ಮತ್ತು ಅದಿರಿನ ವಹಿವಾಟಿನ ಅಗಾಧತೆಯನ್ನು ಇದು ತೆರೆದು ತೋರಿದೆ. ನಾಶವಾದ ಅರಣ್ಯವನ್ನು ಬೋಳಾಗುತ್ತಿರುವ ಬೆಟ್ಟಗಳನ್ನು ನೋಡಿ ಬಸುದೇವ ಆಚಾರ್ಯ ಅರಣ್ಯ ನಿರ್ಮಾಣ ಮಾಡದೇ ಇರುವ ಬಗ್ಗೆ ಆಶ್ಚರ್ಯ ವ್ಯಕ್ತ ಪಡಿಸಿದರು.

ಸಾಲುಸಾಲಾಗಿ ನೂರಾರು ಗಣಿಗಳು ಅವುಗಳ ಅಗಾಧವಾದ ಅರಣ್ಯದ ಮೇಲಿನ ಮತ್ತು ಸಂಪನ್ಮೂಲದ ಮೇಲಿನ ಅತ್ಯಾಚಾರವು ನಮ್ಮ ತಂಡದ ಸದಸ್ಯರನ್ನು ಘಾಸಿಗೊಳಿಸಿತು. ಜಿಲ್ಲೆಯ ಜನರಾರು ಕಾಣದ ಪ್ರತ್ಯೇಕ ಲೋಕ ಸಮುದ್ರ ಮಟ್ಟದಿಂದ 800 ಮೀಟರುಗಳಷ್ಟು ಎತ್ತರದಲ್ಲಿರುವ

ಬೆಟ್ಟದ ಸಾಲುಗಳಲ್ಲಿತ್ತು.

ಖಾಸಗಿ ಗಣಿಗಾರಿಕೆ ನಿಷೇಧ ಸರಿ

ಅಘಾತಗೊಂಡ ಬಸುದೇವರು ಹಾಗೂ ಬಾಲ ಗೋಪಾಲ್‌ರಿಗೆ ನಮ್ಮ ಜೊತೆಯಿದ್ದ ಗೆಳೆಯರೊಬ್ಬರು ಒಂದು ಗಣಿಯನ್ನು ತೋರಿಸಿ ಇಲ್ಲಿ 25 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 6 ಲಕ್ಷ ಟನ್‌ನಷ್ಟು ಅದಿರನ್ನು ಉತ್ಪಾದಿಸಲಾಗುತ್ತದೆ ಎಂದರು. ಈ ಅಗಾಧ ಪ್ರಮಾಣದ ಅದಿರು ಗಣಿಗಾರಿಕೆ ಇದ್ದಾಗಲೂ ಈ ಪರಿಯಾದ ಅದಿರು ಲೂಟಿಯೇ !! ಸುಪ್ರೀಂ ಕೋರ್ಟ್ ಗಣಿಗಾರಿಕೆ ನಿಷೇದಿಸಿ ಸರಿಯಾದ ಕೆಲಸ ಮಾಡಿದೆಯೆಂದು ಸುಪ್ರಿಂ ಕೋರ್ಟ್‌ನ ನಿರ್ಣಯವನ್ನು ಸ್ವಾಗತಿಸಿದರು.

ಬಾಲ ಗೋಪಾಲ್ ಪ್ರತಿ ಟನ್ ಅದಿರಿಗೆ ಉತ್ಪಾದನೆಗೆ ಆಗುವ ಖರ್ಚೆಷ್ಟು ಎಂದು ತಿಳಿದರು. ಅದರ ಮೇಲೆ 6 ಲಕ್ಷ ಟನ್ ಅದಿರಿನಿಂದ ಸಿಗುವ ಆದಾಯವೇನೆಂದು ಲೆಕ್ಕ ಹಾಕಿ ಆ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು. ಸಾಧಾರಣಾ 5,000 ರೂ ಗಳಿಂದ 8,000 ರೂ ಗಳವರೆಗೆ ಪ್ರತಿ ಟನ್ ಉತ್ಕೃಷ್ಟ ಕಬ್ಬಿಣದ ಅದಿರು ಮಾರಾಟವಾಗಿದೆ. ಇಲ್ಲಿ ಗಣಿ ಮಾಲೀಕರಿಗೆ ಪ್ರತಿ ಟನ್‌ಗೆ ಒಟ್ಟಾರೆ 500 ಖರ್ಚು ಆದರೆ, ಬರೀ 5,000 ರೂ ದರವೆಂದರೂ ಪ್ರತಿಟನ್‌ಗೆ 4,500 ರೂ ಗಳ ಅದಾಯವಿದ್ದು 6 ಲಕ್ಷ ಟನ್‌ಗೆ ಕನಿಷ್ಠ 210 ಕೋಟಿಯಾಗಿದೆ. ಪ್ರತಿ ದಿನವೂ ಸುಮಾರು 75 ಲಕ್ಷ ರೂಗಳಷ್ಟು ಲಾಭವಾಗಿದೆಯೆಂದು ವಿವರಿಸಿದರು.

ಅದೇ ರೀತಿ ಒಟ್ಟು 39 ಗಣಿಗಳಲ್ಲಿ ಶೇ. 70 ರ ಗುತ್ತಿಗೆಯಂತೆ ತೊಡಗಿದ್ದ ರೆಡ್ಡಿ ಗ್ಯಾಂಗ್ ಪಡೆದದ್ದೆಷ್ಟಿರಬಹುದೆಂಬ ಲೆಕ್ಕಾಚಾರದ ಚರ್ಚೆಯು ನಡೆಯಿತು.

ಸಂಡೂರಿನ ಪ್ರವಾಸಿ ಮಂದಿರದಲ್ಲಿ ಸಿ.ಪಿ.ಐ.(ಎಂ) ಉನ್ನತ ತಂಡವನ್ನು ಹಲವಾರು ಸಂಘ ಸಂಸ್ಥೆಗಳ ಮುಖಂಡರು ಭೇಟಿ ಮಾಡಿ ಆ ಪ್ರದೇಶದಲ್ಲಿ ನಡೆದ ಅವಾಂತರವನ್ನು ವಿವರಿಸಿದರು. ಅಲ್ಲಿ ಗೋಮಾಳ, ಕಾಡುಗಳು ಜಾನುವಾರುಗಳಿಗೆ ಆಶ್ರಯ ನೀಡಿದ್ದವು. ಈಗ ಅವುಗಳು ಒತ್ತುವರಿಯಾಗಿ ಬರಗಾಡಾಗಿವೆ ಎಂದು ಹೇಳಿದರೆ, ಎಲ್ಲಾ ಲಾಭವನ್ನು ಗಣಿ ಮಾಲೀಕರು, ಲಾರಿಗಳ ಮಾಲೀಕರು, ಸಾಲ ನೀಡಿದ ಫೈನಾನ್ಸ್ ಕಂಪನಿಗಳು, ಮಧ್ಯವರ್ತಿ ದಲ್ಲಾಳಿಗಳು ಪಡೆದರೇ ಹೊರತು, ದುಡಿಯುವ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಅವರು ನೀಡಿಲ್ಲವೆಂದು, ಅಲ್ಲಿ ದುಡಿದು ಹೊರ ಬಂದ ಕಾರ್ಮಿಕರೊಬ್ಬರು ತಮಗಾದ ಅನ್ಯಾಯದ ಅಳಲನ್ನು ತೋಡಿಕೊಂಡರು. ರೈತನೊಬ್ಬ ಬೆಟ್ಟದ ಬುಡದಲ್ಲಿದ್ದ ತನ್ನ ಪಟ್ಟಾ ಜಮೀನನ್ನು ಹೇಗೆ ದಾಖಲೆಗಳನ್ನು ತಿದ್ದುಪಡಿಮಾಡಿ ವಶಪಡಿಸಿಕೊಂಡಿರುವರೆಂದು ತಮಗಾದ ಅನ್ಯಾಯವನ್ನು ಸರಿಪಡಿಸಿಕೊಡಲು ಕೇಳಿದರು! ಈಗ ಹತ್ತಾರು ಸಾವಿರ ಲಾರಿ ಡ್ರೈವರ್, ಕ್ಲೀನರ್‌ಗಳು ಅದರ ಸಂಬಂಧಿ ತಾಂತ್ರಿಕ ಸಿಬ್ಬಂದಿಗಳು ಉದ್ಯೋಗ ಹೀನರಾಗಿರುವುದನ್ನು ತಂಡದ ಗಮನಕ್ಕೆ ತಂದರು.

ಮುಖ್ಯವಾಗಿ ಎನ್.ಎಂ.ಡಿ.ಸಿ.ಗೆ ಭೇಟಿ ಮಾಡಿದ ತಂಡವು ಎನ್.ಎಂ.ಡಿ.ಸಿ. ತನಗೆ ಅದಿರು ಒದಗಿಸಲು ವಹಿಸಿದ ಜವಾಬ್ದಾರಿಯನ್ನ ಹೇಗೆ ನಿಭಾಯಿಸಲಾಗುತ್ತದೆ! ಸಮಸ್ಯೆಗಳೇನು? ಎಂಬುದನ್ನು ಅರಿಯಲು ಯತ್ನಿಸಿದ ನಮ್ಮ ತಂಡಕ್ಕೆ ಅಲ್ಲಿಯ ಅಧಿಕಾರಿಗಳು ಈ ಬಗ್ಗೆ ಹೈದ್ರಬಾದ್ ಮುಖ್ಯ ಕಛೇರಿಯಲ್ಲಿ ಕೇಳಬೇಕೆಂದು ತಣ್ಣಗೆ ತಿಳಿಸಿ, ಆತಿಥ್ಯ ನೀಡಿ ದೂರ ಸರಿದರು. ಅಲ್ಲಿಯೂ ಎನ್.ಎಂ.ಡಿ.ಸಿ. ಗೆ ಸೇರಿದ ಗಣಿಗಳನ್ನು ರೆಡ್ಡಿ ಬಳಗ ಒತ್ತುವರಿ ಮಾಡಿ ಅದಿರು ಸಾಗಿಸಿದೆಯೆಂಬ ಆರೋಪಗಳಿವೆ. ಅದೇ ರೀತಿ ಸರ್ಕಾರದ ಇನ್ನೊಂದು ಸಂಸ್ಥೆ ಎಂ.ಎಂ.ಎಲ್. ಕೂಡ ಕಡಿಮೆ ಬೆಲೆಗೆ ಜಿಂದಾಲ್ ಕಂಪನಿಗೆ ಅದಿರು ನೀಡಿ ನಷ್ಟ ಮಾಡಿಕೊಂಡಿದೆಯೆಂಬುದನ್ನು ಲೋಕಾಯುಕ್ತರು ಹೊರಗೆಡಹಿದ್ದಾರೆ!.

ಸಂಜೆ ಬಳ್ಳಾರಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ತಮ್ಮ ಅನುಭವವನ್ನು ವಿವರಿಸಿದ ನಾಯಕರು ಸುಪ್ರೀಂಕೋರ್ಟ್ ಮಧ್ಯ ಪ್ರವೇಶಿಸಿ ಅದಿರಿನ ಲೂಟಿ ತಡೆಯಲು, ಗಣಿಗಾರಿಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದು ಸಮರ್ಥ್ಯನೀಯವಾಗಿದೆ ಎಂಬುದು ನಮ್ಮ ಪ್ರವಾಸದ ಅನುಭವವಾಗಿದೆಯೆಂದರು.



ಅಲ್ಲದೇ, ಇಲ್ಲಿ ನಡೆದ ಲೂಟಿಯ ಬಗ್ಗೆ ಮತ್ತು ಗಡಿ ರೇಖೆಯನ್ನು ಅಳಿಸಿ ಹಾಕಿದುದು, ಒತ್ತುವರಿ ಮಾಡಿದುದು, ಅಪಾರ ಪ್ರಮಾಣದ ಅರಣ್ಯ ನಾಶವಾಗಿರುವುದು ಮತ್ತು ಅರಣ್ಯ ನಿರ್ಮಾಣಕ್ಕೆ ಮುಂದಾಗದೇ ಇರುವುದು, ಜಿಲ್ಲೆಯ ಆಡಳಿತ ಅದಿರು ಲೂಟಿಕೋರರೊಂದಿಗೆ ಜೊತೆ ಶಾಮಿಲಾಗಿರುವುದು. ಜಿಲ್ಲೆಯಲ್ಲಿ ಮಾಫಿಯಾ ಶಕ್ತಿಗಳ ಆಡಳಿತದ ಕುರಿತು ಆದ ಗಾಬರಿ–ಆಚ್ಚರಿ ವ್ಯಕ್ತಪಡಿಸಿದರಲ್ಲದೇ, ತಕ್ಷಣವೇ ಇದನ್ನೆಲ್ಲಾ ತಡೆಯಲು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರು, ಲೂಟಿಕೋರರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಬಂಧಿಸಲು ಮತ್ತು ಅವರ ಆಸ್ತಿಗಳನ್ನ ಮುಟ್ಟುಗೋಲು ಹಾಕಿಕೊಳ್ಳಲು ಹಾಗು ಮಾಫಿಯಾ ಆಡಳಿತವನ್ನ ತಡೆಯಲು ಬಸುದೇವ

ಆಚಾರ್ಯ, ಬಾಲಗೋಪಾಲ್ ಒತ್ತಾಯಿಸಿದರು.

ಈ ಪ್ರಮಾಣದಲ್ಲಿ ಗಣಿ ಲೂಟಿಗೊಳಗಾದರೆ ಮುಂಬರುವ ಕೈಗಾರಿಕೆಗಳಿಗೆ ಅದಿರು ಎಲ್ಲಿಂದ ತರುವುದು? ಎಷ್ಟು ಅದಿರು ಉಳಿದಿದೆ ಎಂದು ಬಾಲ ಗೋಪಾಲನ್ ಪ್ರಶ್ನಿಸಿದರಲ್ಲದೆ ಎಲ್ಲಾ ರೀತಿಯ ಪ್ರಾಕೃತಿಕ ಸಂಪನ್ಮೂಲಗಳ ರಫ್ತಿನ ಮೇಲೆ ನಿಷೇಧವನ್ನು ಹೇರಬೇಕು ಹಾಗೂ ಮುಂದಿನ ಪೀಳಿಗೆಗೆ ದೊರೆಯುವಂತೆ ಮತ್ತು ಮೌಲ್ಯವರ್ಧನಗೊಳಿಸುವ ಆಂತರಿಕ ಉತ್ಪಾದನೆಗೆ ಮಾತ್ರ ಅವಕಾಶ ನೀಡಬೇಕೆಂದು ಒತ್ತಾಯಿಸಿದರು. ಸಿ.ಪಿ.ಐ.(ಎಂ) ಕಳೆದ ಒಂಡೆರಡು ದಶಕಗಳಿಂದ ಈ ಕುರಿತು ಕೇಂದ್ರವನ್ನು ಒತ್ತಾಯಿಸುತ್ತಿರುವ ಬಗ್ಗೆಯೂ ಹೇಳಿದರು.

ತಕ್ಷಣವೇ ಉಂಟಾಗಿರುವ ಭಾರಿ ನಿರುದ್ಯೋಗ ನಿವಾರಣೆಗೆ ಕೇಂದ್ರ–ರಾಜ್ಯ ಸರ್ಕಾರಗಳು ಮುಂದಾಗದಿದ್ದಲ್ಲಿ, ನಿರುದ್ಯೋಗಿ ಜನತೆಯಲ್ಲಿ ಸರ್ಕಾರದ ಬಗೆಗಿನ ವಿಶ್ವಾಸ ಹೊರಟು ಹೋಗಿ, ಗಣಿ ಲೂಟಿ ಮಾಡಿದವರೇ (ತಮ್ಮ ಉದ್ಯೋಗ ಒದಗಿಸುತ್ತಿದ್ದರೆಂದು) ಮೇಲೆಂಬ ಭಾವನೆ ಬರುವ ಹಾಗು ಅವರಿಗೆ ಬೆಂಬಲ ಸಿಗುವ ಅಪಾಯವಿದೆಯೆಂಬುದನ್ನು ಮನಗಂಡು ಸರ್ಕಾರಗಳು ಸ್ಪಂದಿಸಬೇಕೆಂದು ಹಾಗೂ ವಿಳಂಬ ಸಲ್ಲದೆಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯದ ಕಬ್ಬಿಣದ ಅದಿರಿನ ಉತ್ಪಾದನೆಯು ದೇಶದ ಒಟ್ಟು ಉತ್ಪಾದನೆಯ ಶೇ 25 ರಷ್ಟಾಗಿದೆ. ಅದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಾಗುವ ಉತ್ಪಾದನೆಯೇ ಪ್ರಧಾನವಾಗಿದ್ದು ರಾಜ್ಯದ ಒಟ್ಟು ಉತ್ಪಾದನೆಯ ಶೇ 60 ರಷ್ಟಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹಾಲಿ ಇರುವ ಸಣ್ಣ–ಮಾಧ್ಯಮ ಹಾಗು ದೊಡ್ಡ ಕೈಗಾರಿಕೆಗಳಿಗೆ ಪ್ರತಿ ವರ್ಷ 27 ಮಿಲಿಯನ್ ಟನ್ ಒದಗಿಸಬೇಕಾಗಿದೆ. ಅದೇ ರೀತಿ ಈಗಾಗಲೇ ರಾಜ್ಯ ಸರ್ಕಾರ ನಡೆಸಿದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಂತೆ ಬರುತ್ತಿರುವ ಕೈಗಾರಿಕೆಗಳಿಗೆ ಕನಿಷ್ಠವೆಂದರೂ ವಾರ್ಷಿಕ 50 ಮಿಲಿಯನ್ ಟನ್‌ಗೂ ಅಧಿಕ ಅದಿರು ಬೇಕಾಗುತ್ತದೆ. ಅಂದರೆ ಮುಂದಿನ ಅವಧಿಯಲ್ಲಿ ಪ್ರತಿವರ್ಷ 75 ಮಿಲಿಯನ್ ಟನ್ ಬೇಕಾಗಿದೆ.

ಆದರೆ ಐಬಿಎಂ 2005 ರಲ್ಲಿ ಸರ್ವೆ ನಡೆಸಿದಂತೆ ನಿಕ್ಷೇಪ ಗುರುತಿಸಿರುವುದು ಕೇವಲ 1,148 ಮಿಲಿಯನ್ ಟನ್ ಮಾತ್ರವೇ. ಅಂದರೆ ಅದಿರು ಲೂಟಿಯು ಇದೇ ವೇಗದಲ್ಲಿ ನಡೆದುದನ್ನು ತಡೆದರೂ ಕೈಗಾರಿಕೆಗಳಿಗೆ ಲಭ್ಯ ವಿರುವುದು ಈ ಸರ್ವೆಯಂತೆ ಕೇವಲ 10–15 ವರ್ಷ ಗಳಷ್ಟೆ ಆಗಿದೆ.

ಪಾರ್ಲಿಮೆಂಟ್ ಸದಸ್ಯರು ಜಿಲ್ಲೆಯಲ್ಲಿನ ಮಾಫಿಯಾ ಆಡಳಿತದ ಕುರಿತು ಸಂಗಾತಿಗಳ ಜೊತೆಯಲ್ಲಿ ಚರ್ಚಿಸಿದರು. ಇಲ್ಲಿನ ಕೆಲವು ಅಂಶಗಳನ್ನು ಅವರ ಗಮನಕ್ಕೆ ತಂಡದ ರಾಜ್ಯ ಹಾಗು ಜಿಲ್ಲಾ ಸಮಿತಿ ಸಂಗಾತಿಗಳು ವಿವರಿಸಿದರು. ಮುಖ್ಯವಾದ ಅಂಶಗಳು ಹೀಗಿವೆ.

1) ಗಡಿ ರೇಖೆಯನ್ನು ಅಳಿಸಿ ಹಾಕಲಾಗಿದೆ. ಅದೇ ರೀತಿ ಗಡಿ ನಕ್ಷೆಗಳನ್ನು ಆಂದ್ರ–ಕರ್ನಾಟಕದಲ್ಲಿ ತಿದ್ದಲಾಗಿದೆ.
2) ಬೇಲಿಕೇರಿಯಲ್ಲಿ ಲೋಕಾಯುಕ್ತರು ಮುಟ್ಟುಗೋಲು ಹಾಕಿಕೊಂಡಿದ್ದ 8 ಲಕ್ಷ ಟನ್ ಅದಿರನ್ನ ದರೋಡೆ ಮಾಡಿ ವಿದೇಶಗಳಿಗೆ ಸಾಗಿಸಲಾಗಿದೆ.
3) ಲೋಕಾಯುಕ್ತ ತನಿಖೆಗೆ ಆಗಮಿಸಿದ್ದ ಹಿರಿಯ ಅಧಿಕಾರಿಗಳನ್ನು ಬೆದರಿಸಲಾಗಿದೆ ಮತ್ತು ಅವರು ದೂರು ದಾಖಲಿಸಿದರೂ ಪೋಲೀಸ್ ಇಲಾಖೆ ದೂರು ದಾಖಲಿಸಿಕೊಳ್ಳುವುದಿಲ್ಲ.
4) ಬಳ್ಳಾರಿಯಲ್ಲಿ ಮನೆ ತೆರೆಯಲು ಮುಂದಾದ ಅನಿಲ್‌ಲಾಡ್ ಮನೆ ಮೇಲೆ ಹಾಡು ಹಗಲೆ ದಾಳಿ ನಡೆದಿದೆ.
5) ಸಂಗ್ರಹಿಸಿದ ಲಕ್ಷಾಂತರ ಟನ್ ಅದಿರನ್ನು ರಾತ್ರೋ ರಾತ್ರಿ ದರೋಡೆ ಮಾಡಿ ಬಂದರಿಗೆ ಸಾಗಿಸುವುದು.
6) ಸ್ವತಃ ಮುಖ್ಯ ಮಂತ್ರಿಗಳಾಗಿದ್ದ ಯಡಿಯೂರಪ್ಪನವರೇ ಈ ಬಗ್ಗೆ ಕಣ್ಣೀರು ಸುರಿಸಿದ್ದರು.
7) ವಿರೋಧಿಸಿದ ಗಣಿ ಮಾಲಕರ ಮೇಲೆ ಮಾಫಿಯಾ ದಾಳಿ ನಡೆಸಲಾಗಿದೆ.
8) ವಿಮಾನ ನಿಲ್ದಾಣ ಹೋರಾಟದಲ್ಲಿ ರೈತರನ್ನ ಪೋಲೀಸ್ ಹಲ್ಲೆ ಹಾಗು ಫೈರಿಂಗ್ ಮೂಲಕ ಬೆದರಿಸಲಾಗಿದೆ.
9) ವಿರೋಧಿಯೊಬ್ಬನ ಬಾಯಿಗೆ ಬಂದೂಕು ತೂರಿಸಿ ಪೋಲೀಸರು ಬೆದರಿಸಿದ್ದಾರೆ.
10) ವಿರೋಧಿಗಳ ಆಸ್ತಿಗಳ ಮೇಲೆ ದಾಳಿ ನಡೆಸಿ ವಶಪಡಿಸಿಕೊಳ್ಳಲಾಗುತ್ತದೆ.
11) ಪ್ರಶ್ನಿಸಿದವರನ್ನು ಕೊಲೆ ಕೇಸ್‌ಗಳಲ್ಲಿ ಸಿಕ್ಕಿ ಹಾಕಿಸಲಾಗುತ್ತದೆ. ಗಡಿ ಪಾರಿಗೆ ಕ್ರಮ ವಹಿಸಲಾಗುತ್ತದೆ ಇಲ್ಲವೆ ತಣ್ಣಗೆ ಬೆದರಿಕೆ ಹಾಕಲಾಗುತ್ತದೆ.
12) ನೂರಾರು ಬೊಲೆರೋ ವಾಹನಗಳಲ್ಲಿ ಸಾಗಿ ವಿರೋಧಿ ಮಾಲಿಕರಿಂದ ಗಣಿ ಮೇಲೆ ದಾಳಿ ನಡೆಸಲಾಗಿದೆ.
13) ಬಳ್ಳಾರಿ ನಗರ ಪಾಲಿಕೆಯ ಮೇಯರ್ ಪದ್ಮಾವತಿಯವರು ಹಾಡುಹಗಲೇ ಕೊಲೆಯಾಗಿದ್ದಾರೆ. ಯಾರನ್ನೂ ಬಂಧಿಸಿಲ್ಲ. ತನಿಖೆಯೂ ನಡೆಯುತ್ತಿಲ್ಲ.
14) ನಗರ ಪಾಲಿಕೆಯ ಇಂಜನೀಯರನೊಬ್ಬ 6–8 ವರ್ಷಗಳ ಹಿಂದೆ ಕಾಣೆಯಾದವನು ಈಗಲೂ ಸಿಕ್ಕಿಲ್ಲ – ಹೆಣವೂ ದೊರೆತಿಲ್ಲ.
15) ರೆಡ್ಡಿ ಬಳಗ ಕೊಟ್ಟಷ್ಟು ಹಣ ಪಡೆದು ಜಾಗ ಬಿಟ್ಟು ಬಿಡಬೇಕು.

ಚಿತ್ರಗಳು : ಸಿ.ರಘುನಾಥ್



"ಬೇಕು ಪ್ರಬಲ ಲೋಕಾಯುಕ್ತ"

ಲೋಕಾಯುಕ್ತ ನ್ಯಾ. ಸಂತೋಷ ಹೆಗಡೆ ವಿಶೇಷ ಸಂದರ್ಶನ

ಕರ್ನಾಟಕ ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ–ನೈಸರ್ಗಿಕ ಸಂಪತ್ತಿನ ಲೂಟಿಯ ಅಗಾಧತೆಯನ್ನು ಕಂಡು ದೇಶಕ್ಕೆ ದೇಶವೇ ಬೆಚ್ಚಿ ಬಿದ್ದಿದೆ. ಹಾಗೆಯೇ ಈ ಬೃಹತ್ ಹಗರಣ ಬಗೆಗೆ ಖಚಿತ ಸಾಕ್ಷಿ ಆಧಾರಗಳೊಂದಿಗೆ ಅತ್ಯಂತ ಸಮರ್ಥ ವರದಿಯನ್ನು ನೀಡಿದ ಕರ್ನಾಟಕ ಲೋಕಾಯುಕ್ತದ ಕೆಲಸ ದೇಶದ ಗಮನ ಸೆಳೆದಿದೆ. ಹಲವು ಬಗೆಯ ಅಪಾಯ, ಅಡೆ ತಡೆಗಳನ್ನು ಎದುರಿಸಿ ಕೆಲಸ ಮಾಡಬೇಕಾಗಿ ಬಂದ ಲೋಕಾಯುಕ್ತ ತಂಡದ ಮುಖ್ಯಸ್ಥರಾಗಿ ಅತ್ಯಂತ ದಕ್ಷತೆಯಿಂದ ಕೆಲಸ ನಿರ್ವಹಿಸಿದ ನ್ಯಾ. ಸಂತೋಷ ಹೆಗಡೆಯವನ್ನು ಜನಶಕ್ತಿ ಸಂದರ್ಶಿಸಿತು.

ಸಂದರ್ಶಕರು: **ಜಿ.ಎನ್. ನಾಗರಾಜ್, ಎಸ್.ವೈ.ಗುರುಶಾಂತ್, ಆರ್. ರಾಮಕೃಷ್ಣ (ಜನಶಕ್ತಿ) ಮನೋಜ್, ಸಿನೋ(ದೇಶಾಭಿಮಾನಿ)**

ಜನಶಕ್ತಿ: ಬಳ್ಳಾರಿಯಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಸ್ವರೂಪವೇನು ? ನೀವು ಕೊಟ್ಟಿರುವ ಗಣಿಗಾರಿಕೆ ಕುರಿತ ಲೋಕಾಯುಕ್ತ ತನಿಖಾ ವರದಿಯ ಪ್ರಮುಖ ಅಂಶಗಳೇನು ?

ನ್ಯಾ. ಸಂತೋಷ ಹೆಗಡೆ: ಗಣಿಗಾರಿಕೆ ಬಹಳಷ್ಟು ವರ್ಷಗಳಿಂದ.... ಬಹಳಷ್ಟು ದಶಕಗಳಿಂದ ನಡೆಯುತ್ತಿದೆ. ಕರ್ನಾಟಕದಲ್ಲಿ ಪ್ರಮುಖವಾಗಿ ಕಬ್ಬಿಣದ ಅದಿರು ಗಣಿಗಾರಿಕೆ ಮತ್ತು ಮ್ಯಾಂಗನೀಸ್ ಗಣಿಗಾರಿಕೆ ಸ್ವಲ್ಪ ಪ್ರಮಾಣದಲ್ಲಿ, ಸುಮಾರು 100 ವರ್ಷಕ್ಕೂ ಹೆಚ್ಚು ಕಾಲದಿಂದ ನಡೆದಿದೆ. ಬ್ರಿಟೀಷರೂ ಕಬ್ಬಿಣದ ಅದಿರು ಮಾರಿದರು.

ಖನಿಜ ಸಂಪನ್ಮೂಲಗಳ ಹಕ್ಕುದಾರಿಕೆ ಬಗೆಗೆ ಕಾನೂನು ಏನು ಹೇಳುತ್ತದೆ.... ಖಾಸಗಿ ಜಮೀನಿನಲ್ಲೇ ಇದ್ದರೂ ಕೂಡ ಪ್ರಮುಖ ಖನಿಜ(ಮೇಜರ್ ಮಿನರಲ್ಸ್)ಗಳು ಸರ್ಕಾರದ ಸ್ವತ್ತು.

ಹಿಂದೆ ಗಣಿಗಾರಿಕೆಗೆ ಅರ್ಜಿ ಹಾಕುವುದಿದ್ದರೆ ಎಷ್ಟು ಖನಿಜ ಸಿಗುತ್ತದೆ ಎಂದು ನೋಡಬೇಕಿತ್ತು. ಮಾರುಕಟ್ಟೆ ಬೆಲೆ ಖರ್ಚು ಎಲ್ಲ ಲೆಕ್ಕ ಹಾಕಿ ನೋಡಬೇಕಿತ್ತು. ಪ್ರಾಸ್‌ಪೆಕ್ಟಿಂಗ್ ಸ್ಟೇಜಲ್ಲೇ ಬಹಳ ಖರ್ಚಾಗುತ್ತಿತ್ತು. 2001 ರವರೆಗೂ ಬೇಡಿಕೆ

ಹೆಚ್ಚಿರಲಿಲ್ಲ. ವಾಸ್ತವವಾಗಿ ನಷ್ಟ ಆಗುವುದು ಕೂಡ ಇತ್ತು. 2000ದ ಇಸವಿಯಿಂದಾಚೆಗೆ ವಿದೇಶಗಳಲ್ಲಿಯೂ ಕಬ್ಬಿಣದ ಅದಿರಿಗೆ ಬೇಡಿಕೆ ಏರಿತು.



ಬಳ್ಳಾರಿಯ ಟಪಾಲ್ ಗಣೇಶ್ ಅವರ ತಂದೆ ರಾಜಶೇಖರ್ ಕುಟುಂಬದವರು ಮತ್ತಿತರ ಕೆಲವರು ಹಿಂದಿನಿಂದಲೂ ಗಣಿಗಾರಿಕೆ ನಡೆಸುತ್ತ ಬಂದವರು.

ಓಬಳಾಪುರಂ ಗ್ರಾಮ ಕರ್ನಾಟಕ-ಆಂಧ್ರ ಪ್ರದೇಶಗಳ ನಡುವೆ ಎರಡು ಭಾಗವಾಗಿತ್ತು. ಅಲ್ಲಿ ಅಂದರೆ ಆಂಧ್ರದ ಭಾಗದಲ್ಲಿ ಹೆಚ್ಚು ಅದಿರು ಸಿಗುತ್ತಿರಲಿಲ್ಲ.

ಜನಾರ್ಧನ ರೆಡ್ಡಿ ಮತ್ತು ಜೊತೆಗಾರರು ಎನೋಬಲ್ ಚಿಟ್ ಫಂಡ್ ನಡೆಸುತ್ತಿದ್ದವರು ಗಣಿಗಾರಿಕೆಗೆ ಇಳಿದರು. ಅವರು ಎಲ್ಲಿ ಬೇಕೋ ಅಲ್ಲಿ ಗಣಿಗಾರಿಕೆ ನಡೆಸಿದರು. ಅನುಮತಿ ಇಲ್ಲದ ಕರ್ನಾಟಕದ ಜಾಗದಲ್ಲಿ ಅಕ್ರಮ ಗಣಿಗಾರಿಕೆ ನಡೆಸಲು ಇವರು

ಬ್ರಿಟಿಷರ ಕಾಲದಲ್ಲಿ ಹಾಕಿದ ಜಂಕ್ಷನ್ ಮಾರ್ಕ್‌ಗಳನ್ನು...ಅಂದರೆ ಗಡಿ ಗುರುತು ಬ್ಲಾಸ್ಟ್ ಮಾಡಿ ಹಾಕಿದ್ದಾರೆ. ಸುಗ್ಗುಲಮ್ಮ ಗುಡಿ ಉರುಳಿಸಿದ್ದಾರೆ. ಮೊದಲಿನಿಂದಲೂ ಗಣಿಗಾರಿಕೆ ನಡೆಸುತ್ತ ಬಂದಿರುವ ಟಪಾಲ್ ಗಣೇಶ್ ಕುಟುಂಬದ ವಿರುದ್ದ ದೌರ್ಜನ್ಯ ನಡೆಸಲಾಗಿದೆ.

ಅದಿರು ಸಾಗಣೆ ಮಾಡುವಾಗ ಸಿಂಗಲ್ ಗೇರ್ ವೆಹಿಕಲ್ ಅಂದರೆ ಒಂದು ಗೇರ್ ಇರುವ ಲಾರಿಯಾದರೆ 16 ಮೆಟ್ರಿಕ್ ಟನ್‌ವರೆಗೆ ಹಾಕಬಹುದು. ಇವರು 20–24 ಟನ್ ಸಾಗಾಣಿಕೆ ಮಾಡಿದ್ದಾರೆ. ಅಂದರೆ ಓವರ್ ಲೋಡ್ ಮಾಡಿ ಸಾಗಾಣಿಕೆ ಮಾಡಿದ್ದಾರೆ. ಮಲ್ಟಿಪಲ್ ಅಕ್ಸೆಲ್ ಅಂದರೆ ಹೆಚ್ಚಿನ ಗೇರ್ ಇರುವ ಗಾಡಿಗಳಲ್ಲಿ 60–70 ಮೆ.ಟನ್‌ಗಳವರೆಗೂ ಸಾಗಾಣಿಕೆ ಮಾಡಿದ್ದಾರೆ.

(ಅಂದರೆ ಅನುಮತಿ ಇರುವ ಪ್ರಮಾಣದ ನಾಲ್ಕು ಪಟ್ಟು ಅದಿರು ಸಾಗಣೆ) ಈ ವಾಹನಗಳು ಓಡಾಡುವ ದಾರಿಯೆಲ್ಲಾ ಧೂಳುಮಯ. ಮಂಗಳೂರು,ಕಾರವಾರ, ಗೋವಾ ಮೂಲಕ ಸಾಗಿಸಿದ್ದಾರೆ. ಸಂಡೂರಿನಲ್ಲಿ ಪ್ರತಿ ನಿತ್ಯ ಹತ್ತು ಸಾವಿರ ವಾಹನಗಳು ಓಡಾಡುತ್ತವೆ. ಅಲ್ಲಿನ ಮಕ್ಕಳು ಶಾಲೆಗೇ ಹೋಗುವಂತಿಲ್ಲ. ಅಲ್ಲಿನ ಗಿಡಗಳೆಲ್ಲಾ ಕೆಂಪು, ಬಾವಿಗಳೆಲ್ಲಾ ಕೆಂಪು. ಮನೆಗಳಲ್ಲಾ ಕೆಂಪು.

ಒಳ್ಳೆಯ ಗುಣಮಟ್ಟದ ಅದಿರಾದರೆ ಸರ್ಕಾರಕ್ಕೆ ಮೆಟ್ರಿಕ್ ಟನ್‌ಗೆ ಕೇವಲ 27 ರೂಪಾಯಿ ರಾಯಲ್ಟಿ ಅಂದರೆ ರಾಯಧನ ಕೊಡಬೇಕಿತ್ತು. ಕಡಿಮೆ ಗುಣಮಟ್ಟದ ಅದಿರಾದರೆ ರಾಯಧನ ಕೇವಲ 17 ರೂಪಾಯಿ ಮಾತ್ರ ಇತ್ತು. ಈಗ ಸ್ವಲ್ಪ ಜಾಸ್ತಿಯಾಗಿದೆ. ಅಕ್ರಮವಾಗಿ ಸಾಗಿಸಲಾಗಿರುವ ಅಪಾರ ಪ್ರಮಾಣದ ಅದಿರಿಗೆ ರಾಯಧನ ಕೊಡದೆ ಬಾರಿ ವಂಚನೆ ಮಾಡಲಾಗಿದೆ.

2006–08 ರಲ್ಲಿ ಮೆಟ್ರಿಕ್ ಟನ್ ಕಬ್ಬಿಣದ ಅದಿನ ಬೆಲೆ 6,000–7,000 ಇತ್ತು. ಪ್ರತಿ ಟನ್‌ಗೆ 150 ರೂಪಾಯಿ ಸಾರಿಗೆ ಖರ್ಚು...ಶಿಪ್ಪಿಂಗ್‌ಗೆ ಪ್ರತಿಟನ್‌ಗೆ 150 ರೂ. ಇತರೆ ವೆಚ್ಚ ಎಲ್ಲಾ ಸೇರಿ ಸುಮಾರು 500 ರೂಪಾಯಿ ಖರ್ಚು ಎಂದುಕೊಂಡರೂ, ಮತ್ತೆ ಪ್ರತಿ ಟನ್‌ಗೆ ಲಂಚ 1,000 ಕೊಟ್ಟರೂ ಗಣಿಗಾರಿಕೆ ಮಾಡಿದವರಿಗೆ ಬಾರಿ ಲಾಭ. ಗಣಿಗಾರಿಕೆ ಮಾಡುವವರು ಸರ್ಕಾರಕ್ಕೆ ಕೊಡುವ ರಾಯಲ್ಟಿ ಅಕ್ರಮ ಅದಿರು ಸಾಗಾಣಿಕೆಯಿಂದ ಹಾಳಾಗುವ ರಸ್ತೆಗಳ ರಿಪೇರಿಗೂ ಕೂಡ ಸಾಲುತ್ತಿರಲಿಲ್ಲ.

ಜನಶಕ್ತಿ: ಇಂತಹ ಜನರಿಗೆ ಗಣಿ ಗುತ್ತಿಗೆ ಸಿಗುತ್ತಿರುವುದು ಹೇಗೆ?

ನ್ಯಾ. ಸಂ. ಹೆಗಡೆ: ಗಣಿ ಅದಿರು ಸಾಗಣೆ ಮಾಡಲು ಎರಡು ಬಗೆಯ ಅನುಮತಿ ಬೇಕು. ಒಂದು ಅರಣ್ಯ ಇಲಾಖೆಯ ಅನುಮತಿ, ಮತ್ತೊಂದು ಗಣಿ ಮತ್ತು ಭೂ ವಿಗ್ನಾನ ಇಲಾಖೆಯ ಅನುಮತಿ. ಗಣಿ ಗುತ್ತಿಗೆ ಯಾರಿಗೆಂದು ತೀರ್ಮಾನವಾಗುವ ಹಂತದಲ್ಲಿ ಅಂದರೆ ಲೀಸಿಂಗ್ ಸ್ಟೇಜಿನಲ್ಲಿ ಯಾರಿಗೆ ಸರ್ಕಾರದ ಸಂಬಂಧವಿದೆಯೋ, ಅಧಿಕಾರಿಗಳೊಂದಿಗೆ ಸಂಬಂಧವಿದೆಯೋ ಅವರಿಗೆ ಲೈಸೆನ್ಸ್ ಸಿಗುತ್ತಿತ್ತು . ಗಣಿಗಾರಿಕೆಗೆ ಅನುಮತಿ ಕೋರಿ ಸಲ್ಲಿಸುವ ಅರ್ಜಿ ಬಗ್ಗೆ ತೀರ್ಮಾನಿಸುವವರು ಸರ್ಕಾರದವರು...



ವಿಧಾನ ಸೌಧದಲ್ಲಿ ಕುಳಿತವರು. ಗಣಿ ಅಧಿಕಾರಿಗಳು , ಪೋಲಿಸ್ ಅಧಿಕಾರಿಗಳು, ಸಾರಿಗೆ ಅಧಿಕಾರಿಗಳು,

ಆಮೇಲೆ ಎಲ್ಲಿಯೋ ಲೈಸೆನ್ಸ್ ತೆಗೆದುಕೊಳ್ಳುವುದು ಎಲ್ಲೋ ಗಣಿಗಾರಿಕೆ ಮಾಡುವುದು. ಸಂಡೂರು ತಾಲೂಕಿನೊಳಗೆ ಗಣಿಗಾರಿಕೆಗೆ ಎಂದು ಹೇಳಿ ಒಂದು ಕಡೆ ಪರವಾನಗಿ ತೆಗೆದುಕೊಳ್ಳಲಾಗಿದೆ. ಆದರೆ ಸಂಡೂರಿನಲ್ಲಿ ಅಂತಹ ಜಾಗವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಜನ ವ್ಯವಸಾಯ ಬಿಟ್ಟರು. 15-20 ವರ್ಷದ ಹುಡುಗರು ಶಾಲೆ-ಕಾಲೇಜು ಬಿಟ್ಟರು. ಅವರ ಕೈಗೆ ಮೊಬೈಲು, ಮೋಟಾರು ಬೈಕ್‌ಗಳು ಬಂದವು. ಮಾಫಿಯಾ ಗ್ಯಾಂಗ್ ಸಿದ್ದವಾಯಿತು.

2008 ರಲ್ಲಿ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತ ಸಂಸ್ಥೆಯ ವರದಿ ಸಲ್ಲಿಸಲಾಯಿತು. ಸರ್ಕಾರ ಈ ಕುರಿತು ಯಾವೊಂದು ಕ್ರಮವನ್ನೂ ಕೈಗೊಳ್ಳಲಿಲ್ಲ. ಗಣಿ ಅದಿರು ಓವರ್ ಲೋಡಿಂಗ್ ಮಾಡುವುದರ ಜೊತೆಗೆ ಲೈಸೆನ್ಸ್ (ನಕಲಿ) ಅನ್ನು ಪ್ರಿಂಟ್ ಮಾಡಲು ಶುರು ಮಾಡಿದರು.

ಹೊಸಪೇಟೆಯಿಂದ ಬೇಲೆಕೇರಿಗೆ 7 ಚೆಕ್ ಪಾಯಿಂಟ್‌ಗಳಿವೆ. ಈ ಮಾರ್ಗದಲ್ಲಿ ಪರಿಶೀಲಿಸಿದಾಗ 99 ಲಾರಿಗಳಿಗೆ ಪರವಾನಗಿಯಲ್ಲಿ ಸೀಲ್ ಇರಲಿಲ್ಲ.

ನೋ ರಿಸ್ಕ್ ಟ್ರಾನ್ಸ್‌ಪೋರ್ಟ್ -(ಆತಂಕವೇ ಇಲ್ಲದ ಸಾಗಾಣಿಕೆ)

ಬಳ್ಳಾರಿ ಜಿಲ್ಲೆಯಲ್ಲಿ ಯಾರು ಎಷ್ಟೇ ದೊಡ್ಡವರಿರಲಿ ಅದಿರು ಸಾಗಾಣಿಕೆ ಮಾಡಬೇಕಾದರೆ ರೆಡ್ಡಿ ಬಳಗಕ್ಕೆ 40-45 ಶೇ. ಪಾಲು ಕೊಡಬೇಕು. ಸಾಗಾಣಿಕೆ ಮಾಡಬೇಕಾದ "ಅದಿರು ಎಲ್ಲಿದೆ ತೋರಿಸಿಬಿಡಿ ಸಾಕು..ನಾವು ಡೆಲಿವರಿ ಮಾಡುತ್ತೇವೆ..." ಎಂಬ ಧೋರಣೆ ಅವರದಾಗಿತ್ತು. ಯಾವ ಅಧಿಕಾರಿ ಕೂಡ ತನಿಖೆ ಮಾಡುವುದಿಲ್ಲ...ತಡೆಯುವುದಿಲ್ಲ...ಎಂಬ ಸ್ಥಿತಿ ಇತ್ತು. ವರದಿಯಲ್ಲಿ ಅದನ್ನು ನಾನು "ರಿಪಬ್ಲಿಕ್ ಅಫ್ ಬಳ್ಳಾರಿ" ಅಂತ ಕರೆದಿದ್ದೇನೆ.

ಎ. ಬ್ಯಾಂಕ್ ಬಿ ಬ್ಯಾಂಕ್ ಸಿ ಬ್ಯಾಂಕ್ ಅಕೌಂಟ್.....ವಂಚನೆಗಳು

ಕಾಶಿ ವಿಶ್ವನಾಥ್ ಅನ್ನುವ ವ್ಯಕ್ತಿ ಮೆಟಲ್ ಶಾಪ್ ಮಾರಾಟ ಮಾಡಿ ಒಂದು ಫರ್ಮ್ ಶುರು ಮಾಡಿದರು ಮತ್ತು ಬ್ಯಾಂಕ್ ಅಕೌಂಟ್ ಶುರು ಮಾಡಿದರು. ಮರುದಿನ ಅವರ ಅಕೌಂಟ್‌ಗೆ 10 ಕೋಟಿ ಹಣ ಜಮಾ ಆಗುತ್ತದೆ. ಇದು ಎ ಬ್ಯಾಂಕು. ಇದನ್ನು ಹಿಂದೆಯೇ ಮತ್ತೊಂದು ಫರ್ಮ್‌ಗೆ ಕೊಡಲಾಗುತ್ತದೆ. ಇಬ್ಬರು ಯುವಕರು ಹಿಂದೆ ಒಎಂಸಿಯಲ್ಲಿದ್ದವರು ಅವರಿಗೆ ಹಣ ಹೋಗುತ್ತದೆ. ಆ ನಂತರ ಹಣ 'ಬಿ' ಬ್ಯಾಂಕಿಗೆ ಹೋಗುತ್ತದೆ. ಆ ನಂತರ ಆ ಹಣ 'ಸಿ' ಬ್ಯಾಂಕಿಗೆ ಹೋಗುತ್ತದೆ...... (ಅಕ್ರಮ ಗಣಿಗಾರಿಕೆಯ ಹಣ ತನ್ನ ಗುರುತು ಮರೆ ಮಾಚಿಕೊಂಡು ಹೇಗೆ ಬೇನಾಮಿ ಹೆಸರಿನಲ್ಲಿ ಹರಿದಾಡುತ್ತದೆ ಎಂದು ಹೆಗಡೆಯವರು ವಿವರಿಸುತ್ತಾ ಹೋದರು....)

ರೆಡ್ಡಿ ಮತ್ತು ಜೊತೆಗಾರರು ಏನೆಲ್ಲಾ ಹೇಳಿದ್ದರು. ನಾವು ಕರ್ನಾಟಕದಲ್ಲಿ ಗಣಿಗಾರಿಕೆ ಮಾಡಲೇ ಇಲ್ಲ ಅಂತೆಲ್ಲಾ ಹೇಳಿದ್ದರು. 40 ಲಕ್ಷ ರೂಪಾಯಿಗಳನ್ನು ಇಬ್ಬರು ಅಧಿಕಾರಿಗಳಿಗೆ ಲಂಚವಾಗಿ ಕೊಡಲಾಗಿದೆ. ಲಕ್ಷಾಂತರ ಕೋಟಿ ರೂಪಾಯಿ ಮೌಲ್ಯದ ಖನಿಜ ಸಂಪತ್ತನ್ನು ಅಕ್ರಮವಾಗಿ ಗಣಿಗಾರಿಕೆಯಲ್ಲಿ ಲೂಟಿ ಮಾಡಲಾಗಿದೆ. ಗಣಿಗಾರಿಕೆ ವಿಷಯದಲ್ಲಿ ಸಿಂಗಲ್ ವಿಂಡೋ ಸಿಸ್ಟಮ್(ಏಕಗವಾಕ್ಷಿ ಪದ್ಧತಿ-ಅಂದರೆ ಹೆಚ್ಚಿನ ಅಡೆತಡೆ, ವಿಚಾರಣೆ , ಪರಿಶೀಲನೆ ಇಲ್ಲದೆ, ತಕರಾರುಗಳಿಲ್ಲದೇ ಕಡತವನ್ನು ವಿಲೇವಾರಿ ಮಾಡುವ ಪದ್ಧತಿ) ಇರುವುದು ಕರ್ನಾಟಕವೊಂದರಲ್ಲೇ.

ಜನಶಕ್ತಿ: ಇಷ್ಟೆಲ್ಲಾ ಅಕ್ರಮಗಳ ಹಿನ್ನೆಲೆಯಲ್ಲಿ ಈ ಅಪರಾಧಿಗಳ ವಿರುದ್ಧ ಎಫ್.ಐ.ಆರ್. ಹಾಕಿ ಕ್ರಮ ವಹಿಸಲು ಆಗುವುದಿಲ್ಲವೇ?

ನ್ಯಾ. ಸಂ.ಹೆಗಡೆ: ಆ ಅಧಿಕಾರ ಇಲ್ಲ ನನಗೆ. ನನ್ನದು ಪ್ರಿಲಿಮಿನರಿ(ಪ್ರಾಥಮಿಕ) ವರದಿ ಕೊಡುವ ಕೆಲಸ. ಸರಕಾರ ವರದಿಯನ್ನು ಒಪ್ಪಿದರೆ ಮಾತ್ರ ಲೋಕಾಯುಕ್ತ ಪೋಲಿಸರು ಮೊಕದ್ದಮೆ ಹೂಡಬಹುದು.

ಜನಶಕ್ತಿ: ಅಕ್ರಮ ಗಣಿಗಾರಿಕೆಯಿಂದ ಆಗಿರುವ ನಷ್ಟದ ಬಗೆಗಿನ ಅಂದಾಜು ಹೇಗೆ ?

ನ್ಯಾ. ಸಂ.ಹೆಗಡೆ: ನೈಸರ್ಗಿಕ ಸಂಪತ್ತಿನ ನಷ್ಟ ಲೆಕ್ಕಹಾಕಿಲ್ಲ. ಸರ್ಕಾರಕ್ಕೆ ಬರಬೇಕಿದ್ದ ಆದಾಯದ ನಷ್ಟವನ್ನು 16,000 ಕೋಟಿ ಎಂದು ಲೆಕ್ಕ ಹಾಕಲಾಗಿದೆ. ವಾಸ್ತವಿಕವಾಗಿ 1 ಲಕ್ಷ ಕೋಟಿಗೂ ಜಾಸ್ತಿ ನಷ್ಟವಾಗಿದೆ.

ಜನಶಕ್ತಿ: ತಾವು ಅಕ್ರಮಗಳ ತನಿಖೆ ನಡೆಸುವಾಗ ಬಂದ ಅಡೆ ತಡೆಗಳೇನು ?

ನ್ಯಾ. ಸಂ. ಹೆಗಡೆ: ನನ್ನ ಅಧಿಕಾರಿಗೆ (ಅಂದರೆ ಲೋಕಾಯುಕ್ತ ಅಧಿಕಾರಿ ಡಾ। ಯು.ವಿ.ಸಿಂಗ್) ಸೋಮಶೇಖರ ರೆಡ್ಡಿ ಬೆದರಿಕೆ ಹಾಕಿದ್ದರು. ಎಸ್.ಸಿ., ಎಸ್.ಟಿ. ಅಟ್ರಾಸಿಟಿ (ದಲಿತರ ಮೇಲಿನ ದೌರ್ಜನ್ಯ ಪ್ರಕರಣ)ಕೇಸ್ ಹಾಕುತ್ತೇವೆ ಎಂದು ಹೆದರಿಸಲು

ಜನಶಕ್ತಿ: ಈ ಎಲ್ಲಾ ಅಕ್ರಮ ಗಣಿಗಾರಿಕೆ, ಅಪರಾಧಗಳು ಸಾಮಾಜಿಕವಾಗಿ ಹೇಗೆ ಪರಿಣಾಮ ಬೀರಿವೆ ?

ನ್ಯಾ. ಸಂ.ಹೆಗಡೆ: ಹಲವು ಬಗೆಯ ಸಾಮಾಜಿಕ ದುಷ್ಪರಿಣಾಮಗಳಿವೆ. ಬಳ್ಳಾರಿ ನಗರದ ಮೇಯರ್ ಆಗಿದ್ದ ಪದ್ಮಾವತಿ ಯಾದವ್ ಕೊಲೆ ಆಗಿದೆ. ಎಫ್.ಐ.ಆರ್. ಹಾಕಿದ್ದಾರೆ. ಆದರೆ ವಿಚಾರಣೆ ನಡೆದಿಲ್ಲ. ಯಾರನ್ನೂ ಬಂಧಿಸಿಲ್ಲ.

ಬಿಟ್ಟಿ ಮೋಟಾರ್ ಸೈಕಲ್, ಪೆಟ್ರೋಲು, ದುಡ್ಡು ಕೊಟ್ಟ ಮೇಲೆ ಯುವಕರು ಕ್ರೈಮ್ ಅಲ್ಲದೇ ಬೇರೇನು ಮಾಡುತ್ತಾರೆ. ಹಣ ಖಾಲಿ ಆದ ಮೇಲೆ ಬೇರೆ ಏನು ಮಾಡುತ್ತಾರೆ.

ನೋಡಿದರು.

ಕಾನೂನು ಕಟ್ಟಳೆ ನೀತಿ ನಿಯಮಗಳು ಒಂದಕ್ಕೂ ಅವರು ಬೆಲೆ ಕೊಡಲಿಲ್ಲ. ಗಣಿ ಅಕ್ರಮ ತಡೆಯಲು ಪರವಾನಗಿಗೆ ಹಾಲೋಗ್ರಾಮ್ ಹಾಕಿ.....ಕಂಪ್ಯೂಟರ್ ನಂಬರ್ ಹಾಕಿ ಎಂದರೆ ಸರ್ಕಾರ ಯಾವುದನ್ನೂ ಜಾರಿಗೆ ತರಲಿಲ್ಲ.


ಇಲ್ಲಿಂದ ಗೋವಾಕ್ಕೆ ಅದಿರನ್ನು ಬಳಕೆಗೆ ಅಂತ ಸಾಗಾಣಿಕೆ ಮಾಡುವುದು. ಅಲ್ಲಿಂದ ನಂತರ ವಿದೇಶಕ್ಕೆ ಸಾಗಿಸುವುದು, ಅಂದರೆ ರಫ್ತು ಮಾಡುವುದು.

ಹೀಗೆ ವಂಚನೆ ನಡೆದಿದೆ. ನಾವು ವರದಿಯಲ್ಲಿ ಅದನ್ನು ಹೇಳಿದ್ದೇವೆ. ಶಾ ಸಮಿತಿ ಅದನ್ನು ಒಪ್ಪಿದೆ. ಗೋವಾದಲ್ಲೀಗ ಗದ್ದಲ ಶುರುವಾಗಿದೆ. ಗೋವಾದಲ್ಲಿ ಒಟ್ಟು 99 ಗಣಿಗಳಿವೆ. ಆದರೆ ಕೇವಲ 9 ಗಣಿಗಳಿಗೆ ಮಾತ್ರ ಅನುಮತಿ ಇದೆ.

ಜನಶಕ್ತಿ: ಗಣಿಗಾರಿಕೆ ಅಕ್ರಮಗಳನ್ನು ತಡೆಯಲು ನೀವು ಸೂಚಿಸುವ ಕ್ರಮಗಳೇನು ?

ನ್ಯಾ. ಸಂ. ಹೆಗಡೆ: ಗಣಿ ಅದಿರು ಮತ್ತೆ ಹುಟ್ಟುವುದಿಲ್ಲ. ಹಿಂದೊಮ್ಮೆ ಇನ್ನು ಮುಂದೆ 25–30 ವರ್ಷಗಳು ಮಾತ್ರ ಗಣಿ ದೊರೆಯುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಈಗ ಕೇವಲ 15 ವರ್ಷಗಳಲ್ಲಿ ಈ ಸಂಪತ್ತು ಖಾಲಿಯಾಗುತ್ತದೆ ಎಂದು ಅಂದಾಜಿಸಲಾಗಿದೆ. ರಫ್ತು ನಿಲ್ಲಿಸಿ ಬಿಡಿ...ಅದರಿಂದ ಹಾನಿ ಮಾತ್ರ. ಇಲ್ಲಿ ಉಕ್ಕು ಉತ್ಪಾದನೆ ಮಾಡುವವರಿಗೆ ಮಾತ್ರ ಅವಕಾಶ ಕೊಡಿ. ಇದರಿಂದ ಪರಿಸರಕ್ಕೆ ಆಗುವ ಹಾನಿಯೂ ತಪ್ಪುತ್ತದೆ. ಮತ್ತು ಆಗ ಎಷ್ಟು ಬೇಕೋ ಅಷ್ಟು ಮಾತ್ರ ಗಣಿಗಾರಿಕೆ ನಡೆಸುತ್ತಾರೆ.

ಕೇಂದ್ರ ಸರ್ಕಾರ ಗಣಿಗಾರಿಕೆಯಿಂದ ಸೂಕ್ತ ಆದಾಯ ಸಂಗ್ರಹ ಮಾಡಬೇಕು. ರಾಜ್ಯ ಸರ್ಕಾರ ಮೌಲ್ಯವರ್ಧಿತ ತೆರಿಗೆ–ವ್ಯಾಟ್ ಸಂಗ್ರಹಿಸಬೇಕು.



ಅದಿರು ಸಾಗಾಣಿಕೆ ಮಾಡಲೇ ಬೇಕಾದರೆ ಕಂಟೈನರ್(ಅದಿರು ಸಂಪೂರ್ಣವಾಗಿ ಮುಚ್ಚಲು ಸಾಧ್ಯವಾಗುವಂತಹ) ವಾಹನದಲ್ಲಿ ಸಾಗಾಣಿಕೆ ಮಾಡಬೇಕು. ಈ ಸಂಬಂಧವಾಗಿ ಮೊದಲು ರಸ್ತೆಗೆ ನೀರು ಹಾಕುವುದು, ಲಾರಿಗೆ ಟಾರ್ಪಾಲಿನ್ ಹೊದೆಸುವುದು ಇತ್ಯಾದಿ ಮಾಡಿದರು. ಆದರೆ ಇದರಿಂದ ಯಾವುದೇ ಪ್ರಯೋಜನವಿಲ್ಲ.

ಜನಶಕ್ತಿ: ಈ ಅಕ್ರಮ ಗಣಿಗಾರಿಕೆ ನಿಯಂತ್ರಣ, ನಿವಾರಣೆಯಲ್ಲಿ ಕೇಂದ್ರ ಸರ್ಕಾರದ ಪಾತ್ರವೇನು ? ಆದಾಯ ತೆರಿಗೆ ಇಲಾಖೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಈ.ಡಿ. ಮುಂತಾದ ಸಂಬಂಧ ಪಟ್ಟ ಕೇಂದ್ರ ಸರ್ಕಾರದ ಸಂಸ್ಥೆಗಳು, ಇಲಾಖೆಗಳು ಆರಂಭದಲ್ಲೇ 2000 ಇಸವಿಯಿಂದಲೇ ಸರಿಯಾದ ಕ್ರಮವಹಿಸಿದ್ದಿದ್ದರೆ ಈ ಅಕ್ರಮಗಳನ್ನು ತಪ್ಪಿಸಬಹುದಿತ್ತಲ್ಲವೇ ?

ನ್ಯಾ.ಸಂ.ಹೆಗಡೆ: ಹೌದು... ಹೌದು... ತಡೆಯಲು ಸಾಧ್ಯವಿತ್ತು.

ಜನಶಕ್ತಿ: ನೀವು ಅಂದು ಕೊಂಡ ಅಂಶಗಳ ಬಗೆಗೆ ತನಿಖೆ ನಡೆಸುವುದು ಸಾಧ್ಯವಾಯಿತೇ ?

ನ್ಯಾ. ಸಂ. ಹೆಗಡೆ: ಕಬ್ಬಿಣದ ಗಣಿಗಾರಿಕೆ ಅಕ್ರಮಗಳಲ್ಲದೇ ಕಲ್ಲು ಗಣಿಗಾರಿಕೆ ಅಕ್ರಮಗಳು, ಮರಳು ಗಣಿಗಾರಿಕೆ ಅಕ್ರಮಗಳು ಇವೆಲ್ಲಾ ಇವೆ. ಆದರೆ ಈ ಬಗೆಗೆ ತನಿಖೆ ಮಾಡಲು ನನಗೆ ಸಮಯ ಇರಲಿಲ್ಲ.

ಜನಶಕ್ತಿ: ಕರ್ನಾಟಕದ ಲೋಕಾಯುಕ್ತರ ಕೆಲಸಕ್ಕೆ ಯಾರು ಸೂಕ್ತ ಅನಿಸುತ್ತೆ ನಿಮಗೆ ? ಕರ್ನಾಟಕದವರೋ ಅಥವಾ ಹೊರಗಿನವರೋ ?

ನ್ಯಾ.ಸಂ.ಹೆಗಡೆ: ಕರ್ನಾಟಕದವರೂ ಹೊರಗೆ ಇದ್ದಾರೆ. ಬಾಂಬೆಯಲ್ಲಿ ಶ್ರೀಕೃಷ್ಣ, ಸೋದಿ ಮುಂತಾದವರು. ಕನ್ನಡ ಗೊತ್ತಿದ್ದವರಾದರೆ ಒಳ್ಳೆಯದು. ಜನ ಕೆಲವರು ತಮ್ಮ ಅಳಲನ್ನು ಹೇಳಿಕೊಳ್ಳುತ್ತಾರೆ. ಅದನ್ನು ಅನುವಾದ ಮಾಡಿದರೆ ಸಮಸ್ಯೆಯ ತೀವ್ರತೆ ಸರಿಯಾಗಿ ಗೊತ್ತಾಗುವುದಿಲ್ಲ.

ಜನಶಕ್ತಿ: ಲೋಕಾಯುಕ್ತಕ್ಕೆ ಹೆಚ್ಚಿನ ಅಧಿಕಾರ ಬೇಕು ಎಂಬ ಬೇಡಿಕೆಯನ್ನು ಈ ಹಿಂದೆಯೆ ಇಟ್ಟಿದ್ದಿರಿ. ತಾವು ಲೋಕಾಯುಕ್ತಕ್ಕೆ ಎಂತಹ ಅಧಿಕಾರವನ್ನು ಕೊಡಬೇಕೆಂದು ಬಯಸುತ್ತೀರಿ. ?

ನ್ಯಾ.ಸಂ.ಹೆಗಡೆ : ರಾಜಕಾರಣಿಗಳ ಮೇಲೆ ಸ್ವಯಂ ಪ್ರೇರಿತ ಕ್ರಮ ಕೈಗೊಳ್ಳುವ ಅಧಿಕಾರ ಬೇಕು. ಲೋಕಾಯುಕ್ತರನ್ನು ಸೆ.36 ರ ಪ್ರಕಾರ ಕ್ರಿಮಿನಲ್ ಪ್ರೊಸೀಜರ್ ಸುಪೀರಿಯರ್ ಪೋಲಿಸ್ ಆಫೀಸರ್ ಎಂದು ಮಾಡಬೇಕು.

(ಅಕ್ಟೋಬರ್ 24, 2011 ರಂದು ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ ಹೆಗಡೆಯವರ ಮನೆಯಲ್ಲಿ ನಡೆದ ಸಂದರ್ಶನ. ಫೋಟೋಗಳು–ಸಿನೋ)



ಬೆಂಗಳೂರಿನಲ್ಲಿ ಯಶಸ್ವಿ ಸಮಾವೇಶ

ಭ್ರಷ್ಟಾಚಾರದ ವಿರುದ್ಧ ನಾಡಿನ ಪ್ರಗತಿಪರ ಸಂಘಟನೆಗಳು, ಎಡಪಕ್ಷಗಳು ಒಂದಾಗಿದ್ದಾರೆ, ವ್ಯಾಪಕ ಆಂದೋಲನದ ತೀರ್ಮಾನದೊಂದಿಗೆ ಮುಂದಾಗಿದ್ದಾರೆ.

'ಖಾಸಗಿ ಕ್ಷೇತ್ರದ ಭ್ರಷ್ಟಾಚಾರದ ವಿರುದ್ಧವೂ ಹೋರಾಟ ನಡೆಯಲಿ'

ನಾಡೋಜ ಬರಗೂರು ರಾಮಚಂದ್ರಪ್ಪ

'ಭ್ರಷ್ಟಾಚಾರ ವಿರುದ್ಧದ ಹೋರಾಟಗಳು ಸರ್ಕಾರಿ ವಲಯಕ್ಕೆ ಮಾತ್ರ ಸೀಮಿತವಾಗಿದ್ದು, ಖಾಸಗಿ ಕ್ಷೇತ್ರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ದವೂ ಹೋರಾಟ ಆರಂಭವಾಗಬೇಕು' ಎಂದು ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಕರೆ ನೀಡಿದರು. ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆಯು ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಭಾನುವಾರ ಭ್ರಷ್ಟಾಚಾರ ವಿರೋಧಿ ಸಮಾಜಕ್ಕಾಗಿ ಮತ್ತು ಅಕ್ರಮ ಗಣಿಗಾರಿಕೆ ಸಂಬಂಧಿಸಿದ ಕರ್ನಾಟಕ ಲೋಕಾಯುಕ್ತ ವರದಿ ಅಂಗೀಕಾರಕ್ಕಾಗಿ ಒತ್ತಾಯಿಸಿ' ಏರ್ಪಡಿಸಿದ ರಾಜ್ಯ ಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು. ಅವರು ನಗಾರಿ ಬಾರಿಸುವ ಮೂಲಕ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

'ದೇಶದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಚಳುವಳಿಗಳೆಲ್ಲಾ ಸರ್ಕಾರದ ಭ್ರಷ್ಟಾಚಾರಗಳನ್ನು ವಿರೋಧಿಸುತ್ತಿವೆ. ಖಾಸಗೀಕರಣವೇ ಭ್ರಷ್ಟಾಚಾರಕ್ಕೆ ಪ್ರಧಾನ ಮೂಲವಾಗಿದ್ದು, ಈ ವಲಯದಲ್ಲಿ ನಡೆಯುವ ಭ್ರಷ್ಟಾಚಾರಗಳನ್ನು ಮೊದಲು ಹತ್ತಿಕ್ಕುವ ಕಾರ್ಯ ಮಾಡಬೇಕಿದೆ' ಎಂದು ಅಭಿಪ್ರಾಯಪಟ್ಟರು.

'ಸಂಪತ್ತಿನ ಕ್ರೋಢೀಕರಣವೇ ಭ್ರಷ್ಟಾಚಾರದ ಮೂಲ. ದೇಶದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸರ್ವಾಧಿಕಾರ ಇದೆ. ಗಾಂಧಿ ಕಂಡ ಬ್ರಿಟೀಷ್ ವಸಾಹತುಶಾಹಿ ದೂರವಾಗಿದೆ. ಆದರೆ, ಆರ್ಥಿಕವಾಗಿ ಪ್ರಬಲವಾಗಿರುವ ಖಾಸಗೀಯವರ ಮುಂದೆ ಸರ್ಕಾರವೇ ಮಂಡಿಯೂರಿ ಕುಳಿತುಕೊಳ್ಳುವ ಸ್ಥಿತಿಯಲ್ಲಿದೆ' ಎಂದು ವಿಷಾದಿಸಿದರು.

'ಅಣ್ಣಾ ನಡೆಸಿದ ಭ್ರಷ್ಟಾಚಾರ ವಿರೋಧಿ ಚಳವಳಿ ಕೇವಲ ಕೇಂದ್ರ ಸರ್ಕಾರ ಹಾಗೂ ಸಚಿವರ ವಿರೋಧಕ್ಕಷ್ಟೇ ಸೀಮಿತವಾಗಿದೆ. ಇದರಿಂದ ದೇಶದ ಎಲ್ಲಾ ಭ್ರಷ್ಟಾಚಾರ ಹೋಗಲಾಡಿಸಬಹುದು ಎಂಬ ಭ್ರಮೆ ಜನರಲ್ಲಿ ಬೇರೂರಿದೆ. ಮಾಧ್ಯಮದ ಪ್ರಚಾರದಿಂದ ಹೋರಾಟಕ್ಕೆ ಹೆಚ್ಚು ಪ್ರತಿಕ್ರಿಯೆ ವ್ಯಕ್ತವಾಯಿತು. ಹಾಗೆಂದ ಮಾತ್ರಕ್ಕೆ ನಾನು ಅಣ್ಣಾ ಹೋರಾಟವನ್ನಾಗಲೀ ಲೋಕಪಾಲ ಮಸೂದೆಯನ್ನಾಗಲೀ ವಿರೋಧಿಸುವುದಿಲ್ಲ. ಆದರೆ ಹೋರಾಟಗಳು ವಾಸ್ತವತೆ ಮೇಲೆ ನಡೆಯಬೇಕು' ಎಂದ ಬರಗೂರರು ಖಾಸಗೀಕರಣದಿಂದ ಶಿಕ್ಷಣ ಹಾಗೂ ವೈದ್ಯಕೀಯ ವಲಯಗಳು ಉದ್ದಿಮೆಗಳಾಗಿ ಮಾರ್ಪಟ್ಟಿವೆ. ಖಾಸಗೀಕರಣ ಇಲ್ಲಿಗೂ ಕಾಲಿಟ್ಟಿದ್ದು ಮುಂದಿನ ದಿನಗಳಲ್ಲಿ ಇಡೀ ದೇಶವೇ ಖಾಸಗೀಕರಣವಾದರೆ ಅಚ್ಚರಿಯಿಲ್ಲ. ಭ್ರಷ್ಟಾಚಾರವನ್ನು ಕಿತ್ತುಹಾಕಲು ಲೋಕಪಾಲ ಮಸೂದೆಯೊಂದೇ ಅಂತಿಮ ಅಸ್ತ್ರವಲ್ಲ' ಎಂದು ಅಭಿಪ್ರಾಯಪಟ್ಟರು.

'ಅನೇಕ ಸಂಸ್ಥೆಗಳಿಗೆ ಕೋಟಿಗಟ್ಟಲೆ ವಿದೇಶಗಳಿಂದ ಹಣ ಹರಿದು ಬರುತ್ತಿದೆ. ಸ್ವಯಂಸೇವಾ ಸಂಘಟನೆಗಳು ನಡೆಸುವ ಹೋರಾಟವನ್ನು ಹತ್ತಿಕ್ಕಲು ಈ ವಿದೇಶಿ ಹಣ ನೆರವಾಗುತ್ತಿದೆ. ದೇಶದಲ್ಲಿ ನಡೆಯುವ ರೂಪಾಯಿ ಭ್ರಷ್ಟಾಚಾರದ ವಿರುದ್ಧವಲ್ಲದೆ ಡಾಲರ್ ಮತ್ತು ಪೌಂಡ್ ಭ್ರಷ್ಟಾಚಾರದ ವಿರೂದ್ಧವೂ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂದರು. ಭ್ರಷ್ಟಾಚಾರದ ವಿರುದ್ಧವಾಗಿ ಹಲವು ರೀತಿಯ ಹೋರಾಟಗಳು ನಡೆಯುತ್ತಿವೆ. ಗಣಿ ಹಗರಣದ ಕುರಿತ ಲೋಕಾಯುಕ್ತ ವರದಿ ನಮ್ಮ ಮುಂದಿದೆ. ಒಂದೆಡೆ ಕುಮಾರ ಸ್ವಾಮಿ ಮಾದರಿ ಇದೆ. ಸಿರಾಜುದ್ದಿನ್ ಪಾಶಾ, ಡಾ.ಹಿರೇಮಠ್ ಮಾದರಿಯೂ ಇದೆ. ಇದನ್ನು ಹೊರತುಪಡಿಸಿ ಅಣ್ಣಾ ಹಜಾರೆಯವರ ಹೋರಾಟ ಹೆಚ್ಚು ಪ್ರಭಾವಿಯಾಗಿ

ನಡೆಯಿತು. ಇದಕ್ಕೆ ಕಾರಣವೇನು? ಮತ್ತು ಯಾರ ಪ್ರಭಾವ ಇದರಲ್ಲಿ ಅಡಗಿದೆ ಎಂದು ಕಂಡುಕೊಳ್ಳಬೇಕಾಗಿದೆ. ಜನರು ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂದು ಕೈಜೋಡಿಸಿದರೇ ಹೊರತು ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿರಲಿಲ್ಲ. ಜನಲೋಕಪಾಲ ಎಂದರೇನು ಎನ್ನುವುದು ತಿಳಿಯದೇ ಹೋರಾಟಕ್ಕೆ ಕೈಜೋಡಿಸಿದರು. ಬಲಿಷ್ಟವಾದ ಲೋಕಪಾಲ್ ಮಸೂದೆಯನ್ನು ಪಾರ್ಲಿಮೆಂಟ್ ಒಳಗೊಳ್ಳಬೇಕಾದದ್ದೆ. ಅರುಣರಾಯ್ ಮತ್ತು ....ಟೀಕೆಗಳನ್ನು ನಾವ್ಯಾರು ನಿರಾಕರಿಸಬೇಕಿಲ್ಲ. 'ಆತ್ಮರತಿ ಮತ್ತು ಅಹಂಕಾರ' ಯಾವುದೇ ಹೋರಾಟಕ್ಕೆ ಇರಬಾರದು . ಹಜಾರೆಯವರ ಹೋರಾಟವನ್ನು ಭ್ರಷ್ಟಾಚಾರ ವಿರೋಧಿ ಹೋರಾಟ ಎಂದರೆ ತಪ್ಪಿಲ್ಲ, ಅದನ್ನು ಎರಡನೇ ಸ್ವಾತಂತ್ರ್ಯ ಹೋರಾಟ ಎನ್ನುವುದು ತಪ್ಪು. ಇಂದು ರಾಜಕೀಯ ಧುರೀಣರು ತಮ್ಮ ಎಲ್ಲಾ ಸರ್ಕಾರಿ ಆಡಳಿತವನ್ನು ಖಾಸಗಿಯವರಿಗೆ ಒಪ್ಪಿಸಿಕೊಂಡು ಆರ್ಥಿಕ ಶಕ್ತಿಗಳ ಮುಂದೆ ಮಂಡಿಯೂರಿ ಕುಳಿತಿದ್ದಾರೆ. ಪ್ರಬಲವಾದ ಲೋಕಪಾಲ್ ಜಾರಿ ಹಾಗೂ ಭ್ರಷ್ಟಾಚಾರ ನಿರ್ಮೂಲನೆ ಎಡಪಂಥೀಯ ಮತ್ತು ಪ್ರಗತಿಪರರಿಂದ ಮಾತ್ರ ಸಾಧ್ಯ ಹೊರತು ಬೇರ್ಯಾವ ರಾಜಕೀಯ ಹಿತಾಸಕ್ತಿಗಳಿಗೆ ಸಾಧ್ಯವಿಲ್ಲ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ್ ಮಾತನಾಡಿ, 'ಲೋಕಾಯುಕ್ತ ವರದಿಯಲ್ಲಿ ಹೆಸರಿರುವರ ವಿರುದ್ಧ ಕೂಡಲೇ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಸರ್ಕಾರವನ್ನು ಒತ್ತಾಯಿಸಿದರು. ಕರ್ನಾಟಕದ ಕ್ಯಾಬಿನೆಟ್ 1000 ಕೋಟಿ ಭೂಮಿಯನ್ನು ನುಂಗಿದರೆ ಅದರಲ್ಲಿ ಕರ್ನಾಟಕದ 10,0000 ಕೋಟಿ ಆಸ್ತಿ ನಷ್ಟ ಆದ ಹಾಗೆ. ರಾಜ್ಯದಲ್ಲಿ ಇಂದು ಬಡವರು ಬಿಪಿಎಲ್ ಕಾರ್ಡ್ ಮಾಡಿಸಬೇಕಾದರೆ ಲಂಚಕೊಡುವ ಪರಿಸ್ಥಿತಿ ಎದುರಾಗಿದೆ ಎಂದರು.

ಮಹಾ ತ್ಯಾಗಿ ಎನ್ನಲಾಗುವ ಸೋನಿಯಾ ಗಾಂಧಿ, ಹಾಗೂ ಮಹಾ ಪ್ರಮಾಣಿಕ ಎನ್ನಲಾಗುವ ಮನಮೋಹನ ಸಿಂಗ್‌ರವರ ಆಡಳಿತದಲ್ಲಿ ವಿರಾಟ್ ಸ್ವರೂಪದ ಭ್ರಷ್ಟಾಚಾರ ನಡೆಯುತ್ತಿದೆ ಎಂದ ಸಿಪಿಐ(ಎಂ) ರಾಜ್ಯ ಮುಖಂಡರಾದ ಜಿ.ಎನ್. ನಾಗರಾಜ್ ಇಡೀ ದೇಶದ ಜುಟ್ಟನ್ನು ಲೋಕಪಾಲಕ್ಕೆ ಒಪ್ಪಿಸುವಂತಹ ಮಸೂದೆ ನಮಗೆ ಒಪ್ಪಿಗೆ ಇಲ್ಲ. ನ್ಯಾಯಾಂಗದ ಮೇಲೆ ಲೋಕಪಾಲದ ಹಿಡಿತ ಬಂದಲ್ಲಿ ಅಧಿಕಾರಸ್ಥರು ಲೋಕಪಾಲರ ಈ ಅಧಿಕಾರವನ್ನು ಬಳಸಿ ನ್ಯಾಯಾಧೀಶರನ್ನು ಬೆದರಿಸುವ ಮೂಲಕ ನ್ಯಾಯಾಂಗವನ್ನು ಬಳಸಿಕೊಂಡು ನ್ಯಾಯಾಂಗದ ಸ್ವತಂತ್ರ ಕಾರ್ಯ ನಿರ್ವಹಣೆಗೆ ಧಕ್ಕೆ ತರುವ ಸಂಭವ ಇದೆ. ಆದ್ದರಿಂದ ನ್ಯಾಯಾಂಗಕ್ಕಾಗಿ ಬೇರೆಯದೇ ವ್ಯವಸ್ಥೆ ಬೇಕು. ಇದಲ್ಲದೇ ಕಾರ್ಯಾಂಗದ ಉನ್ನತಾಧಿಕಾರಿಗಳ ಹಂತದಲ್ಲಿನ ಭ್ರಷ್ಟಾಚಾರ ನಿಯಂತ್ರಣಕ್ಕೆ ಲೋಕಪಾಲಕ್ಕೆ ಅಧಿಕಾರವನ್ನು ಸೀಮಿತಗೊಳಿಸಬೇಕು. ಕೆಳಹಂತದ ಭ್ರಷ್ಟಾಚಾರ ನಿಯಂತ್ರಣಕ್ಕೆ ಬೇಕಾದಂತಹ ಕುಂದು ಕೊರತೆಗಳ ಆಯೋಗವನ್ನು ಪ್ರತ್ಯೇಕವಾಗಿ ರೂಪಿಸಬೇಕು ಎಂದರು.


ಇತ್ತೀಚಿನ ಬೃಹತ್ ಹಗರಣಗಳ ಕುರಿತು ದೇಶದ ಸಿಎಜಿಯು ವರದಿ ನೀಡಿದಾಗ ಅದರಲ್ಲಿ ಬೃಹತ್ ಬಂಡವಾಳಗಾರರ ರಿಲಯನ್ಸ್, ಟಾಟಾ ಮುಂತಾದ ದೊಡ್ಡ ದೊಡ್ಡ ಕಂಪನಿಗಳ ಬೃಹತ್ ವಂಚನೆ ಭ್ರಷ್ಟಾಚಾರ ಹೊರಬೀಳಲಾರಂಭಿಸಿತು. ಬೃಹತ್ ಕಂಪನಿಗಳ ಭ್ರಷ್ಟಾಚಾರಕ್ಕೆ ಪೂರಕವಾಗಿ ಖಾತೆಗಳಿಗೆ ಸಚಿವರು ಯಾರಾಗಬೇಕೆಂದು ಲಾಬಿ ನಡೆಸುವ ನೀರಾ ರಾಡಿಯಾಗಳಂತಹ ಮಾಧ್ಯಮದ ವ್ಯಕ್ತಿಗಳ ಪಾತ್ರವೂ ಬಯಲಾಗ ತೊಡಗಿತು. ಈ ಬೆಳವಣಿಗೆಯಿಂದ ಗಾಬರಿಗೊಂಡ ಬೃಹತ್ ಬಂಡವಾಳಗಾರರು, ತಮ್ಮ ಜಾಹಿರಾತುಗಳ ಮೇಲೆ ಅವಲಂಬಿಸಿರುವ ಬಂಡವಾಳಶಾಹಿ ಮಾಧ್ಯಮಗಳ ಮೂಲಕ ಜನರ ಗಮನವನ್ನು ಈ ಪ್ರಶ್ನೆಗಳಿಂದ ಬೇರೆಡೆ ಸೆಳೆಯಲು ಕೇವಲ ಅಣ್ಣಾ ಹಜಾರೆಯವರ ನೇತೃತ್ವದ ಚಳುವಳಿಯ ಬಗೆಗೆ ಮಾತ್ರವೇ ರಾತ್ರಿ ಹಗಲು ತತ್ತೂರಿ ಊದುತ್ತಿವೆ ಎಂದರು.

ಚಿಂತಕ ಜಿ.ಕೆ. ಗೋವಿಂದರಾವ್ ಮಾತನಾಡಿ 'ರಾಜ್ಯ ಹಾಗೂ ದೇಶದಲ್ಲಿ ಆರ್ಥಿಕ ಭ್ರಷ್ಟಾಚಾರ ವಿರುದ್ಧ ಹೋರಾಟ ನಡೆಯುತ್ತಿದೆ. ಸಾಮಾಜಿಕ ಅಸಮಾನತೆಯ ವಿರುದ್ಧವೂ ಹೋರಾಟ ನಡೆಯಬೇಕು. ಈ ಬಗ್ಗೆ ವಿದ್ಯಾರ್ಥಿಗಳು ಹಾಗೂ ಯುವಕರಲ್ಲಿ ಅರಿವು ಮೂಡಿಸಲು ಕ್ರಿಯಾಶೀಲ ಚಿಂತನೆ ನಡೆಯಬೇಕಿದೆ' ಎಂದರು. ಹಣ, ಅಧಿಕಾರ, ಭೂಮಿ ಕಣ್ಣಿಗೆ ಗೋಚರವಾದ ಲೆಕ್ಕವಿಡಬಹುದಾದ ಭ್ರಷ್ಟತನ. ಆದರೆ ಜಾತಿವಾದ, ಕೋಮುವಾದಗಳು ಕಣ್ಣಿಗೆ ಕಾಣದ ಮಾನಸಿಕ ಭ್ರಷ್ಟತೆ. ಮತ್ತು ಅವು ತುಂಬಾ ಅಪಾಯಕಾರಿ ಎಂದರು.

ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಮಾತನಾಡಿ, 'ಬಂಡಾಯ ಸಾಹಿತ್ಯಕ್ಕೆ 70–80ರ ದಶಕದಲ್ಲಿದ್ದ ಶಕ್ತಿ ಈಗ ಇಲ್ಲವಾಗಿದೆ. ಪರಸ್ಪರ ವೈಯಕ್ತಿಕ ಕಾರಣಗಳಿಂದ ಎಲ್ಲರೂ ದೂರವಾಗಿದ್ದೇವೆ. ಭ್ರಷ್ಟಾಚಾರ ವಿರುದ್ಧ ಪ್ರಗತಿಪರರಾದ ನಾವು ಮತ್ತೆ ಒಂದಾಗಿ ಹೋರಾಡೋಣ. ಈ ಮೂಲಕ ಬಂಡಾಯ

ಪುಟ 36 ಕ್ಕೆ





'ಅಂಡರ್ ರಿಕವರಿ' ಎಂಬ ಪರಿಕಲ್ಪನೆಯ ಆಧಾರದಲ್ಲಿ ಜನಸಾಮಾನ್ಯರ ಮೇಲೆ ಮತ್ತೆ-ಮತ್ತೆ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಗಳ ಹೊಸ-ಹೊಸ ಹೊರೆಗಳನ್ನು ಹೇರುತ್ತಿರುವ ಸರಕಾರ ಇದೇ ಪರಿಕಲ್ಪನೆಯನ್ನು 2ಜಿ ಹಗರಣದ ಸಂದರ್ಭದಲ್ಲಿ ಅನ್ವಯಿಸಲು ಸಿದ್ಧವಿಲ್ಲ, ಬದಲಿಗೆ ಅದನ್ನು ಅನ್ವಯಿಸಿದ ಸಿಎಜಿ ತನ್ನ ಹದ್ದು ಮೀರಿ ಸರಕಾರದ ಧೋರಣೆಯನ್ನು ಪ್ರಶ್ನಿಸುತ್ತಿದೆ ಎಂದು ಹರಿಹಾಯುತ್ತಿದೆ, ಈ ಮೂಲಕ ಬಮಡವಾಳಶಾಹಿ ವ್ಯವಸ್ಥೆಯಲ್ಲಿ 'ನಿನ್ನೆಯ ಹಗರಣ ಇಂದಿನ ಅಧಿಕೃತ ಧೋರಣೆ' ಯಾಗುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ.

2ಜಿ ಹಗರಣ ಮತ್ತು ಪೆಟ್ರೋಲ್ ದರ ಏರಿಕೆ

ವೇದರಾಜ ಎನ್.ಕೆ.
ಅಂಕಣಕಾರರು, ಜನಶಕ್ತಿ

ಈ ವರ್ಷದಲ್ಲಿ ನಾಲ್ಕನೇ ಬಾರಿ ಪೆಟ್ರೋಲ್ ದರ ಏರಿಕೆ ಪ್ರಕಟಿಸುತ್ತ ಅದನ್ನು ಸಮರ್ಥಿಸಿಕೊಳ್ಳಲು ಮತ್ತೆ ಅದೇ ಹಳಸಲು ವಾದವನ್ನು ಒಡ್ಡಲಾಗಿದೆ- ತೈಲ ಮಾರಾಟ ಮಾಡುವ ಕಂಪನಿಗಳ ಮೇಲೆ 'ಅಂಡರ್ ರಿಕವರಿ' ಅಂದರೆ 'ಕಡಿಮೆ ವಸೂಲಾತಿ'ಯ 'ಹೊರೆ'!


ಏನಿದು ಕಡಿಮೆ 'ಅಂಡರ್ ರಿಕವರಿ' ಅಥವ 'ಕಡಿಮೆ ವಸೂಲಾತಿ'?

ಇದು ತೈಲ ಮಾರಾಟ ಕಂಪನಿಗಳಿಗಾಗುತ್ತಿರುವ ನಷ್ಟ ಎಂಬಂತೆ ಚಿತ್ರಿಸಲಾಗುತ್ತಿದೆ. ಆದರೆ ಆಧಿಕೃತ ನಿರೂಪಣೆಯ ಪ್ರಕಾರವೇ ಇದು ಆ ಕಂಪನಿಗಳಿಗಾಗುವ ವಾಸ್ತವಿಕ ನಷ್ಟವಲ್ಲ. ಬದಲಾಗಿ 'ಅಪೇಕ್ಷಿತ ಬೆಲೆ' ಮತ್ತು 'ನಿಜವಾದ ಮಾರಾಟ ಬೆಲೆ'ಯಲ್ಲಿನ ವ್ಯತ್ಯಾಸ, ಅಂದರೆ ಒಂದು ಕಾಲ್ಪನಿಕ ನಷ್ಟ.

ಈ 'ಅಪೇಕ್ಷಿತ' ಬೆಲೆ ಎಂದರ ತೈಲ ಮಾರಾಟ ಕಂಪನಿಗಳು (ಮುಖ್ಯವಾಗಿ ಖಾಸಗಿ ಕಂಪನಿಗಳು) ಅಪೇಕ್ಷಿಸುವ ಬೆಲೆ. ಇದರಲ್ಲಿ ಈ ಕೆಳಗಿನ ಅಂಶಗಳು ಸೇರಿರುತ್ತವೆ:

ಅರಬ್ ಕೊಲ್ಲಿ ಮಾರುಕಟ್ಟೆಯಲ್ಲಿನ ಬೆಲೆ
ಸಾಗರ ಸಾಗಾಣಿಕೆ ಖರ್ಚು
ವಿಮೆ, ಸಾಗರದಲ್ಲಿ ಆಗುವ ತೈಲನಷ್ಟ ಮತ್ತು ಬಂದರುಗಳ ಸುಂಕ
ಸೀಮಾಸುಂಕ(ಕಸ್ಟಮ್ಸ್ ಡ್ಯೂಟಿ)
ತೈಲ ಶುದ್ಧೀಕರಣ ಸ್ಥಾವರಗಳ ವರ್ಗಾವಣೆ ಬೆಲೆ
ಆಂತರಿಕ ಸಾಗಾಣಿಕೆ ಮತ್ತು ಪೂರೈಕೆ ಖರ್ಚು
ಲಾಭವೂ ಸೇರಿದಂತೆ ಮಾರುಕಟ್ಟೆ ಖರ್ಚುಗಳು.

ಹೀಗೆ ಅಪೇಕ್ಷಿತ ಬೆಲೆ ಶುದ್ಧೀಕರಣಗೊಂಡ ಪೆಟ್ರೋಲಿನ ವಾಸ್ತವಿಕ ಖರ್ಚುಗಳನ್ನು ಅವಲಂಬಿಸಿರುವುದಿಲ್ಲ, ಬದಲಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆ ಬೆಲೆಗಳನ್ನು ಅವಲಂಬಿಸಿರುತ್ತದೆ. ಭಾರತದಲ್ಲಿ ತೈಲ ಶುದ್ಧೀಕರಣ ಸಾಮರ್ಥ್ಯ ಸಾಕಷ್ಟಿದ್ದು, 2-



3ಶೇ.ದಷ್ಟೇ ಶುದ್ಧೀಕರಣಗೊಂಡ ಪೆಟ್ರೋಲ್ ಆಮದಾಗುವುದು ಎಂಬುದನ್ನು ಈ ಅಪೇಕ್ಷಿತ ಬೆಲೆ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ.

ಭಾರತ ಸ್ವತಂತ್ರಗೊಂಡ ಆರಂಭದ ವರ್ಷಗಳಲ್ಲಿ ತೈಲ ಮಾರಾಟವನ್ನು ರಾಷ್ಟ್ರೀಕರಿಸುವ ಮೊದಲು ಇದ್ದ ವಿದೇಶಿ ತೈಲ ಕಂಪನಿಗಳು 'ಆಮದಿಗೆ ಸಮನಾದ ಬೆಲೆ ವ್ಯವಸ್ಥೆ'ಯೆಂಬುದನ್ನು ಅನುಸರಿಸುತ್ತಿದ್ದವು. ಅಂದರೆ ಭಾರತದಲ್ಲಿ ತೈಲ ಶುದ್ಧೀಕರಣಕ್ಕೆ ತಗಲುವ ವೆಚ್ಚ ಎಷ್ಟೇ ಕಡಿಮೆಯಿದ್ದರೂ ಅಂತರ್‍ರಾಷ್ಟ್ರೀಯ ಬೆಲೆಗಳಿಗೆ ಇತರ ಖರ್ಚುಗಳು ಮತ್ತು ಲಾಭಾಂಶವನ್ನು ಸೇರಿಸಿ ಇಲ್ಲಿ ರೂಪಾಯಿಗಳಲ್ಲಿ ವಸೂಲು ಮಾಡಲಾಗುತ್ತಿತ್ತು.

1976ರಲ್ಲಿ ಇದನ್ನು ನಿಲ್ಲಿಸಿ ಕಚ್ಚಾತೈಲದ ಆಮದಿಗೆ ಮತ್ತು ಭಾರದಲ್ಲಿ ಅದರ ಶುದ್ಧೀಕರಣಕ್ಕೆ ತಗಲುವ ನಿಜವಾದ ಖರ್ಚಿನ ಮೇಲೆ ಬೆಲೆ ನಿಗದಿ ಮಾಡುವುದನ್ನು ಆರಂಭಿಸಲಾಯಿತು. ಆದರೆ 90ರ ದಶಕದಲ್ಲಿ ನವ-ಉದಾರೀಕರಣ ನೀತಿಗಳ ಅಡಿಯಲ್ಲಿ ಈ ವಿಧಾನವನ್ನು ಕೈಬಿಟ್ಟು ಮತ್ತೆ ಈ ಹಿಂದೆ ವಿದೇಶಿ ಕಂಪನಿಗಳು ಅನುಸರಿಸುತ್ತಿದ್ದ ವಿಧಾನವನ್ನೆ ಪೆಟ್ರೋಲ್ ಬೆಲೆ ನಿರ್ಧಾರದಲ್ಲಿ ಅನುಸರಿಸುವ ದಾರಿಯಲ್ಲಿ ಕೇಂದ್ರದಲ್ಲಿನ ಸರಕಾರಗಳು ಪ್ರಯತ್ನಿಸುತ್ತಿವೆ. ಪೆಟ್ರೋಲಿನ ಬೆಲೆ ನಿಯಂತ್ರಣವನ್ನು ತೆಗೆಯುವ ಮೂಲಕ ಅದು ಸಾಕಷ್ಟು 'ಪ್ರಗತಿ' ಕಂಡಿದೆ, ಸೀಮೆ ಎಣ್ಣೆ ಸೇರಿದಂತೆ ಉಳಿದ ಎಲ್ಲ ತೈಲ ಉತ್ಪನ್ನಗಳಿಗೂ ಅದನ್ನು ವಿಸ್ತರಿಸಲಾಗುವುದು ಎಂದು ಪ್ರಧಾನ ಮಂತ್ರಿಗಳು ಪದೇ-ಪದೇ ಹೆದರಿಸುತ್ತಿದ್ದಾರೆ. ಈಗ ಮತ್ತೆ ಹೆದರಿಸಿದ್ದಾರೆ.

ಈಗ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಬ್ಯಾರಲ್ಲಿಗೆ (ಅಂದರೆ 160 ಲೀಟರಿಗೆ) 5280 ರೂ. ಅಂದರೆ ಲೀಟರಿಗೆ 32ರೂ. ಅದನ್ನು ಶುದ್ಧೀಕರಿಸಲು ತಗಲುವ ವೆಚ್ಚ ಮತ್ತು ಸಾಕಷ್ಟು ಲಾಭಾಂಶವನ್ನಿಟ್ಟುಕೊಂಡರೂ ಪೆಟ್ರೋಲಿನ ಮಾರಾಟ ಬೆಲೆ ಹೆಚ್ಚೆಂದರೆ 41ರೂ.ಗಳಷ್ಟಿರಬೇಕು. ಆದರೆ ಅದರ ನಿಜವಾದ ಮಾರಾಟ ಬೆಲೆ ದಿಲ್ಲಿಯಲ್ಲಿ 70ರೂ., ಬೆಂಗಳೂರಿನಲ್ಲಿ 76ರೂ. ಆದರೂ ಸರಕಾರ ನಷ್ಟವಾಗುತ್ತಿದೆ ಎಂದು ಬೊಬ್ಬಿಡುತ್ತಿದೆ.

ಸರಕಾರದ ಪ್ರಕಾರ 2010-11ರಲ್ಲಿ ಈ 'ಅಂಡರ್ ರಿಕವರಿ' 78,000 ಕೋಟಿ ರೂ. ಈ ವರ್ಷ (2011-12) ಇದು 1.32ಲಕ್ಷ ಕೋಟಿ ರೂ.ಆಗುತ್ತದೆ ಎಂದು ಹೆದರಿಸಲಾಗುತ್ತಿದೆ- ಅದನ್ನು 'ವಸೂಲಿ'ಮಾಡಲೆಂದೇ ಮತ್ತೆ-ಮತ್ತೆ ಈ ಬೆಲೆಯೇರಿಕೆಗಳು! ಆದರೆ ಈ 'ಅಂಡರ್ ರಿಕವರಿ' ಅಥವ 'ಕಡಿಮೆ ವಸೂಲಾತಿ' ಎಂಬುದು ವಾಸ್ತವ ನಷ್ಟ ಅಲ್ಲ ಎಂಬುದನ್ನು ಭಾರತದ ಸಾರ್ವಜನಿಕ ವಲಯದ ಮೂರು ಕಂಪನಿಗಳ ಹಣಕಾಸು ಫಲಿತಾಂಶಗಳೇ ತೋರಿಸುತ್ತವೆ. ಮಾರ್ಚ್ 31,2010ರಲ್ಲಿ ಇವುಗಳ ಘೋಷಿತ ನಿವ್ವಳ ಲಾಭ ರೂ.10,998 ಕೋಟಿ. ಏಕೆ ಇಂತಹ ವಂಚನೆ?



2ಜಿಯಲ್ಲಿ ಈ ತರ್ಕ ಏಕಿಲ್ಲ?

ಯುಪಿಎ ಸರಕಾರ ಮತ್ತು ಅದರ ಅರ್ಥಶಾಸ್ತ್ರಜ್ಞ ಪ್ರಧಾನ ಮಂತ್ರಿಗಳು 'ಆಮ್ ಆದ್ಮಿ'ಗೆ ಮಾಡುವ ವಂಚನೆ ಇಷ್ಟೇ ಅಲ್ಲ. ಇದರೊಂದಿಗೆ ಶ್ರೀಮಂತ ವರ್ಗಗಳಿಗೆ ಕಳೆದ ಮೂರು ವರ್ಷಗಳಲ್ಲಿ ಕೊಟ್ಟಿರುವ 14,28,028 ಕೋಟಿ ರೂ.ಗಳ ತೆರಿಗೆ ರಿಯಾಯಿತ್ತಿಗಳು ಒತ್ತಟ್ಟಿಗಿರಲಿ, ಪೆಟ್ರೋಲ್ ವಿಷಯದಲ್ಲಿ ಹೇಳುವ ಅಪೇಕ್ಷಿತ ಬೆಲೆಯ, ಕಡಿಮೆ ವಸೂಲಾತಿಯ ತರ್ಕವನ್ನು ಅವರು ತರಂಗಾಂತರ ಹಂಚಿಕೆಯ ವಿಷಯದಲ್ಲಿ ಅನ್ವಯಿಸಲು ಏಕೆ ತಯಾರಿಲ್ಲ?

ಭಾರತದ ಮಹಾಲೆಕ್ಕ ಪರಿಶೋಧಕರ ಕಚೇರಿ (ಸಿಎಜಿ) 2ಜಿ ತರಂಗಾಂತರ ಹಂಚಿಕೆಯಲ್ಲಿ ಸರಕಾರದ ಬೊಕ್ಕಸಕ್ಕಾಗಿರುವ ನಷ್ಟ 1.76 ಲಕ್ಷ ಕೋಟಿ ರೂ.ಎಂದಾಗ, ಅದು ಬರೀ 'ಕಾಲ್ಪನಿಕ', ಸರಕಾರ ವಾಸ್ತವವಾಗಿ ಏನನ್ನೂ ಕಳೆದುಕೊಂಡಿಲ್ಲ ಎಂದು ಯುಪಿಎ-2 ಸರಕಾರದ ಮಂತ್ರಿಗಳು ಕೂಗಾಡಿದರು; 'ಶುದ್ಧಹಸ್ತ' ಪ್ರಧಾನಮಂತ್ರಿಗಳು ಕೂಡ ಸಿಎಜಿ ತನ್ನ ತನ್ನ ಮೇರೆ ಮೀರುತ್ತಿದೆ, ಸರಕಾರದ ಧೋರಣೆಯನ್ನು ಪ್ರಶ್ನಿಸುತ್ತಿದೆ ಎಂದು ಅಳಲು ತೋಡಿಕೊಂಡರು.

ಏಕೆ ಇಂತಹ ಇಬ್ಬಂದಿ ಧೋರಣೆ ಎಂದು ಹಿಂದೆ ಸಿಪಿಐ(ಎಂ) ರಾಜ್ಯ ಸಭಾ ಸದಸ್ಯರಾಗಿದ್ದ, ಸಂಸತ್ತಿನ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸ್ಥಾಯೀ ಸಮಿತಿಯ ಅಧ್ಯಕ್ಷರೂ ಆಗಿದ್ದ, ಸಿಐಟಿಯು ಜೊತೆ ಕಾರ್ಯದರ್ಶಿ ದೀಪಂಕರ್ ಮುಖರ್ಜಿ ಪ್ರಧಾನ ಮಂತ್ರಿಗಳನ್ನು ಪ್ರಶ್ನಿಸಿದ್ದಾರೆ.

"ಕಡಿಮೆ ವಸೂಲಾತಿಗಳ ವಸೂಲಿಗೆ ಎರಡು ಭಿನ್ನ ಅಳತೆಗೋಲುಗಳನ್ನು ಬಳಸಲಾಗುತ್ತಿದೆ ಎಂಬುದು ಸ್ಪಷ್ಟ, ಇದು ಆಘಾತಕಾರಿ. ಕಡಿಮೆ ವಸೂಲಾತಿಯಿಂದ ನಷ್ಟವಾಗುತ್ತಿದೆ ಎಂಬ ತೈಲ ಮಾರುಕಟ್ಟೆ ಕಂಪನಿಗಳ ಲೆಕ್ಕಾಚಾರವನ್ನು 'ಪರಮ ಪವಿತ್ರ' ಎಂದು ಪರಿಗಣಿಸಿ ಅದನ್ನು 'ಆಮ್ ಆದ್ಮಿ'ಯಿಂದ ವಸೂಲಿ ಮಾಡಲಾಗುತ್ತಿದೆ. ಆದರೆ ಇನ್ನೊಂದೆಡೆ, 2ಜಿ ತರಂಗಾಂತರ ಹಂಚಿಕೆಯಲ್ಲಿ ಕಡಿಮೆ ವಸೂಲಾತಿ ಆಗಿದೆ ಎಂಬುದು ಕೇವಲ ಕಾಲ್ಪನಿಕ, ಅದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೀಗಳೆಯುತ್ತಾ ಹುಯಿಲೆಬ್ಬಿಸಲಾಗುತ್ತಿದೆ. ಆದ್ದರಿಂದ ತರಂಗಾಂತರ ಮಾರಾಟದಲ್ಲಿ ಅಪೇಕ್ಷಿತ ಬೆಲೆಗಳಿಗೆ ಹೋಲಿಸಿದಾಗ ಆಗಿರುವ ಕಡಿಮೆ ವಸೂಲಾತಿಯನ್ನು, 'ಆಮ್ ಆದ್ಮಿ'ಯಿಂದ ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ವಸೂಲಿ ಮಾಡುವಂತೆ, ತಕ್ಷಣವೇ ಕಾರ್ಪೊರೇಟ್‌ಗಳಿಂದ ಮಾಡಬೇಕು ಎಂದು ನಾನು ನಿಮ್ಮನ್ನು ಆಗ್ರಹಿಸುತ್ತೇನೆ. ನಿಜವಾದ ನಷ್ಟವೇ ನಿರ್ಧಾರಕ ಅಂಶ ಎಂದು ಹೇಳುವುದಾದರೆ, ಸಿಎಜಿ ತೈಲ ಮಾರಾಟ ಕಂಪನಿಗಳ ನಿಜವಾದ ನಷ್ಟವನ್ನು ಲೆಕ್ಕ ಹಾಕಿ ಪ್ರಮಾಣೀಕರಿಸುವ ವರೆಗೆ, ಇದುವರೆಗೆ ಮಾಡಿರುವ ಬೆಲೆಏರಿಕೆಗಳನ್ನು



ಹಿಂತೆಗೆದುಕೊಳ್ಳಬೇಕು ಎಂದು ವಿನಂತಿಸಿಕೊಳ್ಳುತ್ತೇನೆ" ಎಂದು ಕಾಂ. ದೀಪಂಕರ್ ಮುಖರ್ಜಿ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಕೇಳಿದ್ದಾರೆ.

ಹಗರಣವೂ, ಧೋರಣೆಯೂ

'ಕಡಿಮೆ ವಸೂಲಿ' ಎಂಬುದು ಕಾಲ್ಪನಿಕ, ಆದರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಮಾರಾಟ ಮಾಡುವ ಕಂಪನಿಗಳು ಲಾಭದಲ್ಲಿವೆ ಎಂಬುದು ವಾಸ್ತವ, ಅವರ ಕಾಲ್ಪನಿಕ 'ಹೊರೆ'ಯನ್ನು ಇಳಿಸಲು ಜನಸಾಮಾನ್ಯರ ಮೇಲೆ ಹೊರೆಗಳನ್ನು ಹೆಚ್ಚಿಸಲಾಗುತ್ತಿದೆ ಎಂಬುದಂತೂ ಕಟು ವಾಸ್ತವ. ಅತ್ತ 2ಜಿ ತರಂಗಾಂತರವನ್ನು ಪಡೆದ ಕಾರ್ಪೊರೇಟ್‌ಗಳು ತಮ್ಮ ಶೇರುಗಳನ್ನು ವಿದೇಶಿ ಕಂಪನಿಗಳಿಗೆ ಮಾರಿಕೊಂಡು ನಿಜವಾಗಿಯೂ ಅಪಾರ ಲಾಭ ಮಾಡಿಕೊಂಡಿವೆ ಎಂಬುದು ಕೂಡ ಅಷ್ಟೇ ವಾಸ್ತವ.

'ನಿನ್ನೆಯ ಹಗರಣ ಇಂದು ಅಧಿಕೃತ ನೀತಿ' ಎಂಬುದು ಎಲ್ಲ ಬಂಡವಾಳಶಾಹಿ-ಪರ ಪ್ರಭುತ್ವಗಳ ತತ್ವ ಎಂಬುದನ್ನು

ಬಹಳಷ್ಟು ಸಂಭ್ರಮದ ನಡುವೆ ಮಂಡಿಸಿರುವ ಹೊಸ ದೂರಸಂಪರ್ಕ ನೀತಿ 2011(ಎನ್‌ಟಿಪಿ-2011) ಮತ್ತೊಮ್ಮೆ ಸಾಬೀತು ಮಾಡಿದೆ, ಹಿಂದಿನ ಎನ್‌ಟಿಪಿ 1994 ಮತ್ತು ಎನ್‌ಟಿಪಿ 1999ಯಂತೆಯೇ, ಹೊಸ ಹಗರಣಗಳನ್ನು ಸೃಷ್ಟಿಸುವುದು ಮತ್ತು ಹಳೆಯ ಹಗರಣಗಳನ್ನು ಸಮರ್ಥಿಸಿಕೊಳ್ಳುವುದು ಹೇಗೆ ಎಂಬುದೇ ಅದರ ಗುರಿ ಎನ್ನುತ್ತಾರೆ ದೂರ ಸಂಪರ್ಕ ವಲಯದ ವಿಶ್ಲೇಷಕ ಡಾ. ಪ್ರಬೀರ್ ಪುರಕಾಯಸ್ಥ. ಸಿಎಜಿ ತನ್ನ ಸೀಮಾರೇಖೆಯನ್ನು ಮೀರುತ್ತಿದೆ ಎಂದು ದೂಷಿಸುವ ಮೂಲಕ ದೇಶದ ಪ್ರಧಾನ ಮಂತ್ರಿಗಳೂ ಇದನ್ನು ದೃಢಪಡಿಸಿದ್ದಾರೆ. ಆದ್ದರಿಂದ ಅಂತವರು ದೀಪಂಕರ್ ಮುಖರ್ಜಿಯವರ ತರ್ಕಬದ್ಧ ಆಗ್ರಹಕ್ಕೆ ಸ್ಪಂದಿಸುತ್ತಾರೆಯೆ? ಎಷ್ಟೆಂದರೂ ಆಮ್ ಆದ್ಮಿಯಿಂದ ವಸೂಲಿ ಮಾಡಿ ಕಾರ್ಪೊರೇಟ್‌ಗಳಿಗೆ ಒದಗಿಸುವುದೇ ನವ-ಉದಾರವಾದಿ ಸರ್ಕಾರಕ್ಕೆ ಗೊತ್ತಿರುವ ಏಕಮಾತ್ರ ತರ್ಕ ತಾನೇ?

ಖಾಸಗಿ ಕ್ಷೇತ್ರದ ಭ್ರಷ್ಟಾಚಾರದ ವಿರುದ್ದವೂ.....

ಪುಟ 33 ರಿಂದ

ಸಾಹಿತ್ಯಕ್ಕೆ ಹೊಸ ಚೈತನ್ಯ ನೀಡೋಣ ಎಂದರು. ಬಂಡಾಯ ಸಾಹಿತ್ಯ ಯಾವ ಚೈತನ್ಯದ ವ್ಯಕ್ತಿಗಳನ್ನು ಬಿಡುಗಡೆ ಮಾಡಿತ್ತೋ ಆ ವ್ಯಕ್ತಿಗಳು ಈಗಲೂ ಹಾಗೆ ಇದ್ದಾರೆ. ಅಣ್ಣಾ ಹಜಾರೆಯವರ ಭ್ರಷ್ಟಾಚಾರದ ಹೋರಾಟವನ್ನು ರಾಷ್ಟ್ರವ್ಯಾಪಿ ಹೋರಾಟ ಎಂದ ಅವರು ಅಣ್ಣಾಗಿರಿ-ಗಾಂಧಿಗಿರಿ, ಕ್ರೇಜಿವಾಲ ಎಂದರೆ ಕೇಸರಿವಾಲ. ಬಿಜೆಪಿ ಹಾಗೂ ಇನ್ನಿತರ ಚಡ್ಡಿ ಸಂಘಟನೆಗಳು ಭ್ರಷ್ಟಾಚಾರಕ್ಕೆ ಕೈಜೋಡಿಸಿದವು. ಇಂದು ಯಾರು ರಾಜಕೀಯವಾಗಿ ತಟಸ್ಥರೋ ಅವರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಅದು ನಿಜವಾದಂತಾಗುತ್ತದೆ ಎಂದರು. ಹೊಸತು ಪತ್ರಿಕೆಯ ಸಂಪಾದಕರಾದ ಡಾ. ಜಿ.ರಾಮಕೃಷ್ಣ ಅವರು 'ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡುವುದು ಒಂದು ದೊಡ್ಡ ಭ್ರಷ್ಟಾಚಾರವಾಗಿದೆ. ಯಾವುದೇ ಚಳುವಳಿಯನ್ನು ಸ್ವಂತಕ್ಕೆ ಬಳಸಿಕೊಳ್ಳುವುದು ಭ್ರಷ್ಟಾಚಾರ. ಪಾರ್ಲಿಮೆಂಟಿಗೆ ಲೋಕಪಾಲ್ ಬಿಲ್ ಕೈಗೆತ್ತಿಕೊಳ್ಳುವಂತೆ ಮನವರಿಕೆ ಮಾಡುವುದು ನಮ್ಮ ಕೆಲಸವಾಗಿದೆ. ಸಾರ್ವಜನಿಕ ಸಂಪರ್ಕದೊಂದಿಗೆ ನಾವು ಜನರಲ್ಲಿ ಅರಿವು ಮೂಡಿಸಿ ಸಂಪೂರ್ಣವಾಗಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಕೆಲಸಕ್ಕೆ ಕೈಜೋಡಿಸೋಣ ಎಂದು ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು.

ಸಿಪಿಐ ಪಕ್ಷದ ರಾಜ್ಯ ಮಂಡಳಿ ಕಾರ್ಯದರ್ಶಿ ಸಿದ್ದನಗೌಡ ಪಾಟೀಲರು ಮಾತನಾಡಿ ಭ್ರಷ್ಟಾಚಾರದ ವಿರುದ್ಧ ಸಾಂಕೇತಿಕ ಹೋರಾಟಗಳಿಂದ ಹೆಚ್ಚು ಪ್ರಯೋಜನವಿಲ್ಲ. ಜನರಲ್ಲಿ ಜಾಗೃತಿ ಮೂಡಿಸಿ ಬೃಹತ್ ಹೋರಾಟಗಳನ್ನು ನಡೆಸಬೇಕೆಂದು ಹೇಳಿದರು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ಯ ಮುಖಂಡರಾದ ಅನಗವಾಡಿ ರುದ್ರಪ್ಪ, ಟಿಪ್ಪು ಸುಲ್ತಾನ್ ಸಂಯುಕ್ತ ರಂಗದ ರಾಜ್ಯ ಅಧ್ಯಕ್ಷರಾದ ಸರ್ದಾರ್ ಅಹಮದ್ ಖುರೇಶಿ ಮುಂತಾದವರು ಸಮಾವೇಶದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸರ್ಕಾರವು ಗಣಿ ಅಕ್ರಮಗಳ ಕುರಿತ ಲೋಕಾಯುಕ್ತ ವರದಿಯನ್ನು ಅಂಗೀಕರಿಸಿ ಅಪರಾಧಿಗಳನ್ನು ಶಿಕ್ಷಿಸುವ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಮಂಡಿಸಿದರು. ಸಿಪಿಐ ಪಕ್ಷದ ಮುಖಂಡರು ನಿರ್ಣಯ ಅನುಮೋದಿಸಿದರು. ಸಮಾವೇಶವು ನಿರ್ಣಯವನ್ನು ಸರ್ವಾನುಮತದಿಂದ ಅನುಮೋದಿಸಿತು. ಹಾಗೂ ರಾಜ್ಯವಾಪಿಯಾಗಿ ಜಿಲ್ಲಾ ತಾಲ್ಲೂಕು ಮತ್ತು ಕೆಳ ಹಂತಗಳವರೆಗೆ ಭ್ರಷ್ಟಾಚಾರದ ಕುರಿತ ಜನಜಾಗೃತಿ ಕಾರ್ಯಕ್ರಮ ಹಾಗೂ ಹೋರಾಟಗಳನ್ನು ನಡೆಸಲು ಸಮಾವೇಶವು ತೀರ್ಮಾನಿಸಿತು.

ಭ್ರಷ್ಟಾಚಾರದ ರಾಜಕೀಯ ....

ಪುಟ 7 ರಿಂದ

ಸಿಂಗ್ ಸರ್ಕಾರ ಅದನ್ನು ಅಲ್ಲಗಳೆಯಲು ಮತ್ತು 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ತಮ್ಮ ಪಾತ್ರವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದೆ. ಸರ್ವೋಚ್ಛ ನ್ಯಾಯಾಲಯದ ಮಧ್ಯಪ್ರವೇಶದಿಂದಾಗಿ ಹಾಗೂ ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಪಟ್ಟುಬಿಡದ ಹೋರಾಟದಿಂದಾಗಿ ಸರ್ಕಾರ ಅನಿವಾರ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಯಿತು. ಇವತ್ತಿಗೂ ಕೂಡ, ಅದೊಂದು ಗಂಭೀರ ಅಪರಾಧ ಎನ್ನುವುದನ್ನು ಒಪ್ಪಿಕೊಳ್ಳಲು ಸರ್ಕಾರ ಸಿದ್ಧವಿಲ್ಲ. ಅದೇ ಧೋರಣೆ ಕಾಮನ್ ವೆಲ್ತ್ ಗೇಮ್ಸ್ ಹಗರಣದ ಬಗ್ಗೆ ಕೂಡ ಇದೆ. ಮತ್ತು ದೊಡ್ಡ ಬಂಡವಾಳಗಾರರಿಗೆ ಹಾಗೂ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುವ ನೀತಿ ಗಳಿಂದಾಗಿಯೇ ಇಂತಹ ಅಗಾಧ ಮಟ್ಟದ ಭ್ರಷ್ಟಾಚಾರ ಆಗುತ್ತಿದೆ ಎನ್ನುವುದನ್ನೂ ಒಪ್ಪಲು ಸರ್ಕಾರ ತಯಾರಿಲ್ಲ. ಆದ್ದರಿಂದಲೇ ದುರ್ಬಲವಾದ ಹಾಗೂ ನಿಷ್ಪ್ರಯೋಜಕವಾದ ಲೋಕಪಾಲ್ ಮಸೂದೆಯನ್ನು ಸರ್ಕಾರ ಸಂಸತ್ತಿನಲ್ಲಿ ತಂದಿರುವುದು.

ಭ್ರಷ್ಟಾಚಾರ ಮತ್ತು ನವ ಉದಾರವಾದೀ ನೀತಿಗಳು ದೇಶದ ರಾಜಕೀಯದ ಮೇಲೂ ನೇರವಾದ ಪ್ರಭಾವ ಬೀರಿದೆ. ಆಗಸ್ಟ್ 2010 ರ ಕೇಂದ್ರ ಸಮಿತಿಯ ವಿಸ್ತೃತ ಸಭೆಯ ರಾಜಕೀಯ ನಿರ್ಣಯದಲ್ಲಿ ಎತ್ತಿ ಹೇಳಿದಂತೆ:"ಈ ನವ ಉದಾರವಾದೀ ನಿಲುವಿನ ನೇರ ಪರಿಣಾಮದಿಂದಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಹಿಂದೆಂದೂ ಕಾಣದ ಹಣದ ಹೊಳೆ ಹರಿದಿರುವುದು. ಅದು ಇಡೀ ವ್ಯವಸ್ಥೆಯನ್ನು ಭ್ರಷ್ಟಗೊಳಿಸಿದೆ ಮತ್ತು ದೊಡ್ಡ ಬಂಡವಾಳಗಾರರು ಹಾಗೂ ಶ್ರೀಮಂತ ವರ್ಗಗಳ ಜತೆ ಸಂಬಂಧವಿರದ ರಾಜಕೀಯ ಪಕ್ಷಗಳಿಗೆ ಚುನಾವಣೆಗಳಲ್ಲಿ ಭಾಗವಹಿಸುವುದನ್ನೇ ಅಸಾಧ್ಯವಾಗಿಸಿದೆ. ಬಂಡವಾಳಗಾರರ ಪಕ್ಷಗಳು ಚುನಾವಣೆಯಲ್ಲಿ ಹಣವಂತರನ್ನೇ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡುತ್ತಿವೆ. ಚುನಾವಣೆಯಲ್ಲಿನ ಹಣಬಲದ ಬಳಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಅದು ರಾಜಕೀಯ ವ್ಯವಸ್ಥೆಯನ್ನೇ ಕಲುಷಿತಗೊಳಿಸುತ್ತಿದೆ; 'ಹಣಕ್ಕಾಗಿ ಸುದ್ದಿ' ಪ್ರಕರಣ ಈ ದುಷ್ಟ ನೀತಿಯ ಪ್ರತಿಫಲವೇ ಆಗಿದೆ."

ಚುನಾವಣೆಗಳಲ್ಲಿ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಅಪಾರ ಮೊತ್ತದ ಅನೈತಿಕ ಹಣದ ಬಳಕೆ ಕೂಡ ಅದೇ ದೊಡ್ಡ ಬಂಡವಾಳಗಾರರು–ರಾಜಕಾರಣಿಗಳು–ಅಧಿಕಾರಿಗಳ ದುಷ್ಟ ಕೂಟದ ಭ್ರಷ್ಟ ವಿಧಾನಗಳಿಂದ ಉದ್ಭವವಾಗುತ್ತಿದೆ. ಇದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲುಮಾಡುತ್ತಿದೆ. ದೊಡ್ಡ ಬಂಡವಾಳವು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ನಿರಂತರ ನಿರ್ಬಂಧವನ್ನು ಬಯಸುತ್ತದೆ. ಆದ್ದರಿಂದಲೇ ಪ್ರತಿಭಟನಾ ಸಭೆ, ಸಾರ್ವಜನಿಕ ಸಭೆ ಮತ್ತು ಮುಷ್ಕರದ ಹಕ್ಕುಗಳ ಮೇಲೆ ಆಡಳಿತಾತ್ಮಕ ಕ್ರಮಗಳು ಮತ್ತು ನ್ಯಾಯಾಂಗದ ಮಧ್ಯಪ್ರವೇಶಗಳ ಮೂಲಕ ನಿರ್ಬಂಧಗಳನ್ನು ಹೇರಲಾಗುತ್ತಿದೆ. ಭ್ರಷ್ಟ ನವ ಉದಾರವಾದಿ ಆಡಳಿತಡಿಯಲ್ಲಿ ರಾಜಕೀಯ ದಂಧೆಯಾಗುತ್ತಿದೆ, ದಂಧೆಯನ್ನು ರಾಜಕೀಯದ ಮೂಲಕ ನಡೆಸಲಾಗುತ್ತಿದೆ.

ಆದಕಾರಣ, ಭ್ರಷ್ಟಾಚಾರದ ರಾಜಕೀಯ ಅರ್ಥಶಾಸ್ತ್ರವನ್ನು ಅರಿತುಕೊಳ್ಳುವ ಅವಶ್ಯಕತೆ ಇದೆ. ಭ್ರಷ್ಟಾಚಾರದ ಬೇರುಗಳು ನವ ಉದಾರವಾದಿ ವ್ಯವಸ್ಥೆಯಲ್ಲೇ ಇವೆ ಮತ್ತು ಬಂಡವಾಳದ ಆದೇಶ ಪಾಲನೆಗಾಗಿ ರಾಜಕೀಯ ವ್ಯವಸ್ಥೆಯನ್ನು ಭ್ರಷ್ಟ ವಿಧಾನಗಳಿಂದ ಬುಡಮೇಲು ಮಾಡಲಾಗುತ್ತಿದೆ. ಆದ್ದರಿಂದ ಭ್ರಷ್ಟಾಚಾರದ ವಿರುದ್ಧದ ಹೋರಾಟ ಅನೇಕ ಮಗ್ಗಲುಗಳನ್ನು ಹೊಂದಿದೆ ಎಂದು ಸಿ.ಪಿ.ಐ(ಎಂ) ಹೇಳುತ್ತದೆ. ಒಂದು ಹಂತದಲ್ಲಿ ಸರ್ಕಾರ ಹಾಗೂ ಅಧಿಕಾರಶಾಹಿಯ ಉನ್ನತ ಮಟ್ಟದಲ್ಲಿನ ಭ್ರಷ್ಟಾಚಾರ ತೊಡೆದುಹಾಕುವಲ್ಲಿ ಲೋಕಪಾಲ್ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಅನೈತಿಕ ವಿಧಾನಗಳಿಂದ ಆಗಿರುವುದು ಎಂದು ಸಾಬೀತಾದರೆ ಅಂತಹ ಸರ್ಕಾರೀ ಗುತ್ತಿಗೆಗಳನ್ನು ಮತ್ತು ವ್ಯಾಪಾರಿ ಒಪ್ಪಂದಗಳನ್ನು ರದ್ದು ಮಾಡುವ ಅಧಿಕಾರ ಲೋಕಪಾಲ್‌ಗೆ ಇರಬೇಕು.

ಉನ್ನತ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಹಿಮ್ಮೆಟ್ಟಿಸಲು ಪ್ರತ್ಯೇಕ ವ್ಯವಸ್ಥೆಯೇ ಇರಬೇಕು. ಉನ್ನತ ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ದೂರುಗಳನ್ನು ತನಿಖೆಮಾಡಲು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ಸ್ಥಾಪಿಸಬೇಕು.

ಚುನಾವಣೆಗಳಲ್ಲಿನ ಧನಬಲ ಮತ್ತು ಅನೈತಿಕ ಹಣದ ಬಳಕೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಚುನಾವಣಾ ಸುಧಾರಣೆಗಳ ಅಗತ್ಯವಿದೆ. ಅನೈತಿಕವಾಗಿ ಗಳಿಸಿದ ಹಣ ಅಥವಾ ತೆರಿಗೆ ವಂಚಿಸಿ ಗಳಿಸಿದ ಹಣವೇ ಬಹುಪಾಲು ಕಪ್ಪು ಹಣಕ್ಕೆ ಮೂಲ.

ಕಪ್ಪು ಹಣವನ್ನು ಹೊರತೆಗೆಯಲು ಕಟ್ಟುನಿಟ್ಟಿನ ಕ್ರಮಗಳಾದ ತೆರಿಗೆ ಕಾನೂನುಗಳ ಬದಲಾವಣೆ ಮತ್ತು ಮಾರಿಷಸ್ ದಾರಿಗಳನ್ನು ಮುಚ್ಚುವುದನ್ನು ಜಾರಿ ಮಾಡಬೇಕು. ಇದರ ಜತೆಯಲ್ಲೇ ಹೊರಗಡೆ 'ತೆರಿಗೆ ಸ್ವರ್ಗ'ಗಳಲ್ಲಿರುವ ಕಪ್ಪು ಹಣವನ್ನು ದೇಶಕ್ಕೆ ವಾಪಸ್ಸು ತರಿಸಲು ಕಠಿಣ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು.

ಇವೆಲ್ಲಕ್ಕೂ ಮಿಗಿಲಾಗಿ, ಭ್ರಷ್ಟಾಚಾರಕ್ಕೆ ಕಾರಣವಾಗುತ್ತಿರುವ ಕೇಂದ್ರ ಸರ್ಕಾರದ ನೀತಿಗಳಾದ ಗಣಿ ನೀತಿ, ಜಮೀನು ಸ್ವಾಧೀನತಾ ನೀತಿ ಮತ್ತು ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಿಸುವ ಪ್ರವೃತ್ತಿಗಳನ್ನು ಬದಲಾಯಿಸಬೇಕು. ಆ ಮೂಲಕ ಜನರ ಹಿತಾಸಕ್ತಿಯನ್ನು ದೇಶದ ಒಳಿತನ್ನು ಕಾಪಾಡಬೇಕು.

ಆದ್ದರಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟಮಾಡಲು ಜನಸಮುದಾಯವನ್ನು ಅಣಿನೆರಸಬೇಕು; ಆ ಮೂಲಕ ಈ ಮೇಲಿನ ಕ್ರಮಗಳನ್ನು ಜಾರಿ ಮಾಡಿಸಲು ಸಾಧ್ಯವಾಗಬೇಕು; ಅದೇ ಸಮಯದಲ್ಲಿ ನವ ಉದಾರವಾದಿ ನೀತಿಗಳ ವಿರುದ್ಧದ ಚಳುವಳಿಯನ್ನು ಬಲಿಷ್ಠಗೊಳಿಸಬೇಕು. ಆಗ ಮಾತ್ರವೇ ಉನ್ನತ ಮಟ್ಟದ ಭ್ರಷ್ಟಾಚಾರವನ್ನು ಬೇರು ಸಹಿತ ಕಿತ್ತುಹಾಕಲು ಸಾಧ್ಯ.



ಭ್ರಷ್ಟಾಚಾರ ಎಲ್ಲ ವಯೋಮಾನದವನ್ನೂ ಕಾಡುತ್ತದೆ. ಅದರೆ ಯುವಜನರ ಮೇಲೆ, ಯುವಜನರ ಭವಿಷ್ಯದ ಮೇಲೆ ಭ್ರಷ್ಟಾಚಾರ ಚಾಚುವ ಕರಿ ನೆರಳು ಭವಿಷ್ಯವನ್ನು ಅಂಧಕಾರಕ್ಕೆ ನೂಕುತ್ತದೆ. ಆದರೆ ಈ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಯುವಜನರು ಒಂದು ಪ್ರಮುಖ ಪಾತ್ರ ವಹಿಸಬಲ್ಲರು ಎಂಬುದು ಗಮನಿಸ ಬೇಕಾದ ಅಂಶವಾಗಿದೆ.

ಭ್ರಷ್ಟಾಚಾರ ನಿರುದ್ಯೋಗ ಯುವಜನತೆ

ಬಿ.ರಾಜಶೇಖರಮೂರ್ತಿ
ರಾಜ್ಯ ಅಧ್ಯಕ್ಷರು, ಡಿವೈಎಫ್‌ಐ

ಇಂದು ಭ್ರಷ್ಟಾಚಾರ ವಿರಾಟ ಸ್ವರೂಪ ಪಡೆದುಕೊಂಡಿದೆ. 2ಜಿ ಸ್ಪೆಕ್ಟ್ರಂ ಹಗರಣದಲ್ಲಿ 1 ಲಕ್ಷ 76 ಸಾವಿರ ಕೋಟಿ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣದಲ್ಲಿ 70 ಸಾವಿರ ಕೋಟಿ. ಆದರ್ಶ ಸೊಸೈಟಿಯ ಹಗರಣದಲ್ಲಿ 400 ಕೋಟಿ ಇನ್ನೂ ನಮ್ಮ ರಾಜ್ಯದಲ್ಲಿ ಜಿಲ್ಲೆ ಜಿಲ್ಲೆಗಳ ಸಂಪತ್ತೇ ಲೂಟಿಯಾಗಿದೆ. ಬಳ್ಳಾರಿ ಮತ್ತು ಸುತ್ತಮುತ್ತಲ ಜಿಲ್ಲೆಗಳ ಜನತೆಯ ಶ್ವಾಸನಾಳಗಳಲ್ಲಿ ಗಣಿಧೂಳು ತುಂಬಿಕೊಂಡು ಬಹುತೇಕ ರೋಗ ಪೀಡತರಾಗುತ್ತಿದ್ದಾರೆ. ಭೂ ಕಬಳಿಕೆಯಲ್ಲಿ ರಾಜ್ಯವೇ ಮೊದಲ ಸ್ಥಾನದಲ್ಲಿದೆ. ಇಂತಹ ಬಹುದೊಡ್ಡ ಗಾತ್ರದ ಹಗರಣಗಳು ನಮ್ಮ ದೇಶದ ಒಂದು ವರ್ಷದ ಬಜೆಟ್‌ಗಿಂತ ಎದುಪಟ್ಟು ಹೆಚ್ಚಾಗಿದೆ. ಈ ಬಹುದೊಡ್ಡ ಗಾತ್ರದ ಮೊತ್ತದಿಂದ ಸಾರ್ವಜನಿಕ ಉದ್ದಿಮೆಗಳು, ನೀರಾವರಿ ಯೋಜನೆಗಳು, ವಿದ್ಯುತ್ ತಯಾರಿಕಾ ಘಟಕಗಳು ಮುಂತಾದ ಬೃಹತ್ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತಿತ್ತು. ಇವುಗಳಿಂದಾಗಿ ಲಕ್ಷಗಟ್ಟಲೇ ಉದ್ಯೋಗ ನಿರ್ಮಾಣ ಆಗುತ್ತಿತ್ತು. ಜೊತೆಗೆ ಉದ್ಯೋಗ ನಿರ್ಮಾಣ ಆಗುವಂತಹ ಉದ್ಯಮಗಳಿಗೆ ವಿದ್ಯುತ್, ನೀರಾವರಿಯೂ ದೊರೆಯುತ್ತಿತ್ತು. ಹೀಗಾಗಿ ನಿರುದ್ಯೋಗ, ಅರೆಹೊಟ್ಟೆ ಉದ್ಯೋಗದಲ್ಲಿ ಯುವಜನರು ಕೊಳೆಯುತ್ತಿರುವುದು ತಪ್ಪಿ ಖಾಯಂ ಮತ್ತು ಸುಭದ್ರ ಉದ್ಯೋಗದ ಅವಕಾಶಗಳು ಶೇ.55ಕ್ಕಿಂತ ಹೆಚ್ಚಿರುವ ಯುವ ಭಾರತದಲ್ಲಿನ ಉದ್ಯೋಗದ ಅವಶ್ಯಕತೆಯನ್ನು ನೀಗುತ್ತಿತ್ತು.


ಆದರೆ ಇಂದು ಬಹುಸಂಖ್ಯಾತ ಪ್ರಮಾಣದಲ್ಲಿ ಬಡವರಿಗೆ, ಕೆಳ ಮಧ್ಯಮ ಮತ್ತು ಮಧ್ಯಮ ವರ್ಗ, ಯುವಜನತೆಗೆ ಭ್ರಷ್ಟಾಚಾರ ದೊಡ್ಡ ಪೀಡೆಯಾಗಿದೆ. ಪ್ರಾಥಮಿಕ ಶಿಕ್ಷಕ ಹುದ್ದೆಗಾಗಲಿ, 2ನೇ ದರ್ಜೆಯ ಗುಮಾಸ್ತನ ಹುದ್ದೆಗಾಗಲಿ ಲಕ್ಷಗಟ್ಟಲೇ ಲಂಚ ತೆರಬೇಕು. ಇಲ್ಲವೇ ಜೀವನ ಪರ್ಯಾಂತ ನಿರುದ್ಯೋಗಿಯಾಗಿ ಬಡತನದ ಬೇಗೆಯಲ್ಲಿಯೇ ಇರಬೇಕು. ಇದೇ ರೀತಿಯಲ್ಲಿ ಹತ್ತಾರು. ಲಕ್ಷಗಟ್ಟಲೇ. .ಕುಟುಂಬಗಳ. ಜನತೆ

ಬಡತನದಲ್ಲಿಯೇ ಉಳಿಯುವಂತಾಗಿದೆ. ಇನ್ನು ಉತ್ತಮ ಉದ್ಯೋಗ ಪಡೆಯುವಂತಹ ಶಿಕ್ಷಣ ಪಡೆಯಲು ಕಾನೂನು ಬದ್ಧವಾದ (ಲಕ್ಷಗಟ್ಟಲೇ ಡೊನೇಷನ್ ಕ್ಯಾಪಿಟೇಷನ್ ಶುಲ್ಕಗಳು) ಭ್ರಷ್ಟಾಚಾರ ಅಡ್ಡಿಯಾಗಿದೆ. ಹೀಗೆ ಭ್ರಷ್ಟಾಚಾರ ಯುವಜನರ ಸಾಮಾನ್ಯ ಜನರ ಬದುಕನ್ನು ಹಲವಾರು ರೀತಿಯಲ್ಲಿ ಹಿಂಡುತ್ತದೆ. ಇದರ ಜೊತೆಗೆ ದಿನೇ ದಿನೇ ಬೆಲೆ ಏರಿಕೆ, ರೇಷನ್ ಪದ್ಧತಿಯ ಅವ್ಯವಸ್ಥೆ-ಭ್ರಷ್ಟಾಚಾರ. ಆರೋಗ್ಯ ಸೇವೆಯಲ್ಲಿನ ಭ್ರಷ್ಟಾಚಾರ ಇವೆಲ್ಲವೂ ಬಡಜನರನ್ನು ಕಾಡುತ್ತಿದೆ. ಇದರಿಂದಾಗಿಯೇ ವಿದ್ಯಾರ್ಥಿ-ಯುವಜನರು-ಸಾಮಾನ್ಯರೆಲ್ಲರೂ ರೋಸಿಹೋಗಿದ್ದಾರೆ. ಜೊತೆಗೆ ಅಗಾಧ ಭ್ರಷ್ಟಾಚಾರಗಳ ಬಗ್ಗೆ ಮಹಾಲೆಕ್ಕ ಪರಿಶೋಧಕರ (ಅಂಉ) ಮತ್ತು ಲೋಕಾಯುಕ್ತರ ವರದಿಗಳ ಈ ವಿರಾಟ ಸ್ವರೂಪದ ಭ್ರಷ್ಟಾಚಾರದ ಬಗ್ಗೆ ಕಣ್ಣು ತೆರೆಸುತ್ತಿವೆ. ಹೀಗಾಗಿಯೇ ಭ್ರಷ್ಟಾಚಾರದ ವಿರುದ್ಧ ಹತ್ತಾರು ಸಾವಿರ ವಿದ್ಯಾರ್ಥಿ ಯುವಜನರು ಸಾಮಾನ್ಯರು ಸ್ವಯಂ ಸ್ಫೂರ್ತಿಯಾಗಿ ನೆರೆಯುತ್ತಿರುವುದು. ಈ ಸಂದರ್ಭದಲ್ಲಿ ಜನರ ಬಯಕೆಯನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೊಂಡೊಯ್ಯಬೇಕಾದಂತಹ ಮತ್ತು ಭ್ರಷ್ಟಾಚಾರದ ಮೂಲ ಚೂಲಗಳ ಬಗ್ಗೆ ಅರಿವು ಮೂಡಿಸುವುದು ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಭ್ರಷ್ಟಾಚಾರದ ವ್ಯಾಪಕತೆ, ಸ್ವರೂಪ, ಕಾರಣಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿದ್ದರೆ ಈಗ ಎದ್ದಿರುವ ಭ್ರಷ್ಟಾಚಾರದ ವಿರುದ್ಧದ ಹೋರಾಟ ಮತ್ತು ಭ್ರಷ್ಟಾಚಾರದ ವಿರುದ್ಧ ಸಿಡಿದ್ದೆದ್ದಿರುವ ಜನತೆ ತಪ್ಪು ದಾರಿ ಹಿಡಿದು ಭ್ರಷ್ಟಾಚಾರ ಹಾಗೆಯೇ ಉಳಿಯುತ್ತದೆ. ಬೇರೆ-ಬೇರೆ ರೂಪದಲ್ಲಿ ಇನ್ನೂ ಹೆಚ್ಚಾಗುತ್ತದೆ.

ಹೀಗಾಗಿ ಈ ಬೃಹತ್ ಮಟ್ಟದ ಹಗರಣಗಳಿಗೆ ಕಾರಣವೇನು? 2ಜಿ ಸ್ಪೆಕ್ಟ್ರಂ ಹಗರಣ ಎಂದರೇನು? ಇದರ ಮೂಲ ಏನು? ಕೃಷ್ಣಾ-ಗೋದಾವರಿ ಪ್ರದೇಶದ ಗ್ಯಾಸ್ ಹಗರಣ ಎಂದರೇನು? ಕಾಮನ್‌ವೆಲ್ತ್ ಹಗರಣಗಳ ಮೂಲ ಏನು? ಹಾಗೆಯೇ ಗಣಿ-ಭೂ ಹಗರಣ ಮೂಲವೇನು? ಇವುಗಳ ಹಿಂದಿರುವ ಶಕ್ತಿಗಳಾವುವು? ಎಂಬುದರ ಬಗ್ಗೆ ಆಳವಾಗಿ ಹೊಕ್ಕಿ ಅಧ್ಯಯನ ಮಾಡಿ ಅದರ ಮೂಲ ಏನು? ಎಂಬುದನ್ನು ಹುಡುಕಬೇಕಿದೆ. ಈ ಎಲ್ಲಾ ಪ್ರಶ್ನಗಳಿಗೆ ಈ ಲೇಖನದಲ್ಲೇ ವಿಶ್ಲೇಷಿಸಲು ಆಗುವುದಿಲ್ಲ. ಆದ್ದರಿಂದ 2ಜಿ ಸ್ಪೆಕ್ಟ್ರಂ ಹಗರಣ ಮತ್ತು ಗಣಿ ಹಗರಣವನ್ನು ತೆಗೆದುಕೊಳ್ಳೋಣ.

ಪ್ರಸ್ತುತ ಸಂದರ್ಭದಲ್ಲಿ ಭಾರತದಲ್ಲಿ 50-60 ಕೋಟಿ ಮೊಬೈಲ್ ಫೋನ್ ಬಳಕೆದಾರರಿದ್ದೇವೆ.ಇವರಲ್ಲಿ ಯುವಜನತೆ, ಬಡವರೂ ಸೇರಿದಂತೆ ಎಲ್ಲಾ ವಿಭಾಗದ ಬಳಕೆದಾರರಿದ್ದೇವೆ. ಇಷ್ಟೊಂದು ದೊಡ್ಡ ಸಂಖ್ಯೆಯ ಮೊಬೈಲ್ ಬಳಕೆಗಾಗಿ ನಾವು ವ್ಯಯಿಸುವ ಹಣ ಸಂಪತ್ತು, ನಮ್ಮೆಲ್ಲ ಜನ ಸಮುದಾಯದ ಅಭಿವೃದ್ಧಿಗೆ ಸೇರುವಂತಹ ನೀತಿ-ನಿಯಮಗಳನ್ನು ರೂಪಿಸಿ ಸರ್ಕಾರದ ಬೊಕ್ಕಸಕ್ಕೆ ತೆಗೆದುಕೊಳ್ಳಬಹುದಿತ್ತು. ಬದಲಾಗಿ 120 ಖಾಸಗಿ ಮೊಬೈಲ್ ಇನ್ನಿತರ ಕಂಪನಿಗಳಿಗೆ ಅಕ್ರಮವಾಗಿ ಬಾರಿ ಹಗ್ಗವಾಗಿ (ಕಾನೂನಾತ್ಮಕವಾಗಿ ಹರಾಜು ಹಾಕದೆ) ಧಾರೆಯೆರೆಯಲಾಗಿದೆ. ಹೀಗಾಗಿಯೇ ಖಾಸಗಿ ಕಂಪನಿಗಳಿಗೆ 2ಜಿ ಸ್ಪೆಕ್ಟ್ರಂ ಹಗರಣವೊಂದರಲ್ಲೇ 1 ಲಕ್ಷ 76 ಸಾವಿರ ಕೋಟಿ ಸೇರಿದೆ. ಈ ಹಗರಣದಲ್ಲಿ ಭಾರತದ ಅತಿದೊಡ್ಡ ಉದ್ದಿಮೆಯಾದಂತಹ ಟಾಟಾ ಕಂಪನಿ, ಅಂಬಾನಿ.. ಇಂಥವರುಗಳೇ ಮಾಲೀಕರಾಗಿರುವ ಕೆಲ ಮಾಧ್ಯಮ ಮತ್ತು ಕಂಪನಿಗಳ ಮಧ್ಯವರ್ತಿ ರಾಡಿಯಾ................ ಮುಂತಾದವರು, ಈಗ ಜೈಲಿನಲ್ಲಿರುವ ಡಿ.ರಾಜ ಮತ್ತು ಅಧಿಕಾರದಲ್ಲಿರುವ ಸಚಿವರು ಸೇರಿದಂತೆ ಪ್ರಧಾನಮಂತ್ರಿ ಮತ್ತು ಗೃಹಮಂತ್ರಿ ಪಿ.ಚಿದಂಬರಂರವರನ್ನು ಸುತ್ತಿಕೊಂಡಿದೆ. ಇದರಲ್ಲಿ ಕೆಲ ಪತ್ರಕರ್ತರು ಸೇರಿದಂತೆ ಹಲವಾರು ಪ್ರಮುಖರೇ ಈ ಹಗರಣವನ್ನು ಸೃಷ್ಟಿ ಮಾಡಿದ್ದಾರೆ. ಮತ್ತು ಲಾಭ ಪಡೆದಿದ್ದಾರೆ. ಇದರಿಂದಾಗಿಯೇ 2ಜಿ ಸ್ಪೆಕ್ಟ್ರಂನ್ನು ಸಾರ್ವಜನಿಕ ಕಂಪನಿ ಬಿ.ಎಸ್.ಎನ್.ಎಲ್.ಗೆ ಸಿಗದಂತೆ ಮಾಡಲಾಗಿತ್ತು. ಇಂತಹ ಹಗರಣಕ್ಕಾಗಿಯೇ ಸರ್ಕಾರಿ ಉದ್ಯಮಗಳನ್ನು ಕಡೆಗಣಿಸಿ, ಸೊರಗಿಸಿ ಖಾಸಗಿ ಉದ್ಯಮಗಳಿಗೆ (ಈಗಾಗಲೇ ಸಾಮ್ರಾಜ್ಯ ಮಾಡಿಕೊಂಡಿರುವ ಕಂಪನಿಗಳಿಗೆ) ಮಣೆ ಹಾಕಿರುವುದೇ ಮುಖ್ಯ ಕಾರಣ ಈ 2ಜಿ ಸ್ಪೆಕ್ಟ್ರಂ ಹಗರಣ ಬುಗಿದೇಳಲು.



ಈ ರೀತಿಯಲ್ಲಿ ಖಾಸಗಿ ಕಂಪನಿಗಳಿಗೆ ಮಣೆ ಹಾಕಲು ಕಾರಣಗಳೇ ಖಾಸಗೀಕರಣ-ಉದಾರೀಕರಣ-ಜಾಗತೀಕರಣದ ನೀತಿಗಳು. ಹೀಗಾಗಿ ಖಾಸಗೀಕರಣದ ನೀತಿಗಳಿಂದಲೇ ಇಂತಹ ಬೃಹತ್ ಪ್ರಮಾಣದ ಭ್ರಷ್ಟಾಚಾರ ಆಗಿರುವುದು (ಖಾಸಗಿ ಕಂಪನಿಗಳ ಪರಸ್ಪರ ಪೈಪೋಟಿಯಿಂದ ಲಾಭಗಳಿಸಲು, ಪ್ರಜಾಪ್ರಭುತ್ವ ವ್ಯವಸ್ಥೆಯ-ಸಂವಿಧಾನಬದ್ಧ



ಕಾನೂನು ಕಟ್ಟಳೆಗಳನ್ನೇ ಬುಡಮೇಲು ಮಾಡಿ ತಮಗೆ ಬೇಕಾದಂತೆ ರೀತಿಯಲ್ಲಿ ಆಳುವ ಸರ್ಕಾರಗಳ ಮೂಲಕ ದೇಶದ ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಲು ನೀತಿ-ನಿಯಮಗಳನ್ನು ರೂಪಿಸಿಕೊಳ್ಳುವುದು. ಇಂತಹ ಕೆಲಸಕ್ಕೆ ಯೋಗ್ಯವಾದ ಆಳುವ ಪಕ್ಷಗಳನ್ನೇ ಇದೇ ಖಾಸಗೀ ಕಂಪನಿಗಳು ಅಧಿಕಾರಕ್ಕೂ ತರುವುದು) ಹೀಗಾಗಿ ಖಾಸಗೀಕರಣದ ನೀತಿಗಳನ್ನು ಬದಲಿಸದೆ ಭ್ರಷ್ಟಾಚಾರವನ್ನು ನಿವಾರಿಸಲು ಅಸಾಧ್ಯ ಎನ್ನುವುದು ಅರಿಯಬೇಕು.

ಇನ್ನು ಗಣಿಯ ಹಗರಣದ ಬಗ್ಗೆ ಗಮನಿಸೋಣ. ಇಂತಹ ಹಗರಣದಿಂದ ನಿರುದ್ಯೋಗ ಹೆಚ್ಚಳ ಹೇಗಾಗುತ್ತಿದೆ ಎಂಬುದನ್ನು ನೋಡೋಣ.ಗಣಿ ಉದ್ಯಮ ಈ ಹಿಂದೆ ಹೆಚ್ಚು ಹೆಚ್ಚು ಅದರಲ್ಲೂ ಗಣಿ ರಫ್ತು ಸರ್ಕಾರಿ ಸ್ವಾಮ್ಯದಲ್ಲೇ ಇತ್ತು. ಗಣಿ ಸಂಪತ್ತಿನ ರಫ್ತಿಗೆ ಖಾಸಗಿ ಕಂಪನಿಗಳಿಗೆ ಗುತ್ತಿಗೆ ಕೊಟ್ಟ ಪರಿಣಾಮವೇ ಗಣಿ ಮಾಫಿಯಾ ಪ್ರಾರಂಭವಾಗಲು ಕಾರಣವಾಯಿತು. ಲಕ್ಷಾಂತರ ಕೋಟಿ ರಾಜ್ಯ ದೇಶದ ಗಣಿ ಸಂಪತ್ತು ಲೂಟಿಯಾಗಿದೆ. ಈ ಗಣಿ ಸಂಪತ್ತಿನಿಂದ ಸರ್ಕಾರಗಳ ಸಾರ್ವಜನಿಕ ಉದ್ದಿಮೆಗಳಿಂದಲೇ ಯಂತ್ರೋಪಕರಣಗಳನ್ನಾಗಿ ಮಾರ್ಪಡಿಸಲು ಮುಂದಾಗಿದ್ದರೆ. ಆ ಮೂಲಕ ಲಕ್ಷಾಂತರ ಉದ್ಯೋಗ ಸೃಷ್ಟಿಸಬಹುದಿತ್ತು. ಅದರೆ ಕೆಲವೇ ಗಣಿ ಮಾಲೀಕರು ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿ ಕುಬೇರಾಗುತ್ತಿದ್ದಾರೆ. ಇನ್ನೊಂದೆಡೆ ನಿರುದ್ಯೋಗ ಬಡತನದಿಂದ ಇವರ ಅಂಗರಕ್ಷಕರಾಗಿ, ಇವರ ಆಸ್ತಿ-ಪಾಸ್ತಿಗಳ ರಕ್ಷಣೆಗಾಗಿಯೇ ಯುವಜನತೆ ದುರ್ಬಳಕೆಯಾಗುತ್ತಿದೆ.

ಭೂ ಹಗರಣವೂ ಹಾಗೆಯೇ, ರೈತರ ಕುಟುಂಬಗಳಿಗೆ ಉದ್ಯೋಗ ಕೊಡುವ ಭೂಮಿಯನ್ನು ಕಸಿದುಕೊಂಡು ಈ ಮೇಲೆ ವಿವರಿಸಿದಂತಹ ಖಾಸಗಿ ಕಂಪನಿಗಳ-ಮಾಲೀಕರಿಗೆ ಪರಭಾರೆ ಮಾಡುತ್ತಿರುವುದು. ಇಂತಹ ವಿರಾಟ್ ಸ್ವರೂಪದ ದುಡಿಯುವ ಜನ ಜನವಿರೋಧಿ ನೀತಿಗಳನ್ನು ನಿಗ್ರಹಿಸಲು ನವ ಉದಾರೀಕರಣದಿಂದಾದ ಭ್ರಷ್ಟಾಚಾರದ ನೀತಿಗಳನ್ನು ಬುಡಮೇಲು ಮಾಡದ ಹೊರತು ಜನವಿರೋಧಿ ಭ್ರಷ್ಟಾಚಾರದ ನೀತಿಗಳನ್ನು ನಿಗ್ರಹಿಸಲು ಸಾಧ್ಯವಿಲ್ಲ.



ಇಂತಹ ಭ್ರಷ್ಟಾಚಾರದ ಸುಳಿಗೆ ನ್ಯಾಯಾಲಯಗಳು ಸೇರಿದಂತೆ ದೊಡ್ಡ ದೊಡ್ಡ ಅಧಿಕಾರಿ ವರ್ಗಗಳೇ ಸಿಕ್ಕಿಬಿದ್ದಿವೆ. ಖಾಸಗಿ ಕಂಪನಿಗಳ ಅಧಿಕಾರಶಾಹಿಗಳ ನಡುವಿನ ಅಪವಿತ್ರ ಮೈತ್ರಿಯನ್ನು ಕತ್ತರಿಸಿ ಹಾಕಲು ಬೇಕಾದ ನೀತಿ-ನಿಯಮಗಳನ್ನು ರೂಪಿಸಬೇಕು. ಮತ್ತು ಈ ನೀತಿ ಮತ್ತು ಕಾನೂನುಗಳನ್ನು ಜಾರಿಗೊಳಿಸಲು ಬೇಕಾದಂತಹ ವ್ಯವಸ್ಥೆಯನ್ನು ರೂಪಿಸದೇ ಭ್ರಷ್ಟಾಚಾರ ನಿರ್ಮೂಲನೆಯ ಹಾದಿ ಸುಗಮವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಪರಿಣಾಮಕಾರಿ 'ಲೋಕಪಾಲ ಮಸೂದೆ' ಬರುವ ಅಗತ್ಯವಿದೆ ನಿಜ. ಆದರೆ ಈ ಹಿಂದೆಯೇ ಅಂದರೆ 40 ವರ್ಷಗಳಿಂದಲೂ ಜಾರಿಗೆ ತರುತ್ತೇವೆಂದು ಹೇಳುತ್ತಾ, ತರದೇ ಇರುವುದು ಇದೇ ಕಾಂಗ್ರೆಸ್-ಬಿಜೆಪಿ ರಾಷ್ಟ್ರೀಯ ಪಕ್ಷಗಳು. ಈ ಪಕ್ಷಗಳಿಗಿರುವ ಭ್ರಷ್ಟಾಚಾರದ ಬಗ್ಗೆಯ ದೃಷ್ಟಿಕೋನವನ್ನು ಮತ್ತು ಮನೋಭಾವವನ್ನು ಇದೇ ಎತ್ತಿ ತೋರಿಸುತ್ತಿದೆ. ಹೀಗಾಗಿ ಇಂತಹ ವಿರಾಟ ಸ್ವರೂಪದ ವಿರುದ್ಧ ಜನರ ಆಕ್ರೋಶ ಸ್ವಾಗತಾರ್ಹ. ಇದರಲ್ಲಿ ಪ್ರಧಾನಿಯೂ ಸೇರಬೇಕು. ಸ್ವತಂತ್ರ ಕಾರ್ಯಾಚರಣೆ ಅಧಿಕಾರ-ಹಣ ಇರಬೇಕೆಂಬ ಲೋಕಪಾಲ್ ಮಸೂದೆ ಬರಬೇಕು. ಆದರೆ ಇದೊಂದೇ ನಮ್ಮ ದೇಶದ ಎಲ್ಲಾ ಮಗ್ಗಲುಗಳ ಭ್ರಷ್ಟಾಚಾರಕ್ಕೆ ಮದ್ದು ಎಂಬ ವಾದವೂ ಇದೆ. ಇದರ ಅಪಾಯವನ್ನು ಯುವಜನತೆ ಅರಿಯಬೇಕಿದೆ. ಸ್ಥಳೀಯ ಮಟ್ಟದಿಂದ ಕೇಂದ್ರ ಮಟ್ಟದವರೆಗಿನ ಎಲ್ಲಾ ಭ್ರಷ್ಟಾಚಾರವನ್ನು ಈ ತರಬೇಕೆಂದಿರುವ ಲೋಕಪಾಲ್ ಮಸೂದೆಯಿಂದ ತಡೆಗಟ್ಟಲು ಸಾಧ್ಯವೇ ಇಲ್ಲ. ಹೀಗಾಗಿ ತಕ್ಷಣ ಆಗಬೇಕಿರುವುದು ಪ್ರಬಲ ಲೋಕಪಾಲ ಮಸೂದೆ ರಚನೆ ಮಾಡುವುದು. ನ್ಯಾಯಾಂಗದಲ್ಲಿನ ಭ್ರಷ್ಟಾಚಾರವನ್ನು ನಿಗ್ರಹಿಸಲು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸುವುದು. ಸಂಸತ್ ಸದಸ್ಯರನ್ನು ಭ್ರಷ್ಟಾಚಾರ ಕಾಯಿದೆ ವ್ಯಾಪ್ತಿಗೆ ಒಳಪಡಿಸುವುದು. ದೈನಂದಿನ ಜನಸಾಮಾನ್ಯರ ಅಹವಾಲುಗಳನ್ನು ಕೇಳುವುದಕ್ಕೆ ಮತ್ತು ಸೂಕ್ತ ಪರಿಹಾರಕ್ಕಾಗಿ ಸ್ಥಳೀಯ ಮಟ್ಟದ ಕುಂದು-ಕೊರತೆ ಅಹವಾಲುಗಳ ಆಯೋಗ ರಚಿಸುವುದು. ಚುನಾವಣೆಗಳಲ್ಲಿ

ಹಣದ ದುರ್ಬಳಕೆ ತಡೆಗಟ್ಟಲು ಚುನಾವಣೆಯಲ್ಲಿ ಸುಧಾರಣೆ ತರುವುದು. ವಿದೇಶದಲ್ಲಿನ ಕಪ್ಪು ಹಣ ವಾಪಸಾತಿಗಾಗಿ ಕಠಿಣ ಕ್ರಮ ಜರುಗಿಸುವುದು ಮತ್ತು ಎಲ್ಲಾ ರಾಜ್ಯಗಳಲ್ಲಿ ರಾಜ್ಯ ಲೋಕಪಾಲ್‌ಗಳನ್ನು ರಚಿಸುವುದು ಸೇರಿದಂತೆ ಅನೇಕ ಕಾನೂನು ಮತ್ತು ಕ್ರಮಗಳನ್ನು ಮತ್ತು ಸಂಸ್ಥೆಗಳಿಂದ ಮಾತ್ರ ಭ್ರಷ್ಟಾಚಾರ ತಡೆಗಟ್ಟುವ ಹಾದಿ ಸುಗಮವಾಗಬಲ್ಲದು. ಹೀಗಾಗಿ ಈ ಎಲ್ಲವನ್ನು ಒಂದೇ ಲೋಕಪಾಲ ಸಂಸ್ಥೆಯಿಂದ ನಿರ್ವಹಿಸಲು ಸಾಧ್ಯವಿಲ್ಲ ಹಾಗೂ ಸಂವಿಧಾನಬದ್ಧ ಮತ್ತು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿನ ವಿಧಾನವೂ ಅಲ್ಲ.

ಇದೆಲ್ಲಾಕ್ಕಿಂತ ಮುಖ್ಯವಾಗಿ ಭ್ರಷ್ಟಾಚಾರಕ್ಕೆ ಮೂಲ ಕಾರಣವಾಗಿರುವ ಉದಾರೀಕರಣ-ಖಾಸಗೀಕರಣ-ಜಾಗತೀಕರಣ ನೀತಿಗಳನ್ನು ನಿಯಂತ್ರಿಸುವ ಅಧಿಕಾರ ಲೋಕಪಾಲ ಮಸೂದೆಯಲ್ಲಿ ಇರುವುದಿಲ್ಲ. ಈ ಉದಾರೀಕರಣ-ಖಾಸಗೀಕರಣ-ಜಾಗತೀಕರಣ ನೀತಿಗಳನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದಾದರೆ, ನಮಗೆ ನಾವೇ ಅನ್ಯಾಯ ಮಾಡಿಕೊಂಡ ಹಾಗೆ. ಹೀಗಾಗಿ ಭ್ರಷ್ಟಾಚಾರದ ಕೇಂದ್ರ ಬಿಂದು, ನವ ಉದಾರವಾದಿ ಉದಾರೀಕರಣ-ಖಾಸಗೀಕರಣ ಮತ್ತು ಜಾಗತೀಕರಣದ ನೀತಿಗಳು ಅರಿಯಬಿಡುವ ಖಾಸಗಿ ಕಂಪನಿಗಳ ಹಿಡಿತವನ್ನು ತೊಲಗಿಸುವುದು ನಮ್ಮ ಭ್ರಷ್ಟಾಚಾರದ ವಿರುದ್ಧದ ಮೂಲ ಗುರಿಯಾಗಬೇಕು.

ಹೀಗಾಗಿ ಭ್ರಷ್ಟಾಚಾರ ವಿರುದ್ಧದ ಸಿಡಿದೆದ್ದ ಯುವಜನತೆಯ ದೃಷ್ಟಿಯನ್ನು ಈ ಉದಾರವಾದಿ ನೀತಿಗಳ ವಿರುದ್ಧ ನೆಟ್ಟಬೇಕು. ಬದಲಿಗೆ ಕೇವಲ ಲೋಕಪಾಲ ಸಂಸ್ಥೆ ಸ್ಥಾಪಿಸಿದರೆ ಭ್ರಷ್ಟಾಚಾರ ತೊಲಗುತ್ತದೆಂಬ 'ಸೀಮಿತ'ದೃಷ್ಟಿಕೋನ ಪ್ರಚಾರದಲ್ಲಿದೆ. ಆದರೆ ಈ ಲೋಕಪಾಲ ಸಂಸ್ಥೆಯಿಂದ ಭ್ರಷ್ಟಾಚಾರಕ್ಕೆ ಮೂಲ ಕೇಂದ್ರ ಬಿಂದುವಾದ ನವಉದಾರೀಕರಣ ನೀತಿಗಳ ಎಳೆಯನ್ನು ಸಡಿಸಲಾಗದು. ಲೋಕಪಾಲರ ಸಂಸ್ಥೆ ಕೇವಲ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಗುರುತಿಸಬಹುದು. (ಇದು ಈಗಾಗಲೇ ನಮ್ಮ ಕಣ್ಮುಂದೆ ಇದೆ) ಆದರೆ ಬೃಹತ್ ಪ್ರಮಾಣದ ಖಾಸಗಿ ಕಂಪನಿಗಳೇ. 'ಭ್ರಷ್ಟಾಚಾರ ಗಂಗೋತ್ರಿ' ಎಂಬುದರ ಬಗ್ಗೆ ನಮ್ಮ ಗಮನವನ್ನು ಅರಿಯದಂತೆ ಎಚ್ಚರ ವಹಿಸಲಾಗುತ್ತಿದೆ.

ಹೀಗಾಗಿ ದೇಶದ ಯುವಶಕ್ತಿ ಭ್ರಷ್ಟಾಚಾರದಿಂದ ನಿರುದ್ಯೋಗ ಹೆಚ್ಚಳ ಹೇಗೆ ಮತ್ತು ಭ್ರಷ್ಟಾಚಾರ ನಿರ್ಮೂಲನೆಗೆ ದಾರಿಯಾವುದು ಮತ್ತು ಭ್ರಷ್ಟಾಚಾರ ನಿರ್ಮೂಲನೆಯಾದರೆ ಸುಭದ್ರ ಉದ್ಯೋಗ ಅವಕಾಶಗಳು ಹೇಗೆ ದೊರೆಯುತ್ತವೆಂಬುದನ್ನು ಮನಗಾಣಬೇಕು. ಆದ್ದರಿಂದ ಭ್ರಷ್ಟಾಚಾರದ ಮೂಲಕಾರಣಗಳು. ವಿವಿಧ ಜಾಲಗಳ ಬಗ್ಗೆ ಹೆಚ್ಚು ಆಳವಾದ ತಿಳುವಳಿಕೆ ಪಡೆಯುವುದೇ ಈ ಸಂದರ್ಭದಲ್ಲಿ ಪ್ರಜ್ಞಾವಂತ ಯುವಜನರ ಜವಾಬ್ದಾರಿಯಾಗಿದೆ. ಮತ್ತು ಇವುಗಳ ಆಧಾರ ಮೇಲೆ ಭ್ರಷ್ಟಾಚಾರ ನಿರ್ಮೂಲನೆಯ ನೀತಿ ನಿಯಮಗಳಿಗಾಗಿ ಬೀದಿಗಿಳಿದು ಯುವಜನಾಂದೋಲನವನ್ನು ರೂಪಿಸುವ ಜರೂರು ನಮ್ಮೆಲ್ಲರ ಮೇಲಿದೆ.



ನಂಟು

ಸರಳುಗಳ ಹಿಂದೆ
ಬಂಧಿಯಾಗಿರುವ ಅವರು
ಸರಗಳ್ಳರಲ್ಲ.
ಹೊಟ್ಟೆ ಹೊರೆದುಕೊಳ್ಳಲು
ಕಳ್ಳರಾದವರೂ ಅಲ್ಲ.
ಶುದ್ಧ ಹಸ್ತ
ಪರಿಶುದ್ಧ ರಾಜಕೀಯದ
ವಾರಸುದಾರರು.
ಭ್ರಷ್ಟಾಚಾರದ ಹತ್ತಾರು
ಮುಖ ಹೊತ್ತವರು.
ಗಣಿಯ ಕುಣಿಯಲ್ಲಿ
ಬಲೆಗೆ ಬಿದ್ದವರು
ಮಣ್ಣು ಕದ್ದು
ಸಿಕ್ಕಿ ಬಿದ್ದವರು
ತರಂಗಾಂತರದ ಅಲೆಯಲ್ಲಿ ಸಿಲುಕಿ
ಜೈಲು ಸೇರಿದವರು.
ಓಟಿಗಾಗಿ ನೋಟು ಹಂಚಿದ
ಹಲಾಲ ಕೋರರಿವರು
ಇವರು ಸಾಮಾನ್ಯರಲ್ಲ
ಕಳ್ಳ ಹಣದಲ್ಲಿ
ತಿರುಪತಿ ತಿಮ್ಮಪ್ಪನಿಗೂ
ಪಾಲು ನೀಡಿದ
ಮಹಾ ಮಹಿಮರಿವರು ಮೂರು ಬಿಟ್ಟೋರು
ಊರಿಗೆ ದೊಡ್ಡೋರು
ಎಲ್ಲಾ ಬಿಟ್ಟೋರು
ಅನ್ನೋ ಭಂಡರಿವರು.
ಚಂಚಲಗೂಡ, ತಿಹಾರ್
ಪರಪ್ಪನ ಅಗ್ರಹಾರ
ಜೈಲುಗಳ ಮುಂದೆ
ಇವರದೇ ಸರತಿಯ ಸಾಲು.
ಈ ಜೈಲುಗಳಿಗೂ
ಮಧುಮೇಹ, ಎದೆ ನೋವುಗಳಿಗೂ
ಏನು ನಂಟು?
ಜಯದೇವ, ವಿಕ್ಟೋರಿಯಾ
ಆಸ್ಪತ್ರೆಯ ವೈದ್ಯರಿಗೂ
ಇದು ಬಿಡಿಸಲಾರದ ಒಗಟು.
ದೇಶವನ್ನೇ ಲೂಟಿ ಮಾಡಿ
ಕೋಟಿ ಕೋಟಿ ಹಣ
ಕೊಳ್ಳೆ ಹೊಡೆದವರಿಗೂ
ಖಾವಿಧಾರಿ ಮಠಾಧೀಶರಿಗೂ
ಯಾವ ನಂಟು.?
ಸರಳುಗಳ ಹಿಂದಿರುವ
ಈ ಪ್ರಶ್ನೆ
ಸರಳವೇನಲ್ಲ

– ಹುಲಿಕಟ್ಟಿ ಚನ್ನಬಸಪ್ಪ



ಕಪ್ಪು ಹಣ ಮರಳಿ ತಂದಾಗ

(ಪ್ರಭಾತ್ ಪಟ್ನಾಯಕ್ ಅವರ ಲೇಖನದ ಅನುವಾದ ಸಾರಾಂಶ)

ಭಾರತಿ ಗಾಂವ್ಕರ್

ವಿದೇಶದಲ್ಲಿ ಬಚ್ಚಿಡಲಾಗಿರುವ ಕಪ್ಪು ಹಣವನ್ನು ವಶಕ್ಕೆ ಪಡೆದು ಭಾರತಕ್ಕೆ ತರುವ ವಿಚಾರದಲ್ಲಿ ಕೇಂದ್ರ ಯುಪಿಎ ಸರ್ಕಾರ ಕುಂಟು ನೆಪ ಹೇಳುತ್ತಾ ಕಾಲ ತಳ್ಳುತ್ತಿದೆ. ಸರ್ಕಾರ ಆ ಹಣ ತಂದರಷ್ಟೆ ಸಾಲದು. ಅದನ್ನು ಸೂಕ್ತವಾಗಿ ನಿಬಾಯಿಲೂ ಬೇಕು. ಅದು ಹೇಗೆ ?

ಇತ್ತೀಚಿನ ದಿನಗಳಲ್ಲಿ, ಬಾಬಾ ರಾಮದೇವರಿಂದ ಹಿಡಿದು, ವಿದೇಶದ ಸ್ವಿಸ್ ಬ್ಯಾಂಕ್ನಲ್ಲಿರುವ "ಕಪ್ಪು ಹಣ" ಅಭಿವೃದ್ಧಿ ಉದ್ದೇಶಕ್ಕಾಗಿ ವಾಪಸ್ ತರಬೇಕು ಎಂದು ದಿನಂಪ್ರತಿ ಪತ್ರಿಕೆಗಳಲ್ಲಿ ಬೇಡಿಕೆ ಆವರ್ತನಗೊಳ್ಳುತ್ತಲೇ ಇದೆ. ಈ ಹಣವನ್ನು ಭೌತಿಕವಾಗಿ ಅಲ್ಲ, ವಾಸ್ತವವಾಗಿ ಮಾಡಬೇಕಾದ್ದೆಂದರೆ ಆ ಎಲ್ಲ ಠೇವಣಿಗಳನ್ನು ರಾಷ್ಟ್ರೀಕರಣಗೊಳಿಸಬೇಕು. ಅಂದರೆ ನಿರ್ಧಿಷ್ಟ ಖಾತೆಯಲ್ಲಿ ಇರುವ ಹಣವನ್ನು ಅದರ ಈಗಿರುವ ಮಾಲಿಕತ್ವದಿಂದ ಬದಲಾಯಿಸಿ ಭಾರತ ಸರಕಾರದ ಒಡೆತನಕ್ಕೆ ತರಬೇಕು, ನಂತರ ಅದನ್ನು ರಿಸರ್ವ್ ಬ್ಯಾಂಕ್-ಆರ್.ಬಿ.ಐ.ಗೆ ವರ್ಗಾಯಿಸಬೇಕು. ಏಕೆಂದರೆ ಅದು ವಿದೇಶಿ ವಿನಿಮಯ ರೂಪದಲ್ಲಿದೆ. ಆಮೇಲೆ ಅದಕ್ಕೆ ಪ್ರತಿಯಾಗಿ ರೂಪಾಯಿಯನ್ನು ಪಡೆದು, ನಂತರ ಅದನ್ನು ವ್ಯಯಿಸಬಹುದು.

ಈ ವಿಧಾನಗಳಿಂದ, ಸ್ವಿಸ್ ಬ್ಯಾಂಕ್‌ನಿಂದ ಭಾರತ ಹಣವನ್ನು ಪಡೆಯುವದು ಮತ್ತು ಆರ್.ಬಿ.ಐ. ಸರಕಾರಿ ಭದ್ರತಾ ಪತ್ರಗಳಿಂದ ಹೊಸದಾಗಿ ಮುದ್ರಿತವಾದ ಹಣವನ್ನು (ಇದನ್ನು ಕೊರತೆ ಹಣಕಾಸು ಎನ್ನುತ್ತಾರೆ) ವಿನಿಯೋಗಿಸುವದರಿಂದ ಆಗುವ ಪರಿಣಾಮದ ಹೊರತಾಗಿ ಬೇರಾವ ಬೃಹತ್ ಆರ್ಥಿಕತೆಯ ಪರಿಣಾಮಗಳಲ್ಲಿ ವ್ಯತ್ಯಾಸ ಆಗುವುದಿಲ್ಲ. ಈ ಎರಡು ಅಂಶಗಳಲ್ಲಿರುವ ಒಂದೇ ವ್ಯತ್ಯಾಸ ಎಂದರೆ, ಸ್ವಿಸ್ ಬ್ಯಾಂಕ್ ನಲ್ಲಿ ಇಟ್ಟಿರುವ ಹಣ ವಿದೇಶಿ ವಿನಿಮಯ ರೂಪದಲ್ಲಿದ್ದು, ಭವಿಷ್ಯದ ಆಮದಿಗೆ ಲಭ್ಯವಿದೆ, ಅದೇ ವೇಳೆ ಸರಕಾರಿ ಭದ್ರತಾ ಪತ್ರಗಳಿಂದ ಉತ್ಪಾದಿಸಿದ ಕೊರತೆ ಹಣಕಾಸು ಭವಿಷ್ಯದ ಆಮದಿಗೆ ಯೋಗ್ಯವಾದುದಲ್ಲ.


ಈ ಸರಕಾರಿ ಭದ್ರತಾ ಪತ್ರಗಳನ್ನು ವಿದೇಶಿ ವಿನಿಮಯವಾಗಿ ಬದಲಾಯಿಸಬಹುದಂಬುದೇನೊ ನಿಜ: ಅದಕ್ಕೆ ಒಂದು ಸಮನಾದ ಮೊತ್ತವನ್ನು ವಿದೇಶಿ ಮಾರುಕಟ್ಟೆಯಲ್ಲಿ ಸರಕಾರ ಹರಿಯ ಬಿಡಬೇಕು ಮತ್ತು ಆರ್.ಬಿ.ಐ. ಬಳಿ ಇರುವ ಸರಕಾರಿ ಭದ್ರತಾ ಪತ್ರಗಳನ್ನು ವಿದೇಶಿ ವಿನಿಮಯದಿಂದ ಬಂದ ಲಾಭದ ಮೂಲಕ ಪಡೆಯಬೇಕು, ಹೀಗಾದಾಗ ಸರಕಾರಿ ಭದ್ರತಾ ಪತ್ರಗಳನ್ನು ವಿದೇಶಿ ವಿನಿಮಯವಾಗಿ ಬದಲಾಯಿಸಬಹುದು. ಆದರೆ ಈ ಸಂದರ್ಭದಲ್ಲೂ ಸಹ ಆ ಎರಡು ಅಂಶಗಳ ನಡುವೆ ವ್ಯತ್ಯಾಸ ಇದ್ದೇ ಇರುತ್ತದೆ. ಅದೇನೆಂದರೆ ಸ್ವಿಸ್ ಬ್ಯಾಂಕ್‌ನಿಂದ ವಿದೇಶಿ ವಿನಿಮಯದ ಮೂಲಕ ಪಡೆದ ಹಣ ಸರಕಾರದ ಸ್ವಂತ ಆಸ್ತಿ ಹಾಗೂ ಸರಕಾರಿ ಭದ್ರತಾ ಪತ್ರಗಳ ಮೂಲಕ ಪಡೆದ ಹಣ ಕೇವಲ ಸಾಲ ಪಡೆದದ್ದು ಎನಿಸಿಕೊಳ್ಳುತ್ತದೆ.

ಒಂದುವೇಳೆ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣವನ್ನು

ಶಿಸ್ತುಕ್ರಮ ಜರುಗಿಸಿ ವಾಪಸ್ ಪಡೆದರೆ, ಸರಕಾರ ತನಗಾದ ನಷ್ಟ ಪರಿಹಾರವನ್ನು ವಿದೇಶಿ ಸರಕಾರದಿಂದ ಪಡೆದಂತಾಗುತ್ತದೆ, ಈ ಹಿಂದೆ ಮೊದಲ ವಿಶ್ವ ಯುದ್ಧ ಸಂದರ್ಭದಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಜರ್ಮನಿಯಿಂದ ಪಡೆದಹಾಗೆ. ವಿದೇಶಿ ವಿನಿಮಯದ ಮೂಲಕ ಸರಕಾರ ಪಡೆದ ಹಣವನ್ನು ಅದು ಆರ್.ಬಿ.ಐ.ಗೆ ಮಾರುತ್ತದೆ ಮತ್ತು ಆ ಮೊತ್ತವನ್ನು ಅಭಿವೃದ್ದಿ ವೆಚ್ಚಕ್ಕೆ ಬಳಸಲಾಗುತ್ತದೆ. ಈ ಎಲ್ಲ ಪ್ರಕ್ರಿಯೆಯಿಂದ ಆರ್ಥಿಕತೆಯಲ್ಲಿ ಒಟ್ಟೂ ಬೇಡಿಕೆ ಹೆಚ್ಚುತ್ತದೆ. ಮತ್ತೊಂದೆಡೆ ಆರ್.ಬಿ.ಐ. ಬಳಿ ಇರುವ ವಿದೇಶಿ ವಿನಿಮಯದ ಹಣವನ್ನು ಆಮದಿಗಾಗಿ ಬಳಸಿದರೆ ಆರ್ಥಿಕತೆಯಲ್ಲಿ ಪೊರೈಕೆ ಹೆಚ್ಚುತ್ತದೆ.

ಒಟ್ಟೂ ಬೇಡಿಕೆ ಮತ್ತು ಒಟ್ಟೂ ಪೊರೈಕೆ ಒಂದಕ್ಕೊಂದು ಸಮನಾಗಿರುವದರಿಂದ ಸ್ವಿಸ್ ಬ್ಯಾಂಕ್‌ನಿಂದ ಪಡೆದ ಹಣ ಆರ್ಥಿಕತೆಯಲ್ಲಿ ಹಣದುಬ್ಬರದ ಒತ್ತಡವನ್ನು ಉಲ್ಬಣ ಗೊಳಿಸುವದಿಲ್ಲ. ಒಂದುವೇಳೆ ದೇಶದ ಆರ್ಥಿಕತೆ ಬೇಡಿಕೆ-ನಿರ್ಭಂದಿತವಾದದ್ದಾದಲ್ಲಿ (Demand constraint) ಸರಕಾರ ಕೊರತೆ ಹಣಕಾಸಿನ ಮೂಲಕ ಧನವಿನಿಯೋಗ ಮಾಡಿದರೆ ಹಣದುಬ್ಬರದ ಒತ್ತಡ ತೀವ್ರವಾಗುತ್ತದೆ.

ಈ ರೀತಿ ಸ್ವಿಸ್ ಬ್ಯಾಂಕ್ ನಿಂದ ಪಡೆದ ಹಣ ಅಭಿವೃದ್ದಿ ವೆಚ್ಚಕ್ಕೆ ಹಣಕಾಸು ಒದಗಿಸಲು ಒಂದು ದೃಢ ಮೂಲವಾಗಿದೆಯಾದರೂ, ಗಮನಿಸಲೇಬೇಕಾದ ಕೆಲವು ಸಮಸ್ಯೆ ಇದರಲ್ಲೂ ಕೂಡ ಇದೆ. ಮೂಲಭೂತ ಸಮಸ್ಯೆಯನ್ನು ಗ್ರಹಿಸಲು ಉತ್ತಮ ಹಾದಿ ಎಂದರೆ, ಅಭಿವೃದ್ದಿ ವೆಚ್ಚದ ಪರಿಣಾಮದಿಂದಾಗಿ ಬೇಡಿಕೆ ಹೆಚ್ಚಾದ ಸರಕನ್ನು ಆಮದು ಮಾಡಿಕೊಳ್ಳಬಾರದು, ಏಕೆಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಈಗಾಗಲೇ ಅದರ ಪೊರೈಕೆ ಕಿರಿದಾಗಿರುತ್ತದೆ, ಹಾಗಿರುವಾಗ ಸ್ವಿಸ್ ಬ್ಯಾಂಕ್‌ನಿಂದ ಪಡೆದ ಹಣವನ್ನು ಸರಕಾರ ಅಭಿವೃದ್ದಿ ವೆಚ್ಚಕ್ಕೆ ವಿನಿಯೋಗ ಮಾಡಿದರೆ ಆ ಸರಕಿನ ಬೇಡಿಕೆ ಹೆಚ್ಚುತ್ತದೆ, ಆದರೆ ವಿದೇಶಿ ವಿನಿಮಯ ಇರುವದರ ಹೊರತಾಗಿಯೂ ಆ ಸರಕಿನ ಪೊರೈಕೆ ಹೆಚ್ಚುವುದಿಲ್ಲ. ಇದು, ಸ್ವಿಸ್ ಬ್ಯಾಂಕ್‌ನಿಂದ ಪಡೆದ ಹಣದಿಂದಾಗಿ ಉಂಟಾದ ಆರ್ಥಿಕ ಹಣದುಬ್ಬರ ಮತ್ತು ಕೊರತೆ ಹಣಕಾಸಿನ ಮೂಲಕ ಉಂಟಾದ ಹಣದುಬ್ಬರದ ಒತ್ತಡಕ್ಕಿಂತ ವಿಭಿನ್ನವಾಗಿಯೇನೂ ಇರುವುದಿಲ್ಲ.



ರೈತರ ಉತ್ಪಾದನೆಗೆ ವ್ಯತಿರಿಕ್ತ ನಿರುತ್ತೇಜನ.

ವಾಸ್ತವದಲ್ಲಿ, ಅಭಿವೃದ್ದಿ ವೆಚ್ಚಗಳಿಂದ ಬೇಡಿಕೆ ಹೆಚ್ಚಾಗುವ ಸರಕುಗಳಲ್ಲಿ ಒಂದೆಂದರೆ ಆಹಾರ ಧಾನ್ಯಗಳು, ಸ್ವಿಸ್ ಬ್ಯಾಂಕ್ ನಲ್ಲಿರುವ ಹಣವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡರೆ ಅದು ದುಡಿಯುವ ಜನರ ಕೈಯಲ್ಲಿ ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ. ವಿಶ್ವ ಮಾರುಕಟ್ಟೆಯಲ್ಲಿ ಕೇವಲ ಆಹಾರಧಾನ್ಯಗಳ ಕಡಿಮೆ ಸಂಗ್ರಹವಿದೆ ಎಂಬುದಷ್ಟೇ ಅಲ್ಲದೆ, ಅದರ ಬೆಲೆಗಳು ತೀವ್ರವಾಗಿ ಏರುತ್ತಲಿವೆ. ಇಂತಹ ಸಂದರ್ಭದಲ್ಲಿ ಸ್ವಿಸ್ ಬ್ಯಾಂಕ್ ನಿಂದ ಪಡೆದ ಹಣ ಅಭಿವೃದ್ದಿ ವೆಚ್ಚಕ್ಕೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸದೇ ಬಳಸಿದರೆ ಅದು ಈಗಾಗಲೇ ಇರುವ ದೇಶದ ಆರ್ಥಿಕ ಹಣದುಬ್ಬರವನ್ನು ತೀವ್ರಗೊಳಿಸುತ್ತದೆ.

ಇದು, ಸ್ವಿಸ್ ಬ್ಯಾಂಕ್‌ನಿಂದ ಪಡೆದ ಹಣವನ್ನು ಅಭಿವೃದ್ದಿ ವೆಚ್ಚಕ್ಕೆ ಬಳಸಿದರೆ ಜನರ ಪ್ರಯೋಜನಕ್ಕೆ ಬಾರದು ಎಂದು ಸೂಚಿಸಿದ್ದಲ್ಲ. ಆದರೆ ಇತರ ಸಂಗತಿಗಳನ್ನು ಗಮನದಲ್ಲಿರಿಸಿಕೊಳ್ಳಬೇಕು, ಮುಖ್ಯವಾಗಿ ಸ್ವಿಸ್ ಬ್ಯಾಂಕ್ ಹಣವನ್ನು ಅಭಿವೃದ್ದಿ ವೆಚ್ಚಕ್ಕೆ ಬಳಸಿದರೆ ಅದು ಜನರು ಉಪಯೋಗಿಸುವ ಆಹಾರಧಾನ್ಯಗಳ ಬೆಲೆಗಳನ್ನು ಏರಿಸಿ, ತೀವ್ರ ಹಣದುಬ್ಬರಕ್ಕೆ ತುತ್ತಾಗದಿರುವಂತೆ ಖಾತ್ರಿ ಪಡಿಸಲು, ಪೊರೈಕೆಯನ್ನು (ಆಹಾರಧಾನ್ಯಗಳ) ಸರಿಯಾಗಿ ನಿರ್ವಹಿಸಬೇಕು.

ಇದರಲ್ಲಿ ಕನಿಷ್ಠ ಎರಡು ಅಂಶ ಸಂಭವಿಸಬೇಕು: ಮೊದಲನೇಯದು, ಅಅಭಿವೃದ್ಧಿ ವೆಚ್ಚಗಳ ಹೆಚ್ಚಳದಿಂದಾಗಿ ದೇಶದಲ್ಲಿ, ಅಲ್ಪಾವಧಿಯಲ್ಲಿ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚುವಂತೆ ಯೋಜನಾಬಧ್ಧವಾಗಿ ಸರಕಾರ ಸ್ವಿಸ್ ಬ್ಯಾಂಕಿನ ಹಣವನ್ನು ಉಪಯೋಗಿಸುವುದು, ಅಂದರೆ ನವ-ಉದಾರೀಕಣದ ಕಾಲಘಟ್ಟದಲ್ಲಿ ರೈತರ ಉತ್ಪಾದನೆಗೆ ಉಂಟುಮಾಡಲಾದ ನಿರುತ್ತೇಜನದಿಂದ ಪುನಃಶ್ಚೇತರಿಕೆ ಆಗುವಂತೆ ಈ ಹಣಕಾಸಿನ ಯೋಜನೆಗಳು ದೇಶದ ಆಹಾರಧಾನ್ಯಗಳ ಉತ್ಪಾದನೆ ಕ್ಷಿಪ್ರ ಗತಿಯಲ್ಲಿ ಹೆಚ್ಚುವಂತೆ ಮಾಡುವ ಪ್ರಾಥಮಿಕ ಉದ್ದೇಶ ಹೊಂದುವುದು. ಎರಡನೇಯದು, ಆಹಾರಧಾನ್ಯಗಳ ಉತ್ಪಾದನೆಗೆ ಸಮಯ ತಗಲುವದರಿಂದ, ದೇಶೀಯ ಆಹಾರ ಸಂಗ್ರಹದ ಮೂಲಕ ಅಲ್ಪಾವಧಿಯಲ್ಲಿ ಹಣದುಬ್ಬರವನ್ನು ನಿಯಂತ್ರಿಸಲು, ದೊಡ್ಡ ಪ್ರಮಾಣದ ಆಹಾರಧಾನ್ಯಗಳ ಖರೀದಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ, ಧೀರ್ಘಾವದಿಯಲ್ಲೂ ಇರುವಂತೆ ಜಾರಿಮಾಡುವದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸರಕಾರ ಸ್ವಿಸ್ ಬ್ಯಾಂಕ್‌ನ ಹಣವನ್ನು ರಾಷ್ಟ್ರೀಕರಣಗೊಳಿಸುವದರ ಮೂಲಕ ಪಡೆದರೂ ರೈತ ಆರ್ಥಿಕತೆಗೆ ಯಾವುದೇ ಹಾನಿ ಆಗದಂತೆ ಕ್ರಮಗಳನ್ನು ತೆಗೆದುಕೊಳ್ಳದೇ ಅಭಿವೃದ್ದಿಗಾಗಿ ವ್ಯಯಿಸುವಂತಿಲ್ಲ, ಒಂದು ವೇಳೆ ಸರಕಾರ ಅಂತಹ ಕ್ರಮಗಳನ್ನು ತೆಗೆದುಕೊಳ್ಳಲು ಸಿದ್ಧವಿದ್ದರೆ ಸ್ವಿಸ್ ಬ್ಯಾಂಕಿನ ಹಣಕ್ಕಾಗಿ ಕಾಯಬೇಕಾಗಿಲ್ಲ. ಹಣದುಬ್ಬರವನ್ನು ನಿಯಂತ್ರಿಸಲು ಸ್ವಿಸ್ ಬ್ಯಾಂಕಿನ ಹಣಕ್ಕಿಂತ ಕೊರತೆ ಧನವಿನಿಯೋಗವೇ ಹೆಚ್ಚಿನ ಕಾರ್ಯ ಮಾಡಬಲ್ಲದು.

ನಿಜ ಎಂದರೆ, ಸರಕಾರ ರೈತ ಆರ್ಥಿಕತೆಯನ್ನು ನವೀಕರಿಸುವದರಲ್ಲಿಯಾಗಲೀ ಅಥವಾ ಜನರ ಆಹಾರ ಭದ್ರತೆಯನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿಯೇ ಆಗಲಿ ಕನಿಷ್ಠ ಆಸಕ್ತಿ ಉದ್ದೇಶ ಹೊಂದಿಲ್ಲ ಎಂಬುದು ಅದರ ಕಾರ್ಯಗಳಿಂದ ಎದ್ದಕಾಣುತ್ತದೆ. ತ್ವರಿತ ಆಹಾರ ಬೆಲೆಯ ಏರಿಕೆ ಇರುವ ಪ್ರಸ್ತುತ ಸಂದರ್ಭದಲ್ಲೂ ಸುಪ್ರೀಮ್ ಕೋರ್ಟಿನ ಕಠಿಣ ಆದೇಶದ ಹೊರತಾಗಿಯೂ, ಸರಕಾರ ಆಹಾರಧಾನ್ಯಗಳನ್ನು ರಫ್ತು ಮಾಡುವುದು, ತೀರಾ ಹಸಿವೆಯಿಂದ ಬಳಲುವವರಿಗೆ ಹಂಚುವುದರ ಬದಲಾಗಿ ಅವುಗಳನ್ನು ಸಂಗ್ರಹಿಸಿಡುವಂತಹ ಕೆಲಸಗಳನ್ನು ಮಾಡುತ್ತಲಿದೆ. ಉದಾಹರಣೆಗೆ, ೨೦೦೮ ರಲ್ಲಿ ಆಹಾರ ಬೆಲೆ ತೀವ್ರವಾಗಿ ಔನತ್ಯದೆಡೆಗೆ ಇರುವಾಗಲೂ ಭಾರತ ಸರಕಾರ ೧೪ ದಶಲಕ್ಷ ಟನ್ ಆಹಾರಧಾನ್ಯಗಳನ್ನು ರಫ್ತು

ಮಾಡಿತ್ತು, ಮತ್ತೆ ೧೭ ದಶಲಕ್ಷ ಟನ್ ಆಹಾರಧಾನ್ಯಗಳನ್ನು 'ಗವರ್ನಮೆಂಟ್ ಸ್ಟಾಕ್'ಗೆ ಸೇರಿಸಲಾಯಿತು! ಸರಕಾರಕ್ಕೆ ಈ ರೀತಿಯಾದ ಮನೋಭಾವ ಇರುವಾಗ ಸ್ವಿಸ್ ಬ್ಯಾಂಕ್ ನಿಂದ ಅಭಿವೃದ್ಧಿ ವೆಚ್ಚಕ್ಕೆಂದು ಪಡೆದ ಕಪ್ಪುಹಣ ಇನ್ನೂ ದುರಂತ, ಅಂದರೆ ಹಣದುಬ್ಬರದ ಬಿಕ್ಕಟ್ಟು ಬಿಗಡಾಯಿಸುವದರಲ್ಲಿ ಕೊನೆಗೊಳ್ಳುತ್ತದೆ.

ನಿರ್ಣಾಯಕವಾಗಿ ನವ ಉದಾರೀಕರಣ ಹಿಮ್ಮೆಟ್ಟಿಸುವುದು.

ಈ ವಿಷಯವನ್ನು ವಿಭಿನ್ನವಾಗಿ ಹೇಳುವುದಾದರೆ,ಅಭಿವೃದ್ಧಿ ಉದ್ದೇಶಗಳಿಗಾಗಿ ಸ್ವಿಸ್ ಬ್ಯಾಂಕಿನ ಕಪ್ಪು ಹಣವನ್ನು ವಾಪಸ್ಸು ತರಲು

ಸರಕಾರದ ಭಾಗದಿಂದ ಕೇವಲ ರಾಜಕೀಯ ಧೈರ್ಯ ಮತ್ತು ಮನೋಬಲ ಮಾತ್ರ ಸಾಲದು, ನವ ಉದಾರೀಕರಣವನ್ನು ಹಿಮ್ಮೆಟ್ಟಿಸುವ ನಿರ್ಣಾಯಕ ಉದ್ದೇಶ ಕೂಡ ಇರಬೇಕು. ಭಾಬಾ ರಾಮದೇವ್ ಮತ್ತು ಅವನ ಬೆಂಬಲಿಗರು ಕೇವಲ ಕಪ್ಪು ಹಣವನ್ನು ವಾಪಸ್ಸು ತರುವದರ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ, ಬದಲಾಗಿ ಮರಳಿತಂದ ನಂತರ ನವ ಉದಾರೀಕರಣವನ್ನು ಹಿಮ್ಮೆಟ್ಟಿಸುವ ಉದ್ದೇಶಗಳನ್ನೊಳಗೊಂಡ ಅಭಿವೃದ್ದಿ ಪೂರ್ಣ ಪೂರಕ ಕ್ರಮಗಳ ಬಗ್ಗೆ ಎಂದೂ ಚರ್ಚಿಸಿಲ್ಲ. ಖಚಿತವಾಗಿ ಹೇಳುವದಾದರೆ, ಕಪ್ಪು ಹಣವನ್ನು ವಾಪಸ್ಸು ತರಲು ಒಂದು ಪ್ರಭುತ್ವದ ಹಂತದ ಕ್ರಿಯಾಶೀಲತೆ ಅಗತ್ಯವಿರುತ್ತದೆ, ಅದನ್ನು ಅಂತರ ರಾಷ್ಟ್ರೀಯ ಹಣಕಾಸು ಬಂಡವಾಳ ಗಮನಿಸುತ್ತಿರುತ್ತದೆಯಾದರೂ, ಮರಳಿತಂದ ಹಣವನ್ನು ಸರಿಯಾಗಿ ಉಪಯೋಗಿಸಲು ಇನ್ನೂ ಹೆಚ್ಚಿನ ಕ್ರಮಗಳ ಅವಶ್ಯಕತೆ ಇರುತ್ತದೆ. ನಿಶ್ಚಿತವಾಗಿ, ಯಾರೆಲ್ಲ ಕಪ್ಪು ಹಣವನ್ನು ಮುಟ್ಟುಗೋಲು ಮಾಡುವುದರ ಬಗ್ಗೆ ಗಂಭೀರವಾಗಿ ಮಾತನಾಡುತ್ತಿದ್ದಾರೋ ಅವರೆಲ್ಲ ಅದರ ಪೂರಕ ಕ್ರಮಗಳ ಬಗ್ಗೆಯೂ ಚರ್ಚಿಸಬೇಕು, ಅಲ್ಲದೇ ಹೊದರೆ ಈ ಬೇಡಿಕೆ ಕೇವಲ ಬಿಸಿಗಾಳಿಯಾಗಿಯೇ ಉಳಿಯತ್ತದೆ.

ಸರಕಾರದ ಸಂಪನ್ಮೂಲ ಸಂಚಲನೆ ಕೇವಲ ಹಣದ ಸಂಚಯವನ್ನು ಮಾತ್ರ ಒಳಗೊಂಡಿರುವದಿಲ್ಲವಾದ್ದರಿಂದ, ಅದರ ಅಭಿವೃದ್ಧಿ ವೆಚ್ಚ ಆಕಸ್ಮಿಕವಾಗಿ ಹಣದ ಕೊರತೆಯಿಂದಾಗಿ ನಿಂತು ಹೋಗುವುದಿಲ್ಲ. ಹಣವನ್ನು ತೆರಿಗೆಯ ಮೂಲಕ ಎತ್ತಿದಾಗ ಸಂಪನ್ಮೂಲವನ್ನು ನೈಜ ಪ್ರಕ್ರಿಯೆಯಲ್ಲಿ ಬಿಡುಗಡೆಗೊಳಿಸಲಾಗಿದೆ ಎಂದು ಊಹಿಸಲಾಗುತ್ತದೆ. ನಂತರ ಅಂತಹ ಸಂಪನ್ಮೂಲಗಳ ಮೇಲೆ ಸರಕಾರ ಹಿಡಿತ ಸಾಧಿಸಿ ಆಮೇಲೆ ತನ್ನ ಮನಬಂದ ಹಾಗೆ ಬಳಸುತ್ತದೆ. ವಾಸ್ತವವಾಗಿ ಈ ನೈಜ ಸಂಪನ್ಮೂಲಗಳು ನಿಜವಾದ ವಸ್ತು, 'ಹಣ' ಎಂಬುವುದಲ್ಲ. ಹಾಗಾಗಿ ಪೋಲಂಡ್ ನ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕಲ್ ಕೆಲ್ಕಿ "ಸಂಪನ್ಮೂಲ ಸಂಚಯದಲ್ಲಿ ಅಥವಾ ಚಲಾವಣೆಯಲ್ಲಿ ಆರ್ಥಿಕ ಸಮಸ್ಯೆ ಎಂದರೆ ಬೇರೇನೂ ಅಲ್ಲ, ಆಹಾರಧಾನ್ಯಗಳ ಉತ್ಪಾದನೆಯನ್ನು ಏರಿಸುವಲ್ಲಿನ ನೈಜ ಸಮಸ್ಯೆ" ಎಂದು ಹೇಳುತ್ತಾರೆ.

ನಾವು ಸ್ವಿಸ್ ಬ್ಯಾಂಕಿನ ಕಪ್ಪು ಹಣವನ್ನು ವಾಪಸ್ಸು ತರುವುದರ ಬಗ್ಗೆ ಮಾತನಾಡುತ್ತಿರುವಾಗ, ಹಣ ಎಂಬುವುದು ಒಂದು ನೈಜ ಸಂಪನ್ಮೂಲ ಎಂಬಂತೆ ನೋಡುವ ತಪ್ಪು ಗ್ರಹಿಕೆಗೆ ಬೀಳಬಾರದು. ಅದು ನೈಜ ಸಂಪನ್ಮೂಲಗಳ ಮೇಲೆ ಹಿಡಿತ ಹೊಂದಿರುವದು ನಿಜವಾದರೂ, ಆಹಾರಧಾನ್ಯಗಳಂತಹ ಸರಕುಗಳ ಮೇಲೆ ಈ ಹಿಡಿತ ಸಾಧನೆಯನ್ನು ವರ್ಗಾಯಿಸುವಾಗ ಸಮಸ್ಯೆ ಎದುರಿಸಬೇಕಾಗಿ ಬರುವುದು, ಹಾಗಾಗಿ ಆಹಾರಧಾನ್ಯಗಳ ನಿರ್ವಹಣೆಯಲ್ಲಿ ಪ್ರಭುತ್ವದ ಕ್ರಿಯಾಶೀಲತೆಯು ಅವಶ್ಯಕ ಹಾಗೂ ಅದು ಮುಖ್ಯ ಎನಿಸುತ್ತದೆ. ಆಹಾರಧಾನ್ಯಗಳ ನಿರ್ವಹಣೆಯನ್ನು ಅಂತಹ ಒಂದು ಪ್ರಭುತ್ವದಡಿಯಲ್ಲಿ ತರುವುದಕ್ಕೆ ನವ-ಉದಾರೀಕರಣ ನಿಜವಾದ ಅಡಚಣೆಯಾಗಿದೆ. ಒಂದು ವೇಳೆ ಸ್ವಿಸ್ ಬ್ಯಾಂಕಿನ ಹಣ ಏನೂ ಪ್ರತಿಫಲ ಕೊಡದಿದ್ದರೂ, ನಾವು ಇಂತಹ ನವ-ಉದಾರವಾದೀ ನಿರ್ಬಂಧಗಳಿಂದ ಹೊರಬಂದರೆ, ಕೊರತೆ ಹಣಕಾಸೂ ಸಹ ಇಂತಹ ವೆಚ್ಚಕ್ಕೆ ಹಣ ಹೊಂದಿಸಬಹುದು.

ತೆರಿಗೆ ವಂಚಕರು, ಕಪ್ಪು ಹಣ ಹೊಂದಿರುವವರು ಮುಂತಾದವರ ಕಾನೂನು ಬಾಹೀರವಾದ ಆಸ್ತಿ ಮುಟ್ಟುಗೋಲು ಮಾಡುವದರ ಮೂಲಕ ಶಿಕ್ಷಿಸಬೇಕೆಂಬುದೇನೋ ಖಂಡಿತ, ಆದರೆ ಸಂಪತ್ತನ್ನು ಸರಿಯಾಗಿ ಬಳಕೆ ಮಾಡಲು ನವ-ಉದಾರವಾದೀ ಅಡ್ಡಗೋಡೆಯನ್ನು ಮುರಿಯುವಂತಹ ಆರ್ಥಿಕ ಪ್ರಭುತ್ವದ ಅವಶ್ಯಕತೆ ಇದೆ.

ಕವನ

ಕಳ್ಳಮಾಲು

ತಿರುಪತಿ ತಿಮ್ಮಪ್ಪನಿಗೆ
ಹಾಕಿದ ನಲವತ್ತೈದು
ಕೋಟಿ ರೂಪಾಯಿಗಳ
ಟೋಪಿಯಲ್ಲಿ

ಗಣಿ ಧಣಿಗಳ
ಹೊಸ ಹೊಸ ಕಾರುಗಳಲ್ಲಿ
ಏ.ಸಿ. ಬಂಗಲೆಗಳಲ್ಲಿ
ರೆಸಾರ್ಟ್‌ಗಳಲ್ಲಿ....

ತಮ್ಮ ತಮ್ಮ ಊರಿನ
ಬೆಟ್ಟ-ಗುಡ್ಡ-ಕಾಡುಗಳನ್ನು
ಕಂಡೆವೆಂದು
ಸಂಡೂರಿನ ಹಳ್ಳಿಗಾಡಿನ
ಜನರು ಹೇಳಿಕೊಂಡು
ತಿರುಗುತ್ತಿದ್ದಾರೆ.

– **ಬಿ. ಶ್ರೀನಿವಾಸ್,**
ಹಾವೇರಿ

ದಾಸಿಮಯ್ಯ ಮತ್ತು ಬೆಕ್ಕು

ಕರ್ನಾಟಕ ರಾಜ್ಯ ಕಂಡು ಕೇಳರಿಯದ ಬೃಹ್ಮಾಂಡ ಭ್ರಷ್ಟಾಚಾರ ನಡೆಸಿರುವ ರಾಜ್ಯ ಬಿಜೆಪಿ ಸರ್ಕಾರವು ತನ್ನ ಹೊಲಸು ಹಗರಣಗಳನ್ನು ಮರೆಮಾಚಲು ಜಾತಿಯನ್ನು ತನ್ನ ಗುರಾಣಿಯಾಗಿ ಬಳಸುತ್ತಿದೆ. ಮಠ-ಮಂದಿರಗಳಿಗೆ ಸರ್ಕಾರದ ಖಜಾನೆಯಿಂದ ಕೋಟಿ ಕೋಟಿ ರೂಪಾಯಿಗಳನ್ನು ಧಾರೆ ಹರಿಸುತ್ತಿರುವ ಬಿಜೆಪಿಗರು ಭಕ್ತಿಯನ್ನು ನಟಿಸುತ್ತಿದ್ದಾರೆ. ಸಮಾಜದಲ್ಲಿ ತಮ್ಮದು ನೈತಿಕತೆ ಕಾಪಾಡುವ ಹಾಗೂ ಧಾರ್ಮಿಕ ಹೊಣೆಗಾರಿಕೆ ನಿರ್ವಹಿಸುವ ಪಾತ್ರ ಎನ್ನುವ ಹಾಗೂ ತಮ್ಮದು ವಚನ ಚಳುವಳಿ ಪರಂಪರೆ ಎಂದು ಡಂಗೂರ ಬಾರಿಸುವ ಇಂತಹ ಮಠಗಳು-ಮಠಾಧೀಶರು ಜೈಲುವಾಸಿ ಕ್ರಿಮಿನಲ್ಗಳ ಬೆಂಬಲಕ್ಕೆ ನಿಂತಿರುವ ಅಸಹ್ಯಕರವಾದುದು. ಇಂತಹ ಶಕ್ತಿಗಳನ್ನು ಕಂಡೆ ಕನ್ನಡದ ಖ್ಯಾತ ಕವಿ ಸು. ರಂ. ಎಕ್ಕುಂಡಿಯವರು ಈ ಕವನ ರಚಿಸಿದಂತಿದೆ. ಹೌದಲ್ಲವೇ ನೋಡಿ, ಭಕ್ತಿಯೆಂದರೇನು ? ನೈತಿಕತೆ ಎಂದರೇನು ?

ಒಂದು ದಿನ ಮುಂಜಾವು ಕೋಳಿ ಕೂಗಿತು. ಬಿಲ್ವ
ಮಠದಲ್ಲಿ ಶರಣರೆ ಏಳಿರೆಂದು
ಸೂರ್ಯ ಮೂಡಿದನು ಬೆಟ್ಟವು ಹಸಿರು ಹಣೆಯಲ್ಲಿ
ಬಂಗಾರ ಭಸ್ಮವನು ಬಳಿಯಿತೆಂದು

ಶರಣರೆದ್ದರು ಹಕ್ಕಿಗಳ ಹಾಗೆ ಚಿಲಿಪಿಲಿಸಿ
ಮಠದ ಬಾವಿಯ ಬಳಿಗೆ ಮೀಯಲೆಂದು
ಆಗಾಗ ಬಾರಿಸುವ ಗಂಟೆ ಗದ್ದುಗೆಯ ಬಳಿ
ಧೂಪವನು ಹಾಕಿದರು ಜನರು ತಂದು.

ಎಣ್ಣೆ ಹಾಕಿದರು ಕೆಲವರು ತೂಗುದೀಪಕ್ಕೆ
ಬಿಲ್ವದೆಲೆ ಹೂವುಗಳು ಸುರಿದು ನಿಂದು
ಮತ್ತೆ ಕೆಲವರು ಕುಳಿತು ಗುಂಪಾಗಿ ಹಾಡಿದರು.
ಹಾಡುಗಳೇ ಶಿವಗೆ ಹೂವಾಗಲೆಂದು

ಕಾಯಕವೇ ಶಿವಪೂಜೆ ಎಂದು ನಂಬಿದ ಭಕ್ತ
ದಾಸಿಮಯ್ಯನ ಪೂಜೆಗಿಲ್ಲ ಗಡುವು
ಹಗಲಿರುಳು ಹೊಯ್ದಿರುವ ಮಗ್ಗದಲಿ ಮುಳುಗಿ
ಗದ್ದುಗೆಯ ಕಾಣಲೂ ಇಲ್ಲ ಬಿಡುವು

'ಮಠವಿಲ್ಲ, ಗುರುವಿಲ್ಲ ಇವನೆಂಥ ಭಕ್ತನೊ
ತೆರೆದೀತೆ ಕೈಲಾಸ ಇವಗೆ ಕದವ?'
ಪರರೇನು ಬಲ್ಲರು ಎಳೆ ಎಳೆಗು ಹೆಣೆದಿದ್ದ
ದಾಸಿಮಯ್ಯನ ಧ್ಯಾನದೆಳೆಯ ಹದವ?

'ಕರ್ಪೂರವ ಸುಡಲಿಲ್ಲ ಮಠಕೆ ಕಾಲಿಡಲಿಲ್ಲ
ತೆರೆದಾನೆ ಶಿವನಂದಿ ಇವಗೆ ಕದವ?
ಪರರೇನು ಬಲ್ಲರು 'ರಾಮನಾಥಾ' ಎಂಬ
ಧ್ಯಾನ ಲಡಿನೂಲು ನೀಡಿರುವ ಮುದವ?

ಆರೆಂಟು ವರ್ಷಗಳ ಅಪರೂಪ ನೂಲೆಳೆದು
ದುಗ್ಗಲೆಯು ನೀಡಿರುವ ಲಡಿಯ ಹೊಯ್ದು
ಮನವೆಂಬ ಮಗ್ಗದಲಿ, ನೆನಹೆಂಬ ಎಳೆಬಿಟ್ಟು
'ರಾಮನಾಥಾ' ಎಂಬ ಬಟ್ಟೆ ನೆಯ್ದು

ಲಾಳದಲಿ ಪುಟಿದಂತರಾಳದಲಿ ಹುದುಗಿತ್ತು
'ರಾಮನಾಥಾ' ಎಂಬ ಗಂಟೆಗೆಜ್ಜೆ
ದುಗ್ಗಲೆಯ ಶ್ರಮದ ಸುಂದರ ನೂಲಿನಲಿ ನೆಯ್ದು
ಬಟ್ಟೆಯಲಿ ಮೂಡಿದವು ಶಿವನ ಹೆಜ್ಜೆ
ಒಂದು ದಿನ ದಾಸಿಮಯ್ಯ ಮಠಕೆ ಬಂದಿದ್ದ
ಕೈಮುಗಿದು ಕೂತಿರಲು ಅವನ ಕಂಡು
'ಕಾಣಿಭೋ ವಿಸ್ಮಯ ಕಾಣಿಭೋ' ಗಲಿಬಿಲಿಸಿ
ಕಿವಿಕಿವಿಯೊಳಾಡಿದರು ಬೆರಗುಗೊಂಡು

'ಏನು ಬಂದಿರಿ ದಾಸಿಮಯ್ಯಗಳೇ? ಹದುಳವೆ?
ನೆನಪಾಯಿತೆ ಬಿಲ್ವಮಠವು ನಿಮಗೆ?
ಕುಹಕದಲಿ ಕೇಳಿರಲು ಸುಮ್ಮನೆ ಕುಳಿತಿದ್ದ
ದಾಸಿಮಯ್ಯನು ಜನರ ನಗೆಯ ನಡುವೆ


ಗದ್ದುಗೆಯ ಬಳಿಗೊಂದು ಬೆಕ್ಕು ಕೂತಿತ್ತು
ಧ್ಯಾನದಲಿ ಎಂಬಂತೆ ಕಣ್ಣು ಮುಚ್ಚಿ
ಬಿಲದಿಂದ ಇಲಿಯೊಂದು ಓಡಿರಲು ಛಂಗನೆ
ಹಾರಿತ್ತು ಹಿಡಿದು ಆ ಇಲಿಯ ಕಚ್ಚಿ

ದಾಸಿಮಯ್ಯನು ನುಡಿದ ಅಯ್ಯಗಳೆ ಕಂಡಿರೇ
ಬರಿಸಟುಗನ ಭಕ್ತಿಯಾಟ ಇಂದು
ಕಣ್ ಮುಚ್ಚಿದವರೆಲ್ಲ ಧ್ಯಾನ ಮಾಡುವುದಿಲ್ಲ
ಯಾವುದೋ 'ಇಲಿಗೆ' ಕಾದಿರುವರೆಂದು

ಬಿಲ್ವಮಠ ಈಗೀಗ ಬಿಲದ ಮಠವಾಗಿಹುದು
ಯಾರಲ್ಲಿಯೂ ಇಲ್ಲ, ಶಿವನ ಹುಚ್ಚು
ಸಿಕ್ಕಿದ್ದು ಸಿಕ್ಕಷ್ಟು ಮುಕ್ಕಿ ಕಣ್ಮರೆಯಾಗಿ
ಬದುಕಿರುವ ಇಲಿಗಳೇ ಇಲ್ಲಿ ಹೆಚ್ಚು

–ಸು.ರಂ.ಎಕ್ಕುಂಡಿ





ನಮ್ಮ ಜನಗಳಿಗೆ ಒಂದು ಉತ್ತಮ ಬದುಕನ್ನು ಒದಗಿಸುವ ಸುಧಾರಣೆಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು, 'ಜೆನ್ ನೆಕ್ಸ್ಟ್'(ಮುಂದಿನ ತಲೆಮಾರಿನ) ಎಂದು ಷೋಕಿಯ ಹೆಸರಿಟ್ಟಿರುವ ಸುಧಾರಣೆಗಳನ್ನು ತರಬೇಕೆಂದು ಮತ್ತೆ ಹುಯಿಲೆಬ್ಬಿಸಲಾಗುತ್ತಿದೆ.. ಆದರೆ ಇವು ಅಸಮಾನತೆಗಳನ್ನು ತೀವ್ರವಾಗಿ ಹೆಚ್ಚಿಸುತ್ತಿರುವ ಮತ್ತು ನಮ್ಮ ದೇಶದ ಸಂಪನ್ಮೂಲಗಳ ಲೂಟಿಗೆ ಪ್ರೋತ್ಸಾಹ ನೀಡುತ್ತಿರುವ ಸುಧಾರಣೆಗಳು ಎಂದು ಈ ಎರಡು ದಶಕಗಳಲ್ಲಿ ಸಾಬೀತಾಗಿದೆ.

ನವ-ಉದಾರವಾದಿ ದಿಕ್ಕು-ದಾರಿಯ ಎರಡು ದಶಕಗಳ ಸಾಧನೆ

ಎರಡು ಭಾರತಗಳ ಸೃಷ್ಟಿ ಮತ್ತು ಬೃಹತ್ ಹಗರಣಗಳು

'ಹೊಳೆಯುತ್ತಿರುವ ಭಾರತ'ದ ಪ್ರಕಾಶಕ್ಕೂ 'ನರಳುತ್ತಿರುವ ಭಾರತ'ದ ಕಳಾಹೀನತೆಗೂ ನೇರವಾದ ಸಂಬಂಧವಿದೆ.

ಸೀತಾರಾಮ ಯೆಚೂರಿ
ಸಂಪಾದಕರು, 'ಪೀಪಲ್ಸ್ ಡೆಮಾಕ್ರಸಿ'

ಎಷ್ಟೊಂದು ಜಿಗುಟು ಈ ನವ-ಉದಾರವಾದದ ಪರಾಕು ಹಾಡುವ ಮಂದಿ! ತಮ್ಮ ಸ್ವಂತ ಅನುಭವಗಳೂ ಅವರನ್ನು ಅಲುಗಾಡಿಸಲಾರವು. ಅನುಭವಗಳಿಂದ ಕಲಿಯಲಂತೂ ಅವರು ನಿರಾಕರಿಸುತ್ತಾರೆ. ಜುಲೈ 24, 1991ರಂದು ಆಗ ಹಣಕಾಸು ಮಂತ್ರಿಗಳಾಗಿದ್ದ ಡಾ.ಮನಮೋಹನ ಸಿಂಗ್ ಮಂಡಿಸಿದ ಮೊದಲ ಬಜೆಟಿನ ಇಪ್ಪತ್ತನೇ ವಾರ್ಷಿಕಾಚರಣೆಯ ಸಂದರ್ಭದಲ್ಲಿ, ಈ ಮಂದಿ ಇನ್ನಷ್ಟು ಸುಧಾರಣೆಗಳು, ಅದರಲ್ಲಿಯೂ ಹಣಕಾಸು ಉದಾರೀಕರಣ ಬೇಕಾಗಿದೆಯೆಂದು ಹುಯಿಲೆಬ್ಬಿಸಿದ್ದಾರೆ. ಯುಪಿಎ-1 ಸರಕಾರ ಇಂತಹ ಸುಧಾರಣೆಗಳನ್ನು ಮುಂದುವರೆಸ ದಂತೆ ಎಡಶಕ್ತಿಗಳು ತಡೆಯದಿದ್ದಿದ್ದರೆ ಇತ್ತೀಚಿನ ಜಾಗತಿಕ ಹಣಕಾಸು ಬಿಕ್ಕಟ್ಟು ಮತ್ತು ಹಿಂಜರಿತದಲ್ಲಿ ಭಾರತ ವಿಧ್ವಂಸವನ್ನೇ ಎದುರಿಸುತ್ತಿತ್ತು ಎಂಬುದನ್ನು ಈ ಮಂದಿ ಮರೆಯು ವಂತೆ ಕಾಣುತ್ತದೆ, ಇಲ್ಲ, ಅವರು ಬೇಕೆಂದೇ ಅದನ್ನು ಉಪೇಕ್ಷಿಸುತ್ತಾರೆ.

ಇನ್ನು, ಬಹಳಷ್ಟು ಹಾಡಿ-ಹೊಗಳುವ ಆ ಬಜೆಟ್ ಭಾಷಣದ ಬಗ್ಗೆ ನೋಡೋಣ. ನವ-ಉದಾರವಾದಿ ಆರ್ಥಿಕ ದಿಕ್ಪಥದ ಹರಿಕಾರ ಈ ಭಾಷಣ ಮಾತ್ರವೇ ಅಲ್ಲ, ಎಂಬುದನ್ನು ಅರಿಯಬೇಕು. ಈ ಬಜೆಟ್ ಮಂಡನೆಯ ಸ್ವಲ್ಪವೇ ಮೊದಲು ಭಾರತದ ರೂಪಾಯಿಯನ್ನು ಎರಡು ಬಾರಿ ಅಪಮೌಲ್ಯಗೊಳಿಸಲಾಗಿತ್ತು. ಆಗ ವಿದೇಶಿ ವಿನಿಮಯ ಬಿಕ್ಕಟ್ಟನ್ನು ತಂದದ್ದು ಭಾರತವನ್ನು ಇಪ್ಪತ್ತೊಂದನೇ ಶತಮಾನಕ್ಕೆ ಒಯ್ಯುವ ರಾಜೀವ ಗಾಂಧಿಯ ಕರೆಯಿಂದಾಗಿ ಸಂಭವಿಸಿದ ಸಿಕ್ಕಾಪಟ್ಟೆ

ಆಮದು ಹೆಚ್ಚಳ. ಇದೇ ಸುಧಾರಣೆಗಳನ್ನು ಆರಂಭಿಸಲು ನೆಪವೂ ಆಯಿತು. 1985 ರಿಂದ 1989ರ ನಡುವೆ ರಫ್ತು ಪ್ರೋತ್ಸಾಹಕ್ಕಾಗಿಯೆಂದೇ ಇದ್ದ 350ಕ್ಕೂ ಹೆಚ್ಚು ಭಾರತೀಯ ಕಾರ್ಪೊರೇಟುಗಳು 5,751ಕೋಟಿ ರೂ.ಗಳ ನಿವ್ವಳ ನಷ್ಟವನ್ನು ದಾಖಲಿಸಿದ್ದು ಇದಕ್ಕೆ ಸಾಕ್ಷಿ. ಆಮದಿನಲ್ಲಿ ಕಂಡ ಇಂತಹ ಭಾರೀ ನೆಗೆತದಿಂದಾಗಿಯೇ ಭಾರತದ ವಿದೇಶಿ ಸಾಲ ವಿಪರೀತವಾಗಿ ಹೆಚ್ಚಿತು. 1981 ಮತ್ತು 1991ರ ನಡುವೆ, ನಮ್ಮ ವಿದೇಶಿ ಸಾಲ 28,000 ಕೋಟಿಯಿಂದ 1,00,425 ಕೋಟಿ ರೂ.ಗಳಿಗೆ ಏರಿತು.

ಆಳಗೊಂಡ ಕಂದರ

ಈಗ, ಎರಡು ದಶಕಗಳ ನಂತರ, ಆ ಭಾವಾತಿರೇಕಕ್ಕೆ ಪ್ರತಿಯಾಗಿ ಒಂದು ಸಂಗತಿಯಂತೂ ಶತಸ್ಸಿದ್ಧ. ನಾವು ಎರಡು ಭಾರತಗಳನ್ನು ಸೃಷಿಸುವಲ್ಲಿ ಸಫಲರಾಗಿದ್ದೇವೆ. ಪ್ರತಿಯೊಬ್ಬರ ಜೀವನಮಟ್ಟ ಗಮನಾರ್ಹವಾಗಿ ಉತ್ತಮಗೊಂಡಿದ್ದರೆ ಬೇರೆ ಮಾತು. ಆಗ ಆದಾಯಗಳಲ್ಲಿ ಹೆಚ್ಚುತ್ತಿರುವ ಅಸಮಾನತೆಗಳನ್ನು ಸಾಪೇಕ್ಷ ಬಡತನದ ಸೂಚ್ಯಂಕ ಎನ್ನಬಹುದಾಗಿತ್ತು. ಆದರೆ, ವ್ಯಾಪಕ ಕೃಷಿ ಸಂಕಟ, ರೈತರ ಆತ್ಮಹತ್ಯೆಗಳು, ಆಹಾರಧಾನ್ಯಗಳ, ದ್ವಿದಳ ಧಾನ್ಯಗಳ ತಲಾ ಲಭ್ಯತೆ ತೀವ್ರವಾಗಿ ಇಳಿದಿರುವುದು–ಇವೆಲ್ಲ ನಮ್ಮ ಕೆಲವು ಜನವಿಭಾಗಗಳ ನಡುವೆ ಬಡತನ ನಿಚ್ಚಳವಾಗಿ ಹೆಚ್ಚಿರುವುದನ್ನು ತೋರಿಸುತ್ತವೆ. ಹೀಗೆ, 'ಹೊಳೆಯುತ್ತಿರುವ ಭಾರತ'ದ ಪ್ರಕಾಶಕ್ಕೂ 'ನರಳುತ್ತಿರುವ ಭಾರತ'ದ ಕಳಾಹೀನತೆಗೂ ನೇರವಾದ ಸಂಬಂಧವಿದೆ.

ಉದಾರೀಕರಣದ ಪಂಡಿತರು ಗಮನಿಸಬೇಕಾದ ಸಂಗತಿಯೊಂದಿದೆ. ನವ-ಉದಾರ ವಾದದ ಅಂತರ್‍ರಾಷ್ಟ್ರೀಯ ಮಧ್ಯವರ್ತಿಯಾದ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ–ಐಎಂಎಫ್ 2010ರಲ್ಲಿ ಒಂದು ಅಧ್ಯಯನ ನಡೆಸಿತ್ತು. ತಮಾಷೆಯೆಂದರೆ ಅದರ ಶಿರೋನಾಮೆ 'ಭಾರತ ಎಲ್ಲ ದೋಣಿಗಳನ್ನು ಮೇಲೆತ್ತುವ ನೀರುಬ್ಬರ' ಎಂದಿತ್ತು. ಈ ಪ್ರಬಂಧ ಆದಾಯ ಅಸಮಾನತೆಯ ಸೂಚ್ಯಂಕವೆಂದು ಸಾರ್ವತ್ರಿಕವಾಗಿ ಒಪ್ಪುವ 'ಗಿನಿ ಸಹಗುಣಕ'ವನ್ನು ಅಳೆಯುತ್ತದೆ. ಇದು, 21ನೇ ಶತಮಾನದ ಮೊದಲ ದಶಕದಲ್ಲಿ, ಇಡೀ ದೇಶವನ್ನು ಒಟ್ಟಾಗಿ ಪರಿಗಣಿಸಿದಾಗ 0.303 ರಿಂದ 0.325 ಕ್ಕೇರಿತು. ನಗರ ಪ್ರದೇಶಗಳಲ್ಲಿ ಇದು ಇನ್ನೂ ಕೆಟ್ಟದಾಗಿತ್ತು, 0.343ರಿಂದ 0.378 ಕ್ಕೇರಿತ್ತು. ಎರಡು ಭಾರತಗಳ ನಡುವಿನ ಕಂದರ ಹೆಚ್ಚುತ್ತಿರುವುದನ್ನು ತೋರಿಸಿರುವ ಇದಕ್ಕಿಂತ ದೊಡ್ಡ ತೀರ್ಪು ಬೇರೇನೂ ಇರಲಾರದು.

ಟೊಳ್ಳು ಕಾಳಜಿಗಳು

ಡಾ.ಮನಮೋಹನ ಸಿಂಗ್‌ರನ್ನು ಈಗಲೂ ಹಾಡಿ ಹೊಗಳಲಾಗುತ್ತಿದೆ. ಆದರೆ, ದುರದೃಷ್ಟವಶಾತ್ ಅವರನ್ನು ಹಣಕಾಸು ಮಂತ್ರಿಗಳಾಗಿ ಆರಿಸಿದ ಆಗಿನ ಪ್ರಧಾನಮಂತ್ರಿಗಳನ್ನು ಮಾತ್ರ ಯಾರೂ ಸ್ಮರಿಸಿಕೊಳ್ಳುವುದಿಲ್ಲ.

ವಾಸ್ತವ ಸಂಗತಿಯೆಂದರೆ, ಪಿ ವಿ ನರಸಿಂಹರಾವ್ ಅವರು ತನ್ನ ಸರಕಾರ ಕೊನೆಯ ವರ್ಷವನ್ನು ಪ್ರವೇಶಿಸುತ್ತಿದ್ದಂತೆ, ಈ ಸುಧಾರಣಾ ಪ್ರಕ್ರಿಯೆ ರಾಷ್ಟ್ರೀಯ ನಿರ್ಧಾರದ ಮೂಲಕ ಜನತೆಗೆ ಆಹಾರ, ಉದ್ಯೋಗ, ಆಶ್ರಯ, ಶಿಕ್ಷಣ, ಆರೋಗ್ಯ ಮತ್ತು ಮಾಹಿತಿಯ ಮೂಲಭೂತ ಹಕ್ಕುಗಳ ಭರವಸೆ ನೀಡುವುದಿಲ್ಲ ಎಂದು ಮುಚ್ಚುಮರೆಯಿಲ್ಲದೆ ಒಪ್ಪಿಕೊಂಡಿದ್ದರು. ಮಾರ್ಚ್ 1995ರಲ್ಲಿ ಕೊಪನ್‌ಹೇಗನ್‌ನಲ್ಲಿ 'ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗ'ದಲ್ಲಿ ಮಾತನಾಡುತ್ತಾ ಅವರು ಹೇಳಿದ ಮಾತುಗಳನ್ನು ನೋಡಿ: "ಜಗತ್ತು ಶೀತಲ ಸಮರದ ನಿಲುವುಗಳಿಂದ ಮುಕ್ತವಾಗುವ ಹೋರಾಟದಲ್ಲಿ ಇತಿಹಾಸದ ಕವಲು ದಾರಿಯಲ್ಲಿ ನಿಂತಿದ್ದರೆ, ಭಾರತದಲ್ಲಿ ನಾವು ಕೂಡ ಕವಲುದಾರಿಯಲ್ಲಿ ನಿಂತಿದ್ದೇವೆ, ಏಕೆಂದರೆ ಪ್ರಭುತ್ವವನ್ನು ಮಾತ್ರ ಕೇಂದ್ರದಲ್ಲಿರಿಸಿಕೊಂಡ ನಿರ್ದಿಷ್ಟ ಅಭಿವೃದ್ಧಿ ಮಾದರಿಗಳು ಸಫಲವಾಗಿಲ್ಲ ಎಂದು ನಮಗೆ ಗೊತ್ತಿದೆ. ಈಗ ಉಯ್ಯಾಲೆ ಇನ್ನೊಂದು ತುದಿಗೆ ಹೋಗಿದೆ, ಅಂದರೆ, ಅಬಾಧಿತ ಮಾರುಕಟ್ಟೆಯನ್ನು ಮಾತ್ರ ಕೇಂದ್ರದಲ್ಲಿರಿಸುವ ಪ್ರವೃತ್ತಿ ಇದೆ. ಹೊಸ ಉತ್ಸಾಹ ದೇಶಗಳಲ್ಲಿ ಹರಿದಾಡುತ್ತಿದ್ದರೂ ನಿಜವಾಗಿಯೂ ಬೇಕಾಗಿರುವುದು ಮಾರುಕಟ್ಟೆ ಮತ್ತು ಬೇರೇನೋ ಎಂಬ ಕಸಿವಿಸಿಯ ಭಾವನೆ ಬರದಿರದು. ಇಲ್ಲವಾದರೆ ಮಾರುಕಟ್ಟೆಯ ಅಪರಿಪೂರ್ಣತೆ ಯಿಂದಾಗಿ ಬಡವರು ಮತ್ತು ದುರ್ಬಲರು ಹೊರಗುಳಿಯುತ್ತಾರೆ. ಇವೆರಡೂ ಜನತೆಯನ್ನು ಕೇಂದ್ರದಲ್ಲಿಡಲು ವಿಫಲ ವಾಗುವುದರಿಂದಲೇ ಅಸಮರ್ಪಕ ವಾಗಿವೆ."

ಮುಂದುವರೆದು ಅವರು, "ವಿಶಾಲ ಅರ್ಥದಲ್ಲಿ ಅಭಿವೃದ್ಧಿ ಸಾಧ್ಯವಾಗಬೇಕಾದರೆ ಜನತೆಯ ಹಕ್ಕುಗಳೇ ಅದಕ್ಕೆ ಆಧಾರ, ಇದು ಪ್ರಭುತ್ವ–ಕೇಂದ್ರಿತ ನಿಲುವು ಮತ್ತು ಮಾರುಕಟ್ಟೆ–ಕೇಂದ್ರಿತ ನಿಲುವು ಇವೆರಡರ ವಿಕೃತಿಗಳನ್ನು ಕೂಡ ಸರಿಪಡಿಸುತ್ತದೆ, ಇಂತಹ ಸಾಮರಸ್ಯವನ್ನು ಬಡತನ ನಿರ್ಮೂಲನಕ್ಕೆ ಒಂದು ಸಾಧನವಾಗಿ ಬಳಸಲು ಪ್ರಯತ್ನಿಸಬೇಕಾಗಿದೆ" ಎಂದು ಹೇಳಿದರು.

ನವ–ಉದಾರವಾದದ ವ್ಯವಸ್ಥೆಯ ಅಡಿಯಲ್ಲಿ ಜನತೆಯ ಇಂತಹ ಆರ್ಥಿಕ, ಸಾಮಾಜಿಕ ಸಬಲೀಕರಣ ಸಾಧ್ಯವೇ? ಈ ದಿಕ್ಪಥದಿಂದ ಸಂಪೂರ್ಣ ದೂರ ಸರಿದಾಗ ಮಾತ್ರವೇ 'ಎಲ್ಲರನ್ನು ಒಳಗೊಳ್ಳುವ' ಗುರಿಯ ಸಾಧನೆ ಸಾಧ್ಯ. ನರಸಿಂಹರಾವ್ ಇದನ್ನೇ ಒಪ್ಪಿರಲಿಲ್ಲ. ಈಮೂಲಕ ಅವರು



ವ್ಯಕ್ತಪಡಿಸಿದ ಕಾಳಜಿಗಳು ಟೊಳ್ಳು ಪದಗಳಷ್ಟೇ, 1996ರ ಸಾರ್ವತ್ರಿಕ ಚುನಾವಣೆಗಳ ಮುನ್ನ ಜನಗಳನ್ನು ದಾರಿತಪ್ಪಿಸುವ ಪ್ರಯತ್ನಗಳು ಎಂಬುದು ದೃಢಪಡುತ್ತದೆ.

ಈ ಗುರಿಗಳು ಈಡೇರಬೇಕಾದರೆ ಒಂದು ಹೊಸ ರೀತಿಯ ಸುಧಾರಣೆಗಳು ಅಗತ್ಯ, ಇದು ನಮ್ಮ ಜನತೆಗೆ ಆಹಾರ ಭದ್ರತೆ, ಆರೋಗ್ಯ ಮತ್ತು ಶಿಕ್ಷಣ ಒದಗಿಸುವಂತದ್ದಾಗಿರಬೇಕು. ಇದು ಈಗ ದೇಶಾದ್ಯಂತ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಡೆಯುತ್ತಿರುವಂತಹ ಉಚ್ಚಾಟನೆಗಳಿಂದ ಜನಗಳಿಗೆ ರಕ್ಷಣೆಯನ್ನೂ ಕೊಡಬೇಕು. ನವ-ಉದಾರವಾದದ ಒಂದು ಮುಖ್ಯ ಲಕ್ಷಣವೆಂದರೆ ಬಂಡವಾಳ ಶೇಖರಣೆಗೆ ಹೊಸ-ಹೊಸ ಮಾರ್ಗಗಳನ್ನು ಮೀಟಿ ತೆರೆಯುವುದು. ರೈತರ ಭೂಮಿಯನ್ನು ಅತ್ಯಂತ ಅಗ್ಗದರದಲ್ಲಿ ಸ್ವಾಧೀನ ಪಡಿಸಿಕೊಂಡು ಸೂಪರ್ ಲಾಭ ಗಳಿಸುವುದು ಇವುಗಳಲ್ಲೊಂದು. ಒಬ್ಬ ಅಮೆರಿಕನ್ ಬುದ್ಧಿಜೀವಿ ಹೇಳಿರುವಂತೆ 'ಉಚ್ಚಾಟನೆಯಿಂದ ಶೇಖರಣೆ' ಬಂಡವಾಳಶಾಹಿ ಅಭಿವೃದ್ಧಿಯ ಇತಿಹಾಸದಲ್ಲಿ ಹೊಸದೇನೂ ಅಲ್ಲ. 19ನೇ ಶತಮಾನದ ಕೈಗಾರಿಕಾ ಕ್ರಾಂತಿಯ ವೇಳೆಯಲ್ಲಿ ಯುರೋಪಿನ ಇಂತಹ ಉಚ್ಚಾಟಿತ ಜನರು 'ಮುಕ್ತ ಜಗತ್ತಿ'ನತ್ತ (ಅಮೆರಿಕಾ, ಆಸ್ಟ್ರೇಲಿಯ ಇತ್ಯಾದಿ) ಚಲಿಸಿದರು. ಆದರೆ ಈಗ ಉಚ್ಚಾಟನೆಗೊಂಡವರಿಗೆ ಅಂತಹ ದಾರಿಗಳಿಲ್ಲ, ಹೀಗೆ ಅವರಿಗೆ ಸಂಕಟಗಳೇ ಗತಿ. ಈಗ ಜಾರಿಯಲ್ಲಿರುವ 1894ರ ಓಬೀರಾಯನ ಕಾಲದ ಭೂಸ್ವಾಧೀನ ಕಾನೂನಿನ ಸ್ಥಾನದಲ್ಲಿ ಹೊಸದೊಂದು ಕಾನೂನು ಬೇಕೆಂದು ಎಡಪಕ್ಷಗಳು ಕೇಳುತ್ತಾ ಬಂದಿವೆ. ಈ ಕಾನೂನು ಮಾಜಿ ಜಮೀನು ಮಾಲಕರಿಗೆ ಸಾಕಷ್ಟು ಪರಿಹಾರ ಹಾಗೂ ಭವಿಷ್ಯದ ಉದ್ಯೋಗವನ್ನು ಒದಗಿಸಿ ಕೊಡುವುದಲ್ಲದೆ, ಸ್ವಾಧೀನದ ನಂತರ ಜಮೀನಿನ ಮೌಲ್ಯದಲ್ಲಿ ಏರಿಕೆಯ ಒಂದು ಪಾಲು ಕೂಡ ಅವರಿಗೆ ಸಿಗುವಂತೆ ಮಾಡಬೇಕು. ಅಲ್ಲದೆ, ಈ ಜನಗಳಿಗೆ ಅತಿ ಅಗ್ಗದಲ್ಲಿ ತಮ್ಮ ಜಮೀನನ್ನು ಮಾರುವಂತೆ ಭೂಮಾಫಿಯಾ ಮತ್ತು ರಿಯಲ್ ಎಸ್ಟೇಟ್ ಮಾಫಿಯಾಗಳು ಬಲವಂತ ಮಾಡಲಾರದಂತೆ ಕಾನೂನಿನ ರಕ್ಷಣೆ ಕೊಡಬೇಕು.

ಅಸಂಬದ್ಧ ರಾಗ

ಆದರೆ ನಮ್ಮ ಬಳಿ ಒಂದು ಸಮಗ್ರ ಆಹಾರ ಭದ್ರತಾ ಶಾಸನವನ್ನು ತರಲಾಗಲೀ, ಶಿಕ್ಷಣದ ಹಕ್ಕನ್ನು ಆಚರಣೆಗೆ ತರಲಾಗಲೀ ಸಾಕಷ್ಟು ಸಂಪನ್ಮೂಲಗಳಿಲ್ಲ ಎಂದೇ ಸರಕಾರ ರಾಗ ಹಾಕುತ್ತಿರುತ್ತದೆ. ಈ ರಾಗ ನವ-ಉದಾರವಾದೀ ದಿಕ್ಪಥವೇ ಬೃಹತ್ ಹಗರಣಗಳಿಗೆ ದಾರಿ ಮಾಡಿ ಕೊಟ್ಟಿರುವ ಹಿನ್ನೆಲೆಯಲ್ಲಿ ಅಸಂಬದ್ಧವೆನಿಸುತ್ತದೆ, ಒಂದು ಸುಳ್ಳಾಗಿ ಕಾಣುತ್ತದೆ. ನಮ್ಮ ದೇಶದಲ್ಲಿ ಸಂಪನ್ಮೂಲಗಳಿಗೇನೂ ಕೊರತೆಯಿಲ್ಲ. ಈ ಸಂಪನ್ಮೂಲಗಳನ್ನು ಲೂಟಿ ಹೊಡೆಯುತ್ತಿರುವ ರಾಜಕಾರಣಿ-ಅಧಿಕಾರಶಾಹಿ-ವ್ಯಾಪಾರಿ-ಕಾರ್ಪೊರೇಟ್ ಮಾಧ್ಯಮಗಳ ದುಷ್ಟಕೂಟವನ್ನು ಎದುರಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮಾತ್ರ ಎದ್ದು ಕಾಣುತ್ತಿದೆ.

ನಮ್ಮ ಜನಗಳಿಗೆ ಒಂದು ಉತ್ತಮ ಬದುಕನ್ನು ಒದಗಿಸುವ ಸುಧಾರಣೆಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು, 'ಜೆನ್ ನೆಕ್ಸ್ಟ್' (ಮುಂದಿನ ತಲೆಮಾರಿನ) ಎಂದು ಷೋಕಿಯ ಹೆಸರಿಟ್ಟಿರುವ ಸುಧಾರಣೆಗಳನ್ನು ತರಬೇಕೆಂದು ಹುಯಿಲೆಬ್ಬಿಸಲಾಗುತ್ತಿದೆ. ಉದಾಹರಣೆಗೆ, ಚಿಲ್ಲರೆ ವ್ಯಾಪಾರದಲ್ಲಿ 100 ಶೇಕಡಾ ವಿದೇಶಿ ಹೂಡಿಕೆಗೆ ಅವಕಾಶ ಕೊಡಿ ಎಂಬೊಂದು ಬೊಬ್ಬೆ. ಈಗ ಈ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಕೋಟ್ಯಂತರ ಭಾರತೀಯ ಜನಗಳ ಬದುಕನ್ನು ನಾಶಗೊಳಿಸುವ ಕ್ರಮ ಇದು. ಈ ಸುಧಾರಣೆಗಳು ಸಾಮಾಜಿಕ-ಆರ್ಥಿಕ ಸಬಲೀಕರಣವನ್ನು ತರುವ ಬದಲು ಇನ್ನಷ್ಟು ವಂಚನೆಗಳಿಗೆ ದಾರಿ ಮಾಡಿಕೊಡುವಂತವುಗಳು.

ಆದ್ದರಿಂದ, ಈಗ ಜನತೆ, ಈ ನವ-ಉದಾರವಾದಿ ದಿಕ್ಪಥದಿಂದ ಸಂಪೂರ್ಣವಾಗಿ ಭಿನ್ನವಾದ ದಾರಿ ಹಿಡಿಯುವಂತೆ ಯುಪಿಎ-2 ಸರಕಾರದ ಮೇಲೆ ಒತ್ತಡವನ್ನು ಹೆಚ್ಚಿಸಬೇಕಾಗಿದೆ. ಭಾರತೀಯ ಜನತೆ ತಮ್ಮ ನಿಜವಾದ ಸಾಮರ್ಥ್ಯವನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಬೇಕಾದರೆ, ಇದಕ್ಕೆ ಅವಕಾಶವನ್ನು ನಿರಾಕರಿಸುತ್ತಿರುವ, ಅಸಮಾನತೆಗಳನ್ನು ತೀವ್ರವಾಗಿ ಹೆಚ್ಚಿಸುತ್ತಿರುವ ಮತ್ತು ನಮ್ಮ ದೇಶದ ಸಂಪನ್ಮೂಲಗಳ ಲೂಟಿಗೆ ಪ್ರೋತ್ಸಾಹ ನೀಡುತ್ತಿರುವ ಸುಧಾರಣೆಗಳ ದಾರಿಯನ್ನು ಬಿಡಲೇಬೇಕು.

ವರ್ತಮಾನ

1

ಹರೆಯದ ಹುಡುಗನ
ಹೆಣವನ್ನು
ಮುದುಕ-ಮುದುಕಿ
ತಳ್ಳುವ ಗಾಡಿಯಲ್ಲಿಟ್ಟು ಮಸಣದತ್ತ ಹೆಜ್ಜೆ
ಹಾಕುತ್ತಿದ್ದಾರೆ.

2

ಸಂಡೂರಿನ ಸಾಲಿಗುಡಿಯಲ್ಲಿ
ಭೂಗೋಳದ ಮೇಷ್ಟ್ರು
ಮರುಭೂಮಿಯ ಪಾಠ
ಹೇಳುತ್ತಿದ್ದಾರೆ..........
ಮಕ್ಕಳು
ಹೊರಗೆ ಹೋಗುತ್ತಿದ್ದಾರೆ.

ಬಿ. ಶ್ರೀನಿವಾಸ್,
ಹಾವೇರಿ

ಭಾರತ ಸ್ವತಂತ್ರವಾದ ಮೇಲೆ ಕಂಡಂತಹ ಪ್ರಮುಖ ಹಗರಣಗಳ ಪಟ್ಟಿಯಿದು

(ಭ್ರಷ್ಟಾಚಾರದ ಪ್ರಮಾಣ-ಕೋಟಿ ರೂ.ಗಳಲ್ಲಿ)

ಹಗರಣ	ವರ್ಷ	ಪ್ರಮಾಣ
1948–1991		
ಮುಂಧ್ರಾ	1957	1.2
ಧರ್ಮತೇಜ ಸಾಲ	1960	22.0
ಕೈರೋಂ(ಪಂಜಾಬ್‌ಸಿಎಂ) 1963		
ಬಿಜುಪಟ್ನೈಕ್(ಒರಿಸ್ಸಾ ಸಿಎಂ)1963		
ಕುವೊ ತೈಲ ವ್ಯವಹಾರ	1978	2.2
ಅಂತುಳೆ ಟ್ರಸ್ಟ್	1981	30.0
ಸಬ್‌ಮೆರಿನ್ ಕಮಿಶನ್	1987	20.0
ಬೊಫೋರ್ಸ್ ಲಂಚ	1987	64.0
1991–1998		
ಹರ್ಷದ್ ಮೆಹ್ತ ಸೆಕ್ಯುರಿಟೀಸ್	1992	5,000
ಇಂಡಿಯನ್ ಬ್ಯಾಂಕ್	1992	1,300
ಸಕ್ಕರೆ ಆಮದು	1994	550
ಓಟಿಗಾಗಿ ನೋಟು-1	1995	
ಎಂಎಸ್ ಶೂಸ್ ಶೇರುಬೆಲೆ	1994	699
ಬಿಹಾರ್ ಮೇವು	1996	950
ಯೂರಿಯ ಆಮದು	1996	133
ಹವಾಲ ಜೈನ್ ಡೈರಿ	1996	
ಭನಗಸಾಲಿ ಪಿರಮಿಡ್	1997	1,000
ಹರ್ಷದ್ ಮೆಹ್ತ ಶೇರುಬೆಲೆ	1997	
ಟೆಲಿಕಾಂ-ಸುಖರಾಂ	1997	1,500
ಕಂಪನಿ ಮಾಯ-ಐಪಿಓ	1997	330
ಟೀಕ್ ಪ್ಲಾಂಟೇಶನ್	1997	2,600
1999–2004		
ಟೆಲಿಕಾಂ-ಮೊಬೈಲ್ ಲೈಸೆನ್ಸ್	1999	46,000
ಮಾಡರ್ನ್‌ಫುಡ್ ಖಾಸಗೀಕರಣ	2000	2,050
ಬಾಲ್ಕೊ ಖಾಸಗೀಕರಣ	2001	4,050
ಕೇತನ್ ಪಾರೇಖ್ ಶೇರು	2001	1,250
ಯುಟಿಐ ಕುಸಿತ	2001	4800
ದಿನೇಶ್ ದಾಲ್ಮಿಯ	2001	595
ಶೇರು ಮಾರುಕಟ್ಟೆ ಕುಸಿತ	2001	1,15,000
ಗೋದಿ ಆಮದು	2003	10,000
ನೈಸ್‌ರಸ್ತೆ ಕಬಳಿಕೆ	2004	10,000
ಕರ್ನಾಟಕ ಭೂ ಕಬಳಿಕೆ-1	2004	1,550
2005–2011		
ಐಪಿಓ-ಡಿಮ್ಯಾಟ್	2005	146
ತಾಜ್ ಕಾರಿಡಾರ್	2006	175
ಸತ್ಯಂ ಕಂಪ್ಯೂಟರ್ಸ್	2008	10,000
ಸೇನಾ ರೇಶನ್ ಸೋರಿಕೆ	2008	5,000
ಅಕ್ಕಿ ಆಮದು	2009	2,500
ಮಧು ಕೋಡ ಗಣಿ ಲೀಸ್)	2009	4,000
ಒರಿಸ್ಸಾ ಗಣಿ ಲೀಸ್	2009	7,000
ಕರ್ನಾಟಕ ಗಣಿ ಅಕ್ರಮ	2009	22,000
ಕರ್ನಾಟಕ ಭೂಹಗರಣ-2	2009	5,800
ಓಟಿಗಾಗಿ ನೋಟು-2	2009	
ಕಾಮನ್ವೆಲ್ತ್ ಕ್ರೀಡಾ ಲೂಟಿ	2010	58,000
2 ಜಿ ತರಂಗಾಂತರ	2010	1,76,000
ಹಸನ್ ಅಲಿ ತೆರಿಗೆ ವಂಚನೆ	2011	89,000
ಆದರ್ಶ ಹೌಸಿಂಗ್	2011	



ಮಾಜಿ ಮುಖ್ಯಮಂತ್ರಿಗಳನ್ನು ಬಂಧಿಸಿ ಜೈಲಿಗೆ ಕಳಿಸಿದಾಗ ಅವರ ಕುಕೃತ್ಯಗಳನ್ನು ಬಹಿರಂಗವಾಗಿ ಸಮರ್ಥಿಸಿ ಕೊಳ್ಳುವುದು ಅವರ ಪಕ್ಷಕ್ಕೇ ಸಾಧ್ಯವಾಗಲಿಲ್ಲ. ಜನತೆ ಈ ಕೋಮುವಾದಿ ಪಕ್ಷದಿಂದ ಕೋಮು ಗಲಭೆಗಳನ್ನಲ್ಲದೆ ಬೇರೆನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಸ್ವತ: ನಿಶ್ಚೇಷ್ಟಿತಗೊಂಡಿದೆ. ಹತ್ತು ಹಲವು ಹಗರಣಗಳ ನಡುವೆ ಸರ್ಕಾರ ನಡೆಸುತ್ತಿರುವ ಒಂದು ಪಕ್ಷದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಅಣ್ಣಾ ತಂಡ ಜನಗಳನ್ನು ವಂಚಿಸುವ ವಿಷಯದಲ್ಲಿ ತಾವೇನೂ ಉತ್ತಮರಲ್ಲ ಎಂದು ತೋರಿಸಿಕೊಂಡಿದೆ. ಇವೆಲ್ಲಕ್ಕೆ ವ್ಯತಿರಿಕ್ತವಾಗಿ ವಿಶ್ವಾದ್ಯಂತ 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ'ಯಂತಹ 86 ದೇಶಗಳಲ್ಲಿ ನಡೆಯುತ್ತಿರುವ ಆಂದೋಲನಗಳು ಜನಗಳನ್ನು ಆಕರ್ಷಿಸುವ ಅಪಾರ ಸಾಧ್ಯತೆಗಳಿವ

ಕರ್ನಾಟಕದ ರಾಜಕೀಯಕ್ಕೆ ಹೊಸ ತಿರುವು ಬೇಕಾಗಿದೆ


ವಿ ಜೆ ಕೆ ನಾಯರ್
ಕಾರ್ಯದರ್ಶಿ, ಸಿಪಿಐ(ಎಂ) ರಾಜ್ಯ ಸಮಿತಿ

ಕರ್ನಾಟಕದ ರಾಜಕೀಯದಲ್ಲಿನ ಇತ್ತೀಚಿನ ಬೆಳವಣಿಗೆಗಳು ಯೆಡಿಯೂರಪ್ಪ ಆಳ್ವಿಕೆಯಲ್ಲಿ ನಿರ್ಮಾಣವಾಗಿರುವ ಹೊಲಸಿನ ದರ್ಶನ ನೀಡುತ್ತಿವೆ. ಸಾಮಾನ್ಯವಾಗಿ ರಾಜಕೀಯ ಎಂಬುದು ಜನತೆಗೆ ರಾಜಕೀಯ ಪಕ್ಷಗಳ ವಚನಗಳಿಗೆ ಸಂಬಂಧಪಟ್ಟಿರುತ್ತದೆ. ಆದರೆ ಯೆಡಿಯೂರಪ್ಪ ಆಳ್ವಿಕೆಯಲ್ಲಿ ಜನತೆಗೆ ನೀಡಿರುವ ವಚನಗಳನ್ನು ಅವರು ಮತ್ತು ಅವರ ಪಕ್ಷ ಮರೆತೇ ಬಿಟ್ಟಿದ್ದಾರೆ. ಜನರಿಗೆ ಕೆ.ಜಿ.ಗೆ 2ರೂ.ನಲ್ಲಿ ಅಕ್ಕಿ ಕೊಡುವ ವಚನದೊಂದಿಗೆ ಅವರು ಅಧಿಕಾರಕ್ಕೆ ಬಂದರು. ಈ ವಚನದ ಪಾಲನೆ ಯಾವಾಗ ಎಂದು ಯೆಡಿಯೂರಪ್ಪನವರನ್ನು ಕೇಳಿದಾಗ ಐದು ವರ್ಷ ಕೊನೆಯಾಗುವುದರೊಳಗೆ ಎಂದರಂತೆ. ಈಗ, ಆ ವಚನವನ್ನು ಈಡೇರಿಸಲು ಅವರು ಮುಖ್ಯಮಂತ್ರಿಗಳಾಗಿಯೇ ಉಳಿದಿಲ್ಲ.

ಲೋಕಾಯುಕ್ತ ವರದಿ ಅವರ ಮೇಲೆ ದೋಷಾರೋಪಣೆ ಮಾಡಿದ ನಂತರ ರಾಜೀನಾಮೆ ಕೊಡಲೇ ಬೇಕಾಗಿ ಬಂದಾಗ, ಅವರು, ಗೆಲುವಿನ ಸಂಕೇತ ಪ್ರದರ್ಶಿಸುತ್ತ ಇನ್ನು ಆರು ತಿಂಗಳಲ್ಲಿ ಅಧಿಕಾರಕ್ಕೆ ಮರಳುವುದಾಗಿ ಭರವಸೆ ನೀಡಿದ್ದರು. ಅದಾಗಿ ಎರಡು ತಿಂಗಳು ಮುಗಿಯುವಷ್ಟರಲ್ಲಿ ಆ ನಿರೀಕ್ಷೆಯನ್ನು ಈಡೇರಿಸುವತ್ತ ಸಾಗಿಲ್ಲ, ಅಷ್ಟೇ ಅಲ್ಲ, ಅವರು ತಮ್ಮ ಕೆಲವು ಸಂಪುಟ ಸಹಯೋಗಿಗಳೊಂದಿಗೆ ಜೈಲಿನಲ್ಲಿ ಕಳೆಯಬೇಕಾಗಿ ಬಂದಿದೆ. ಬಳ್ಳಾರಿಯ ನೆಲೆ ಜನಾರ್ಧನ ರೆಡ್ಡಿಯ ಬಂಧನದೊಂದಿಗೆ ಮತ್ತು ಶ್ರೀರಾಮುಲು ಒಡ್ಡಿರುವ ಸವಾಲಿನೊಂದಿಗೆ ಮುರಿದಿರುವಂತೆ ಕಾಣುತ್ತಿದೆ. ಅಲ್ಲದೆ ಸಂಪುಟದ ಮಂತ್ರಿಗಳಾಗಿದ್ದ ಕಟ್ಟಾ ಸುಬ್ರಮಣ್ಯ ನಾಯ್ಡು, ಕೃಷ್ಣಯ್ಯ ಶೆಟ್ಟಿ ಕೂಡ ಜೈಲು ಸೇರಬೇಕಾಯಿತು. ಗೃಹಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳು ಜೈಲು ಸೇರಿಸುವ ಸಂಬಂಧಪಟ್ಟ ಕೋರ್ಟ್ ಆದೇಶಗಳ ದಿನವನ್ನು ಎಣಿಸುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿಗಳ ನಿರೀಕ್ಷೆಗೆ ವ್ಯತಿರಿಕ್ತವಾಗಿ ಅವರನ್ನು ಬಂಧಿಸಿ ಜೈಲಿಗೆ ಕಳಿಸಿದಾಗ ಅವರ ಜನಗಳಿಂದಲೂ ಏನೂ ಪ್ರತಿಕ್ರಿಯೆ ಕಾಣಲಿಲ್ಲ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಒಂದು

ರಾಜಕೀಯ ಪಕ್ಷ ಬೀದಿಗಿಳಿದು ತನ್ನ ಆಕ್ರೋಶವನ್ನು ಪ್ರದರ್ಶಿಸುತ್ತಿತ್ತು. ಆದರೆ ಯೆಡಿಯೂರಪ್ಪನವರ ವಿಷಯದಲ್ಲಿ ಹಾಗಾಗಲಿಲ್ಲ. ಅಂದರೆ ಅವರ ಕುಕೃತ್ಯಗಳನ್ನು ಬಹಿರಂಗವಾಗಿ ಸಮರ್ಥಿಸಿ ಕೊಳ್ಳುವುದು ಅವರ ಪಕ್ಷಕ್ಕೇ ಸಾಧ್ಯವಾಗಲಿಲ್ಲ ಎಂಬುದನನ್ನಿದು ಸಾಬೀತು ಮಾಡುತ್ತದೆ.



ಅವರ ಅಖಿಲ ಭಾರತ ಮುಖಂಡ ಶ್ರೀಯುತ ಎಲ್.ಕೆ.ಅಡ್ವಾಣಿ ಕರ್ನಾಟಕದೊಳಗೆ ಜಾತಾವನ್ನು ಕೈಬಿಡಲಿಲ್ಲ. ಜನಜಾಗೃತಿ ಜಾಥಾದ ಸಂಘಟಕರು ಏನೂ ಆಗದವರಂತೆ ನಟಿಸಿದರು. ಜನತೆ ಈ ಕೋಮುವಾದಿ ಪಕ್ಷದಿಂದ ಕೋಮು ಗಲಭೆಗಳನ್ನಲ್ಲದೆ ಬೇರೆನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಇಂತಹ ಪ್ರಯತ್ನಗಳು ಕ್ರೈಸ್ತ ಸಂಸ್ಥೆಗಳ ಮೇಲಿನ ದಾಳಿಗಳಲ್ಲಿ ಮತ್ತೆ ಕಾಣಬಂದಿವೆ. ಬಕ್ರೀದ್ ಮೊದಲು ಪ್ರಾಣಿ ಸಾಗಾಣಿಕೆದಾರರ ಮೇಲಿನ ದಾಳಿ ಕೂಡ ಈ ವಿಧಕ್ಕೇ ಸೇರಿದ್ದು. ತಾವು ಪ್ರಾಣಿದಯಾ ಸಂಘದವರು ಎಂದು ಹೇಳಿಕೊಂಡ ಮಂದಿ ಒಬ್ಬ ಮನುಷ್ಯನ ಮೇಲೆ ದಯೆ ತೋರಿಸಲಿಲ್ಲ, ಪ್ರಾಣಿಗಳನ್ನು ಸಾಗಿಸುತ್ತಿದ್ದ ವ್ಯಾನಿನ ಚಾಲಕನನ್ನು ನಿರ್ದಯವಾಗಿ ಕೊಂದು ಬಿಟ್ಟರು.

ಜನತೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಾಣದೆ ಕಂಗಾಲಾಗಿದ್ದಾರೆ. ಬೆಲೆಯೇರಿಕೆ, ವಿದ್ಯುತ್ ಅಭಾವ, ಕೃಷಿ ಬಿಕ್ಕಟ್ಟು, ರೇಶ್ಮೆ ಬೆಳೆಗಾರರ ಆತ್ಮಹತ್ಯೆಗಳು, ರೇಶ್ಮೆ ಗೂಡು ಬೆಳೆಸುವವರ ಪ್ರತಿಭಟನೆಗಳು, ನಾಗರಿಕ ಸೌಲಭ್ಯಗಳ ಅಭಾವ, ರಸ್ತೆಗಳ ದುರವಸ್ಥೆ, ಅದೂ ಬೃಹತ್ ಬೆಂಗಳೂರು ಪ್ರದೇಶದಲ್ಲಿ, ಸಣ್ಣ ಕೆಲಸಗಳಿಗೂ ಭ್ರಷ್ಟಾಚಾರದ ತಾಂಡವ, ಇವೆಲ್ಲ ಜನಗಳ ಪ್ರಶ್ನೆಗಳನ್ನು ಇತ್ಯರ್ಥ ಮಾಡುವ ಬಗ್ಗೆ ಮುಂದುವರೆಯುತ್ತಿರುವ ನಿರ್ಲಕ್ಷ್ಯದ ಅಭಿವ್ಯಕ್ತಿಗಳು. ಬಿಜೆಪಿಯ ವಿಫಲತೆಗಳ ಲಾಭ ಪಡೆಯಲು ಪ್ರಯತ್ನ ನಡೆಸಿ, ಅದಕ್ಕಾಗಿ ಬೆಂಗಳೂರಿನಿಂದ ಬಳ್ಳಾರಿ ವರೆಗಿನ ಜಾಥಾ ಎಂಬ ದೊಡ್ಡ ತಮಾಷೆ ಏರ್ಪಡಿಸಿದ ಕಾಂಗ್ರೆಸ್ ಸ್ವತಃ ನಿಶ್ಚೇಷ್ಟಿತಗೊಂಡಿದೆ. ಹತ್ತು ಹಲವು ಹಗರಣಗಳ ನಡುವೆ ಸರ್ಕಾರ ನಡೆಸುತ್ತಿರುವ ಒಂದು ಪಕ್ಷದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?

ಕರ್ನಾಟಕದಲ್ಲಿ ಮೂರು ವರ್ಷಗಳ ಹಿಂದೆ ಬಿಜೆಪಿ ಅಧಿಕಾರಕ್ಕೆ ಬಂದದ್ದು ಬಹಳಷ್ಟು ನಿರೀಕ್ಷೆಗಳೊಂದಿಗೆ: ಇದು ದಕ್ಷಿಣ ಭಾರತದಲ್ಲಿ ತನ್ನ ಅಧಿಕಾರದ ಹೆಬ್ಬಾಗಿಲು ಎಂದು ಅದು ಸಾರಿತ್ತು. ಮೂರು ವರ್ಷಗಳ ನಂತರ ಅದೀಗ ಅವರಿಗೆ ಪರಪ್ಪನ ಅಗ್ರಹಾರಕ್ಕೆ ಹೆಬ್ಬಾಗಿಲು, ದಕ್ಷಿಣ ಭಾರತದ ರಾಜಕಾರಣಿಗಳಿಗೂ ಹೆಬ್ಬಾಗಿಲಾಗಿ ಕೆಲಸ ಮಾಡುತ್ತಿದೆ.

ಈ ನವಂಬರ್ ತಿಂಗಳಲ್ಲಿ, ಸಾಮಾನ್ಯವಾಗಿ ಸದಾ ರಾಜ್ಯೋತ್ಸವ ಸಮಾರಂಭಗಳು ತುಂಬಿ ತುಳುಕುತ್ತಿರಬೇಕಾದ ಸಮಯದಲ್ಲಿ ಅವುಗಳ ಸಂಖ್ಯೆ ಇಳಿದಿರುವುದು ಒಂದು ಸೂಕ್ಷ್ಮವಾದ ಮತ್ತು ಖಂಡಿತವಾಗಿ ಕಾಣ ಬರುತ್ತಿರುವ ಸಂಗತಿ. ಇಂತಹ ಸಮಾರಂಭಗಳನ್ನು ಏರ್ಪಡಿಸುವ ಶಕ್ತಿಗಳು ರಕ್ಷಣಾತ್ಮಕವಾಗಿ ವರ್ತಿಸುತ್ತಿರುವುದನ್ನು ನಾವು ಕಾಣ ಬಹುದಾಗಿದೆ.

'ನಾನು ಅಣ್ಣಾ' ಎಂಬ ಆಂದೋಲನವನ್ನು ಬೆಂಗಳೂರಿನಲ್ಲಿ ಯಾವ ಹುಮ್ಮಸ್ಸಿನಿಂದ ಹರಡಿಸುವ ಪ್ರಯತ್ನ ನಡೆಯಿತೋ ಅದೀಗ ತಣ್ಣಗಾಗುತ್ತಿರುವಂತೆ ಕಾಣುತ್ತಿದೆ. ಏಕೆಂದರೆ, ಅಣ್ಣಾ ತಂಡ ಜನಗಳನ್ನು ವಂಚಿಸುವ ವಿಷಯದಲ್ಲಿ ತಾವೇನೂ ಉತ್ತಮರಲ್ಲ ಎಂದು ತೋರಿಸಿಕೊಂಡಿದೆ.

ಇವೆಲ್ಲಕ್ಕೆ ವ್ಯತಿರಿಕ್ತವಾಗಿ ವಿಶ್ವಾದ್ಯಂತ 'ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳಿ'ಯಂತಹ 86 ದೇಶಗಳಲ್ಲಿ ನಡೆಯುತ್ತಿರುವ ಆಂದೋಲನಗಳು ಜನಗಳನ್ನು ಆಕರ್ಷಿಸುವ ಅಪಾರ ಸಾಧ್ಯತೆಗಳಿವೆ. ಕರ್ನಾಟಕದ ರಾಜಕೀಯ ತನ್ನ ಜನತೆಯ ಹಿತದೃಷ್ಟಿಯಿಂದ ಒಂದು ಹೊಸ ತಿರುವು ತೆಗೆದುಕೊಳ್ಳಬೇಕಾಗಿದೆ.






ವಿಶ್ವದ ಅತಿ ದೊಡ್ಡ ಶೇರು ಮಾರುಕಟ್ಟೆಯಿರುವ ನ್ಯೂಯಾರ್ಕ್ ನಗರದ ವಾಲ್ ಸ್ಟ್ರೀಟನ್ನು ವಶಪಡಿಸಿಕೊಳ್ಳಿ ಎಂದು ಕರೆ ನೀಡುವುದರೊಂದಿಗೆ ಆ ನಗರದಲ್ಲಿ ಆರಂಭವಾಗಿ, ನಂತರ ಅಮೆರಿಕಾದ ಮತ್ತು ಯುರೋಪಿನ ಇತರ 85 ನಗರಗಳಿಗೆ ಹಬ್ಬಿರುವಚಿ ಆಂದೋಲನದ ಮೂರು ಲಕ್ಷಣಗಳು ಅದನ್ನು ಒಂದು ಗಮನಾರ್ಹ ಆಂದೋಲನವಾಗಿಸಿವೆ ಎನ್ನುತ್ತಾರೆ ಪ್ರಸಿದ್ಧ ಆರ್ಥಿಕ ತಜ್ಞ, ಪ್ರೊ. ಪ್ರಭಾತ್ ಪಟ್ನಾಯಕ್.

ಭಾರತದ ಭ್ರಷ್ಟಾಚಾರ-ವಿರೋಧಿ ಆಂದೋಲನ ಮತ್ತು ಅಮೆರಿಕಾದ ವಾಲ್‌ಸ್ಟ್ರೀಟ್-ವಿರೋಧಿ ಆಂದೋಲನ

ಮೊದಲನೆಯದ್ದು, ಅದು ಬಂಡವಾಳಶಾಹಿಯೊಳಗೇ ಯಾವುದೋ ಒಂದು ಬೇಡಿಕೆಯನ್ನೆತ್ತದೆ, ಆ ಇಡೀ ವ್ಯವಸ್ಥೆಯನ್ನೇ ತಿರಸ್ಕರಿಸುತ್ತಿದೆ, ಎರಡನೆಯದಾಗಿ ಅದು "ನೈತಿಕತೆ"ಯ ಮೇಲೆಯೇ ನಿಂತಿರದೆ ಅದರಾಚೆಗೆ ಹೋಗಿ "ಆಸ್ತಿ"ಯ ಪ್ರಶ್ನೆಯನ್ನು ಎತ್ತಿಕೊಂಡಿದೆ ಮತ್ತು ಮೂರನೆಯದಾಗಿ, ಸರಕಾರಗಳ, ಪ್ರಭುತ್ವಗಳ ಆಚೆಗೆ ಹೋಗಿ, ಅವೆಲ್ಲವುಗಳ ಹಿಂದಿರುವ ಹಣಕಾಸು ಬಂಡವಾಳದ ಮೇಲೆಯೇ ದಾಳಿ ನಡೆಸಿದೆ.

ಈ ಲೇಖನದಲ್ಲಿ, ಮೇಲೆ ಹೇಳಿದ ಎರಡನೇ ಅಂಶಕ್ಕೆ ಸಂಬಂಧಪಟ್ಟಂತೆ, ನಮ್ಮಲ್ಲಿಯೂ ಇತ್ತೀಚೆಗೆ ಬಹಳಷ್ಟು ಗಮನ ಸೆಳೆದಿರುವ ಭ್ರಷ್ಟಾಚಾರ-ವಿರೋಧಿ ಆಂದೋಲನದೊಂದಿಗೆ ಈ ಜಾಗತಿಕ ಅಂದೋಲನವನ್ನು ಹೋಲಿಸಿ ನೋಡಿದೆಯಾದ್ದರಿಂದ, ಅದಕ್ಕೆ ಸಂಬಂಧಪಟ್ಟ ಆ ಲೇಖನದ ಭಾಗದ ಅನುವಾದವನ್ನು ಇಲ್ಲಿ ಕೊಡುತ್ತಿದ್ದೇವೆ.



'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಆಂದೋಲನದ ಒಂದು ವಿಶಿಷ್ಟ ಲಕ್ಷಣವೆಂದರೆ ಅದು ತನ್ನನ್ನು ಕೇವಲ 'ನೈತಿಕತೆ'ಯ ಪ್ರಶ್ನೆಗೇ ಸೀಮಿತಗೊಳಿಸಿಕೊಳ್ಳದೆ ಅದರಾಚೆಗೆ 'ಆಸ್ತಿ'ಯ ಪ್ರಶ್ನೆಗೆ ಹೋಗಿದೆ. 'ವಾಲ್ ಸ್ಟ್ರೀಟ್'ನ್ನು ಆಕ್ರಮಿಸಿಕೊಳ್ಳಲಾಗಿದೆ ಎಂಬ ಸಂಗತಿಯೇ ಹಣಕಾಸು ಬಂಡವಾಳದ ಮೇಲೆ ದಾಳಿ ನಡೆಸಲಾಗಿದೆ ಎಂಬುದರ ಸಂಕೇತ. ನಿಜ, ಹಣಕಾಸು ಬಂಡವಾಳದ ಮೇಲೆ ದಾಳಿಯೆಂದರೆ ಒಟ್ಟು ಬಂಡವಾಳಶಾಹಿಯ ಮೇಲಿನ ದಾಳಿಯೇಂದೇನಲ್ಲ. ಆದರೆ ಸಮಕಾಲೀನ ಹಣಕಾಸು ಬಂಡವಾಳ ಬಂಡವಾಳಶಾಹಿಯ ಬೆಳವಣಿಗೆಯ ಅತ್ಯುನ್ನತ ಸ್ವರೂಪವಾದ್ದರಿಂದ ಅದರ ಮೇಲಿನ ದಾಳಿಯನ್ನು ಬಂಡವಾಳಶಾಹಿಯ ಮೇಲಿನ ದಾಳಿಯೆಂದೇ ಪರಿಗಣಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಹಣಕಾಸು ಬಂಡವಾಳದ ಮೇಲಿನ ದಾಳಿಯಲ್ಲಿಯೇ ಬಂಡವಾಳಶಾಹೀ ಆಸ್ತಿಯ ಆಚೆಗಿನ ಒಂದು ಹೊಸ ವ್ಯವಸ್ಥೆಯ ಭರವಸೆ ಅಡಗಿದೆ.

'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಆಂದೋಲನ "ನೈತಿಕತೆ"ಯನ್ನು ದಾಟಿ ಹೋಗಿದೆಯೆಂದರೆ ನೈತಿಕತೆಯ ಒಂದು ಸಂವೇದನೆ ಅಥವ ಸ್ಫೂರ್ತಿಯನ್ನು ಅದು ಹೊಂದಿಲ್ಲ ಎಂದೇನೂ ಅಲ್ಲ. ಅವೆರಡೂ ಅದರಲ್ಲಿ ಇವೆ, ಬಹಳ ಗಟ್ಟಿಯಾಗಿಯೇ ಇವೆ. ಈ ಆಂದೋಲನದಲ್ಲಿ ಹಿಂದಿನ ಆಂದೋಲನಗಳ ಏನಾದರೂ ಪ್ರತಿಧ್ವನಿ ಇರುವುದಾದರೆ, ಆ ದನಿಗಳು ಮಾರ್ಟಿನ್ ಲೂಥರ್ ಕಿಂಗ್ ಮತ್ತು ಮಹಾತ್ಮ ಗಾಂಧಿಯದ್ದು. ಕಿಂಗ್ ಆಗಲೀ, ಗಾಂಧೀಜಿಯಾಗಲಿ ಬಂಡವಾಳಶಾಹಿ ಆಸ್ತಿಯ ಪ್ರಶ್ನೆಯನ್ನು ಅಜೆಂಡಾದಲ್ಲಿ ತಂದಿರಲಿಲ್ಲ, ಆದರೆ ಈ ಆಂದೋಲನ ಅದನ್ನು ತಂದಿದೆ; ಆ ಆಂದೋಲನಗಳ ಪರಂಪರೆಯನ್ನು ಉದ್ಧರಿಸುತ್ತಾ ಅದು ಮಾಡಿರುವುದು ಇದನ್ನೇ.

"ನೈತಿಕತೆ"ಯನ್ನು ದಾಟಿ "ಆಸ್ತಿ"ಗೆ ಹೋಗುವ ಅಂಶವನ್ನು ನಮ್ಮ ದೇಶದ ಭ್ರಷ್ಟಾಚಾರ-ವಿರೋಧಿ ಆಂದೋಲನದ ಉದಾಹರಣೆಯ ಮೂಲಕ ಅರಿತುಕೊಳ್ಳಬಹುದು. ಭ್ರಷ್ಟಾಚಾರ ಎಂದಾಗ 2ಜಿ ಹಗರಣದಲ್ಲಿ ಮತ್ತು ಒಂದು ಕಡತವನ್ನು ಮುಂದೆ ತಳ್ಳಲು 50ರೂ. ಲಂಚ ಕೇಳುವ ಒಬ್ಬ ಗುಮಾಸ್ತನಲ್ಲಿ ಭಾರತದ ಈ ಆಂದೋಲನಕ್ಕೆ ಕಾಣುವುದು ಕೇವಲ "ನೈತಿಕತೆ"ಯ ಪ್ರಶ್ನೆ, "ಆಸ್ತಿ"ಯ ಪ್ರಶ್ನೆಯಲ್ಲ. ಅಂದರೆ "ನೈತಿಕತೆ"ಯ ಬಗ್ಗೆ ಕಾಳಜಿ ತಪ್ಪೆಂದೇನಲ್ಲ, ಅಥವ 50ರೂ. ಲಂಚ ಕೇಳುವವನನ್ನು ಕ್ಷಮಿಸಬಹುದು ಎಂದೂ ಅಲ್ಲ, ಬದಲಿಗೆ, 50ರೂ. ಲಂಚ ಕೇಳುವುದು 2ಜಿ ಹಗರಣದ ಹಿಂದಿರುವ ಆಸ್ತಿ ಸಂಬಂಧಗಳ ಪರೋಕ್ಷ ಫಲಿತಾಂಶ ಎಂಬುದನ್ನು ಗಮನಿಸಬೇಕು, ಹಾಗೂ ನಾವು :"ನೈತಿಕತೆ"ಯ ಸಪಾಟಾದ ಮೇಲ್ಮೈಯ ಆಚೆಗೆ ಅದರ ಕೆಳಗಿರುವ ಆಸ್ತಿ ರಚನೆಗಳನ್ನು ನೋಡಬೇಕಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಎಲ್ಲರಿಗೂ ಒಂದು ಕನಿಷ್ಟ ಜೀವನಮಟ್ಟವಿರುವಂತೆ ಸಮಾಜವನ್ನು ಸಂಘಟಿಸಿದ್ದರೆ, 50ರೂ. ಲಂಚ ಕೇಳಲು ಉತ್ತೇಜನೆಯಿರುವುದಿಲ್ಲ; ಇಂತಹ ಸಮಾಜ ಬಂಡವಾಳಶಾಹಿ ಆಸ್ತಿಯ ಮೇಲೆ ನಿಂತಿರುವುದಿಲ್ಲವಾದ್ದರಿಂದ ಅಲ್ಲಿ 2ಜಿ ಹಗರಣ ಕೂಡ ಇರುವುದಿಲ್ಲ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, "ನೈತಿಕತೆ"ಯ ಆಚೆಗೆ "ಆಸ್ತಿ" ಪ್ರಶ್ನೆಗೆ ಹೋಗುವುದು ಅನೈತಿಕತೆಗೆ ನೀಡುವ ಆಹ್ವಾನವಲ್ಲ, ಬದಲಿಗೆ ಅದು ವಿಶ್ಲೇಷಣಾತ್ಮಕವಾಗಿರುವುದಕ್ಕೆ, ವೈಜ್ಞಾನಿಕವಾಗಿರುವುದಕ್ಕೆ ಒಂದು ಆಹ್ವಾನ. 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಆಂದೋಲನದ ಗಮನ ಸೆಳೆಯುವ ಸಂಗತಿಯೆಂದರೆ ಅದು "ನೈತಿಕತೆ"ಯ ಸ್ಫೂರ್ತಿಯಿಂದ ಹೊರಟಿದ್ದರೂ "ಆಸ್ತಿ" ಸಂಬಂಧಗಳು ಅದರ ಕಾಳಜಿ.

ಸಮಕಾಲೀನ ಭಾರತದಲ್ಲಿ ಅತ್ಯಂತ ಹೆಚ್ಚು ಗಮನ ಸೆಳೆದಿರುವ ಈ ಭ್ರಷ್ಟಾಚಾರ-ವಿರೋಧಿ ಆಂದೋಲನದ ಬೇಡಿಕೆಗಳು "ನೈತಿಕತೆ"ಯ ಮಟ್ಟದಲ್ಲೇ ಏಕೆ ಉಳಿದಿವೆ, ಅದು "ಆಸ್ತಿ" ಪ್ರಶ್ನೆಯ ಬಳಿ ತುಸುವಾದರೂ ಏಕೆ ಸುಳಿದಿಲ್ಲ, ಅತ್ತ ಅಮೆರಿಕಾದಲ್ಲಿ ಒಂದು ನೈತಿಕ ಗುರಿಯ ಆಂದೋಲನ, ಇಂತಹುದೇ (ಉದಾಹರಣೆಗೆ, ಮಹಾತ್ಮ ಗಾಂಧಿಯವರಿಂದ) ಸ್ಫೂರ್ತಿಯನ್ನು ಪಡೆದಿದ್ದರೂ, ನೇರವಾಗಿ "ಆಸ್ತಿ"ಯ ಪ್ರಶ್ನೆಗೆ ಹೋಗಿದೆಯೇಕೆ ಎಂಬುದು ಒಂದು ಚರ್ಚಾಸ್ಪದ ಅಂಶ. ಬಹುಶಃ ಇದಕ್ಕೆ ಉತ್ತರ ಈ ಎರಡು ದೇಶಗಳ ವಿಭಿನ್ನ ಆರ್ಥಿಕ ಯೋಗಗಳಲ್ಲಿದೆ, ಮಧ್ಯಮ ವರ್ಗಗಳಿಗೆ ಸಂಬಂಧಪಟ್ಟಂತೆಯಾದರೂ. ಅಮೆರಿಕಾದಲ್ಲಿ 1 ಶೇಕಡಾ ಮತ್ತು 99 ಶೇಕಡಾದ ನಡುವಿನ ಕಂದರದ ಪ್ರಶ್ನೆಯಿದೆ, ಅಲ್ಲಿ ಮಧ್ಯಮ ವರ್ಗಗಳೂ ಸೇರಿದಂತೆ ಎಲ್ಲ ಜನಸಮೂಹಗಳು ಬಿಕ್ಕಟ್ಟಿನಿಂದ ಸಂಕಟ ಪಡುತ್ತಿವೆ. ಆದರೆ ಇಲ್ಲಿ ಇತ್ತೀಚಿನ ಕಾಲಾವಧಿಯಲ್ಲಿ ಮಧ್ಯಮ ವರ್ಗಗಳ ಕೆಲವು ವಿಭಾಗಗಳೂ ಸೇರಿದಂತೆ ಒಂದು ಗಮನಾರ್ಹ ಭಾಗ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಇನ್ನು ಕೂಡ 1 ಶೇಕಡಾ ಮಂದಿಯ "ನೈತಿಕತೆ" ಪ್ರಶ್ನೆಗಿಂತ ಭಿನ್ನವಾಗಿ "ಆಸ್ತಿ" ಸಂಬಂಧಗಳನ್ನು ಪ್ರಶ್ನಿಸುವ ಆಸಕ್ತಿಯನ್ನು ತೋರಿಲ್ಲ.

ಶುಭಾಶಯಗಳೊಂದಿಗೆ

ಬಿಜಾಪುರ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ

ಸ್ಥಾಪನೆ : 1980–81

Ph: 08352 - 220356

ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳು

1. ಎಸ್. ಕೆ. ವ್ಹಿ. ಎಂ. ಎಸ್. ಪ. ಪೂ. ವಿದ್ಯಾಲಯ, ವಿಜಾಪೂರ.
2. ಎಂ. ಎ. ಕೆ. ಕಲಾ ಮತ್ತು ವಾಣಿಜ್ಯ ಹಾಗೂ ವಿಜ್ಞಾನ ಮಹಾ ವಿದ್ಯಾಲಯ, ವಿಜಾಪೂರ.
3. ಬಿ. ಡಿ. ಪಿ. ಎಚ್. ಡಬ್ಲ್ಯೂ. ಸಂಸ್ಥೆಯು ಕೈಗಾರಿಕಾ ತರಬೇತಿ ಕೇಂದ್ರ, ವಿಜಾಪೂರ.
4. ಎಂ. ಎ. ಕೆ. ಪ್ಯಾರಾ ಮೆಡಿಕಲ್ ಸಾಯನ್ಸ್ ಇನಸ್ಟಿಟ್ಯೂಟ, ವಿಜಾಪುರ.
5. ಶ್ರೀ ಯಲ್ಲಾಲಿಂಗ ಪ್ರೌಢ ಶಾಲೆ, ಮಿರಗಿ ತಾ॥ ಇಂಡಿ. ಜಿ॥ ವಿಜಾಪೂರ.
6. ವಿನಾಯಕ ಪ್ರಾಥಮಿಕ ಶಾಲೆ, ತಡವಲಗಾ ತಾ॥ ಇಂಡಿ ಜಿ॥ ವಿಜಾಪೂರ.
7. ಎಸ್. ಎಂ. ಕೆ. ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯ, ಇಂಡಿ ಜಿ॥ ವಿಜಾಪೂರ.
8. ಬಿ. ಡಿ. ಪಿ. ಎಚ್. ಡಬ್ಲ್ಯೂ. ಸಂಸ್ಥೆಯ ಉದ್ಯೋಗ ಮತ್ತು ಮಾರ್ಗದರ್ಶನ ಕೇಂದ್ರ, ವಿಜಾಪೂರ.
9. ಬಿ. ಡಿ. ಪಿ. ಎಚ್. ಎಂಪ್ಲಾಯಿಜ ವೆಲ್–ಫೇರ್ ಟ್ರಸ್ಟ್, ವಿಜಾಪೂರ.
10. ಎಂ. ಎಸ್. ಖೇಡ ಕರಸ್ಪಾಂಡನ್ಸ್ ಇನ್‌ಸ್ಟಿಟ್ಯೂಟ, ವಿಜಾಪೂರ.
11. ಖೇಡ ಪೂರ್ವ ಮತ್ತು ಪ್ರಾಥಮಿಕ ಶಾಲೆ, ವಿಜಾಪೂರ.
12. ಎಂ. ಎ. ಕೆ. ಸ್ನಾತಕೋತ್ತರ ಕೇಂದ್ರ (ಸಮಾಜಶಾಸ್ತ್ರ) ವಿಜಾಪೂರ.
13. ಸ್ವಾಮಿ ವಿವೇಕಾನಂದ ಯೋಗಾ ತರಬೇತಿ ಕೇಂದ್ರ ವಿಜಾಪೂರ.

ಅಧ್ಯಕ್ಷರು :
ಶ್ರೀ ಎಂ. ಎಸ್. ಖೇಡ .ಬಿ.ಕಾಂ


ಶುಭಾಶಯಗಳೊಂದಿಗೆ



ಶ್ರೀ ಅಶೋಕ ಎಂ. ಮನಗೂಳಿ

ಜನತಾದಳ (ಜಾತ್ಯತೀತ) ಪಕ್ಷದ ಮುಖಂಡರು.
ಸಿಂಧಗಿ ತಾಲ್ಲೂಕು ಬಿಜಾಪುರ ಜಿಲ್ಲೆ.

ಶುಭಾಶಯಗಳೊಂದಿಗೆ



Phone : 08254 - 271266

M/s. Prabhakirana Tiles

Manufacturers of
Roofing Tiles & Ridges, Hollow Bricks,
Flower Pots, Bonsai Pots,
Decorative Pots,
Inter Lock Tiles
& Manymore
Items



Farry Road, Gulvady - 576 283
Kundapura Tq., Udupi Dist.

ಕೃತಜ್ಞತೆಗಳು

- ಸಂಚಿಕೆಯ ಎಲ್ಲ ಲೇಖಕರು, ಸಂದರ್ಶಕರು, ಹಾಗೂ ಅನುವಾದಕರುಗಳಿಗೆ
- ಅಂದವಾದ ಮುಖಪುಟ ರಚಿಸಿ ಪುಟ ವಿನ್ಯಾಸಗೊಳಿಸಿದ ಎಂ.ರಾಮು, ಅಕ್ಷರ ಜೋಡಿಸಿದ ರವಿ, ಹೆಚ್.ಎಂ. ನಾಗರಾಜ್‌ಗೆ, ತ್ವರಿತವಾಗಿ ಮುದ್ರಿಸಿಕೊಟ್ಟ 'ಕ್ರಿಯಾ'ದ ಜಿ.ಚಂದ್ರಶೇಖರ್, ಸಂಚಿಕೆಯನ್ನು ಮೌಲ್ವಿಕವಾಗಿ ರೂಪುಗೊಳಿಸುವಲ್ಲಿ ಶ್ರಮಿಸಿದ ಆರ್.ರಾಮಕೃಷ್ಣ, ಎನ್.ಕೆ.ವೇದರಾಜ, ಕೆ.ಮಹಾಂತೇಶ್, ಮುದ್ರಣಾಲಯದ ಎಲ್ಲ ಕಾರ್ಮಿಕರುಗಳಿಗೆ,
- ವ್ಯಂಗ್ಯಚಿತ್ರಗಳನ್ನು ಬಳಸಿಕೊಳ್ಳಲಾಗಿರುವ ಹಿನ್ನೆಲೆಯಲ್ಲಿ- 'ಪ್ರಜಾವಾಣಿ', ಮತ್ತು 'ದಿ ಹಿಂದೂ' ಪತ್ರಿಕೆಗಳಿಗೆ ಹಾಗೂ ಸತೀಶ್ ಆಚಾರ್ಯ ಮತ್ತಿತರ ವ್ಯಂಗ್ಯಚಿತ್ರಕಾರರಿಗೆ
- ಜಾಹಿರಾತು ನೀಡಿ ಸಹಕರಿಸಿರುವ ಜಾಹಿರಾತು ದಾರರಿಗೆ, ಜಾಹಿರಾತು ಸಂಗ್ರಹ ಕಾರ್ಯದಲ್ಲಿ ಸಹಾಯ ಹಸ್ತ ಚಾಚಿದ ಎಲ್ಲ ಸಂಗಾತಿಗಳು, ಹಿತೈಷಿಗಳಿಗೆ.
- ಅಗತ್ಯ ಫೋಟೋಗಳನ್ನು ಒದಗಿಸಿ ಸಹಕರಿಸಿದ, 'ದೇಶಾಭಿಮಾನಿ'ಯ ಸಂಗಾತಿಗಳಿಗೆ, ಬಳ್ಳಾರಿಯ ಸಿ.ರಘುನಾಥರಿಗೆ

– ಸಂಪಾದಕ

Janashakthi Kannada vara patrike Nov 27, 2011 Price : Rs. 15/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

Janashakthi Kannada Vara Patrike: Printed by G.N.Nagaraj, No 12. 18th Cross, S.R.Nagar, BANGALORE-560027
Published by: G.N.Nagaraj, No 12. 18th Cross, S.R.Nagar, BANGALORE-560027, Karnataka on behalf of / owned by Communist Party of India (Marxist) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at Bangalore
No 12.18th Cross, S.R.Nagar, BANGALORE-560027 Editor S.Y.Gururshanth, No12. 18th Cross, S.R.Nagar, BANGALORE - 560027